ಸಂಕಲನ

ವರ್ಷ ೭

ಜುಲಾಯಿ ಆಗಸ್ಟ

೨೦೦೭

೭.೪

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ತಿಂಗಳಲ್ಲಿ ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಜುಲಾಯಿ + ಆಗಸ್ಟ್ ೨೦೦೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 6, Issue 4 : July + August 2007

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೩೪

ಸಂಪುಟ ೬, ಸಂಚಿಕೆ ೪ : ಜುಲಾಯಿ + ಆಗಸ್ಟ್ ೨೦೦೭

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮

ಸಿ. ಪ. : ೯೪೪೮೬ ೩೦೬೩೭, ಹೇಮಾ : ೯೪೪೮೮ ೬೧೬೦೪

•

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೨೦೦೫, ೨೦೦೬, ೨೦೦೭ ಈ ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಮೊಬೈಲ್ : ೯೯೮೦೩ ೮೧೮೬೯

ಸಂಕಲನ -೩೪ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. ಬೆಟ್ಟದಾ ಮೇಲೊಂದು ಮನೆಯ ಮಾಡಿ — ವಿಜಯಾ ಶ್ರೀಧರ್ ೬-೯

೩. ಒಂದು ನರಳಿಕೆ ಒಂದು ನಿಟ್ಟುಸಿರು — ಅಶೋಕ ಶೆಟ್ಟರ್ ೯-೧೦

೪. ಸುನೀತ ಪಂಚಕ — ಸಿ. ಪಿ. ಕೆ. ೧೦-೧೨

೫. ಈ ದೇವರು — ಶಂಕರಗೌಡ ಎಂ. ಸಾತ್ಮಾರ ೧೨

೬. ಶ್ರೀರಂಗ ವಾಙ್ಮಯ : ಆತ್ಮಕಥೆ ಹಾಗೂ ಜೀವನಚಿತ್ರಗಳು
— ಎಂ. ಜಿ. ಹೆಗಡೆ ೧೩-೧೮

೭. ಬಯಲಾಟ — ಸುಕನ್ಯಾ ಮಾರುತಿ ೧೮

೮. ಜಯಂತ ಕಾಯ್ಕಿಣಿಯವರ ‘ಬಣ್ಣದ ಕಾಲು’
— ಮಾಧವ ಕುಲಕರ್ಣಿ ೧೯-೨೪

೯. ಅಶೋಕ ಹೆಗಡೆಯವರ ‘ಅಶ್ವಮೇಧ’ — ನರೇಂದ್ರ ಪೈ ೨೫-೩೨

೧೦. ‘ಅಶ್ವಮೇಧ’ : ಆಧುನಿಕತೆಯೊಂದಿಗೆ ಮುಖಾಮುಖಿ
— ಶಿವರಾಮ ಕಾರಗಡಿ ೩೨-೩೬

೧೧. ಜಿನದತ್ತ ದೇಸಾಯಿಯವರ ‘ಮಾಗಿ’ — ಬಿ. ಎ. ಸನದಿ ೩೬-೩೯

೧೨. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ - ೩೨ — ರೇಖಾ ಬನ್ನಾಡಿ ೩೯-೪೮

೧೩. ಕವಿರಾಜಮಾರ್ಗಮಂಥನ : ಲೇಖನಮಾಲೆ - ೧೩ — ಷ. ಶೆಟ್ಟರ್ ೪೯-೬೯

೧೪. ಮೊಬಾಯಿಲ್ ಮೋಹ — ಎಸ್. ಎಚ್. ತಳವಾರ ೭೦

೧೫. ಎರಡು ಕವಿತೆಗಳು — ವೆಂಕಟೇಶ ಕುಲಕರಣಿ ೭೦-೭೨

೧೬. ಪುಸ್ತಕ ಪರಿಶೀಲನೆ : ೭೩-೭೮

೧. ಕನ್ನಡವನ್ನು ಮುನ್ನಡೆಸಿದವರು : ಜಿ. ಡಿ. ಜೋಶಿ
— ಕೃಷ್ಣಮೂರ್ತಿ ಕಲುಮಂಗಿ

೨. ದೇಹಲೋಕದ ವಿಸ್ಮಯಗಳು : ವಸಂತ. ಅ. ಕುಲಕರ್ಣಿ
— ಈಶ್ವರಚಂದ್ರ ಚಿಂತಾಮಣಿ

೩. ಕನ್ನಡ, ನನ್ನ ಕನ್ನಡ : ದೇಶಪಾಂಡೆ ಸುಬ್ಬರಾಯ — ಪ್ರಕಾಶ ಭಟ್

೪. ಬಾನಂಗಳದ ಚುಕ್ಕಿಗಳು : ಮಹಾಂತೇಶ ಮಲ್ಲನಗೌಡರ;

೫. ಅವರವರ ಸಾವು : ಕೆ. ಪಿ. ಮೃತ್ಯುಂಜಯ — ಸುಮಿತ್ರಾ ಹಲವಾಯಿ

೬. ಬೆಳಕು ಹಂಚಿದ ಬಾಲಕ ಮತ್ತು ನಾನು ಗಾಂಧಿ ಆಗ್ತೇನೆ : ಆರ್. ವಿ. ಭಂಡಾರಿ
— ದೇಶಪಾಂಡೆ ಸುಬ್ಬರಾಯ

೭. ಚಂದಿರನ ಕಣ್ಣು ಇಂಗಲಾರದ ಹುಣ್ಣು : ಮೂಡ್ನಾಕೂಡು ಚಿನ್ನಸ್ವಾಮಿ
— ಬಸವರಾಜ ಪೆಕ್ಕುಂದ

೧೭. ಸಂಕಲನ : ಅನಿಸಿಕೆ ೭೮-೭೯

೧೮. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦ + ಆವರಣ ಪುಟ ೩

ಸಂಪಾದಕರ ಮಾತು

ಈ ವರ್ಷದ ಸಂಕಲನ-೩೧ ಮತ್ತು ೩೩ ರಲ್ಲಿ 'ನನ್ನ ಶಾಲಾ ಗುರುಗಳು' ಮಾಲಿಕೆಯ ೧೪ ಮತ್ತು ೧೫ ನೇ ಲೇಖನ ಪ್ರಕಟಿಸಿದ್ದೆವು. ಸಂಕಲನ-೩೨ ರಲ್ಲಿ 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಯ ೩೧ ನೇ ಲೇಖನ ಪ್ರಕಟಿಸಿದ್ದೆವು. ಈಗ ಸಂಕಲನ-೩೪ ರಲ್ಲಿ ಈ ಮಾಲಿಕೆಯ ೩೨ ನೇ ಲೇಖನ ಪ್ರಕಟಿಸಿದ್ದೇವೆ. ಇನ್ನು ಮುಂದೆಯೂ ಒಂದೊಂದು ಸಂಚಿಕೆಯಲ್ಲಿ ಒಂದೊಂದು ಮಾಲಿಕೆಯ ಲೇಖನವನ್ನು ಇದೇ ಕ್ರಮದಲ್ಲಿ ಪ್ರಕಟಿಸಲಾಗುವುದು.

ಪ್ರೊಫೆಸರ್ ಎಸ್. ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ'ದ ೧೩/೯ ನೆಯ ವಿಶೇಷ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ದ್ರಾವಿಡ ಸಂಬಂಧ ಕುರಿತ ಈ ಕೊನೆಯ ಲೇಖನದಲ್ಲಿ ಅನುಬಂಧ ರೂಪದಲ್ಲಿ ಪ್ರೊ. ಶೆಟ್ಟರ್ ಅವರು ಕನ್ನಡಕ್ಕೆ ಅನುವಾದಿಸಿದ ೨೬ ಕವಿತೆಗಳಿವೆ. ೨೦೦೦ ವರ್ಷಗಳಷ್ಟು ಹಳೆಯ ಸಂಗಮ - ಶಂಗಂ - ಕಾಲದ ತಮಿಳು ಕವಿತೆಗಳ ಮೊಟ್ಟಮೊದಲ ಕನ್ನಡ ಅನುವಾದ ಇದು.

ಪ್ರಾಚೀನ ಕಾಲದಿಂದಲೂ ಪ್ರಪಂಚದ ಎಲ್ಲ ಕವಿಗಳನ್ನು ಆಕರ್ಷಿಸಿದ ಪ್ರೇಮ ಮತ್ತು ವೀರ ಭಾವಗಳೇ ಸಂಗಮ ಕಾಲದಲ್ಲಿಯೂ ಪ್ರಧಾನವಾಗಿದ್ದುವು. ಅಹನಾ (ಪ್ರೇಮ) ಮಾನವ ಮನದ ಅಂತರಂಗ ಭಾವವಾದರೆ ಪುಱನಾ (ವೀರ) ಬಹಿರಂಗ ಬದುಕಿನ ಅಭಿವ್ಯಕ್ತಿ.

ಚಿತ್ರಕ ಶೈಲಿ ಹಾಗೂ ಪ್ರಭಾವೀ ಭಾಷೆಯಲ್ಲಿ ೨ ಸಾವಿರ ವರ್ಷ ಹಿಂದೆಯೇ ರಚಿಸಲ್ಪಟ್ಟ ಈ ತಮಿಳು ಕವಿತೆಗಳು ಆಕಾರದಲ್ಲಿ ಕಿರಿದಾಗಿವೆ, ಮತ್ತು ಆಧುನಿಕ ಮುಕ್ತಕಗಳಂತೆ ನಿರ್ಬಂಧ ಹಾಗೂ ಪ್ರಾಸರಹಿತವಾಗಿ ಅವರದೇ ಆದ ವಿಶಿಷ್ಟ ಛಂದಸ್ಸಿನಲ್ಲಿ ಮೂಡಿಬಂದಿವೆ. ಅಂತ್ಯಪ್ರಾಸ, ಅಂತರ್‌ಪ್ರಾಸ ಮುಂತಾದುವು ನಂತರದ ದಿನಗಳಲ್ಲಿ ಸಂಸ್ಕೃತದ ಕೊಡುಗೆಯಾಗಿ ಬಂದಂಥವು.

ತಮಿಳು ಮೂಲದವರಾಗಿದ್ದರೂ ಸಂಪೂರ್ಣ ಕನ್ನಡದವರೇ ಆಗಿದ್ದ ಪ್ರೊ. ಎ. ಕೆ. ರಾಮಾನುಜನ್ ಇಂಗ್ಲಿಶ್‌ಗೆ ಅನುವಾದಿಸಿದ ಎರಡು ಸಂಪುಟಗಳಲ್ಲಿರುವ ಸಂಗಮ ಕಾಲದ ಕವಿತೆಗಳು ಮೊಟ್ಟಮೊದಲ ಯಶಸ್ವೀ ಇಂಗ್ಲಿಶ್ ಅವತರಣಿಕೆಗಳು. ಅವರು ಅನುವಾದಕ್ಕೆ ಸುಲಭವೆನಿಸುವಂಥ ಸುಂದರ ಕವಿತೆಗಳನ್ನು ಆಯ್ದುಕೊಂಡಿದ್ದರೆ, ಈಗ ಪ್ರಪ್ರಥಮ ಸಲ ಆ ತಮಿಳು ಕವಿತೆಗಳನ್ನು ನೇರವಾಗಿ ಕನ್ನಡಕ್ಕೆ ತಂದ ಪ್ರೊ. ಷ. ಶೆಟ್ಟರ್ ಅವರು ಆಯ್ದುಕೊಂಡ ಕವಿತೆಗಳಲ್ಲಿ ಆಗಿನ ಸಂಸ್ಕೃತಿಗೆ ಒತ್ತು ಕೊಟ್ಟಿದ್ದುದನ್ನು ಗಮನಿಸಬಹುದಾಗಿದೆ.

೧ ಜುಲಾಯಿ ೨೦೦೭
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಒನ್ನೇಪುಟ

— ಸಿದ್ಧಲಿಂಗ ಪಟ್ಟಣಶೆಟ್ಟಿ

ಎಚ್. ಇಬ್ರಾಹಿಂ ಸಾಹೇಬರನ್ನು ನೆನಸೂದು ಅಂದರ ಹುಣಿವೀ ಬೆಳದಿಂಗಳದಾಗ ಮನೀ ಮುಂದಿನ ತ್ವಾಟದಾಗ ಅವ್ವನ ತೊಡೀಮ್ಯಾಲ ಕುಂತು ಮಮ್ಮು ಉಂಡಂಗ, ಕೆನಿಹಾಲು ಕುಡದ್ಹಂಗ. ಈ ಪುಣ್ಯಾತ್ಮನ ಕಾಲದಾಗ ನಾವು ಅದೇವು, ಇಂಥಾ ವ್ಯಕ್ತಿಯನ್ನ ನೋಡುವ ಭಾಗ್ಯ ನಮಗ ಸಿಕ್ಕಯ್ತಿ, ಇದು ನಮ್ಮ ಪುಣ್ಯ.

ಬಳ್ಳಾರಿ ಮಗ್ಗಲದಾಗ ಇದ್ದರೂ ಆಂಧ್ರದ ಹಳ್ಳಿ ಅನಿಸಿಕೊಳ್ಳುವ ಹಿರೇಹಾಳು ಇವರ ಊರು. ಅಲ್ಲಿಯ ಈ ಹಿರೇ ಆಳು ಇಬ್ರಾಹಿಂ ನಮ್ಮ ನಾಡಿನ ಸಮಗ್ರ ಸಾಂಸ್ಕೃತಿಕ ಸಾಮಾಜಿಕ ಧಾರ್ಮಿಕ ಸಾಹಿತ್ಯಿಕ ಚೈತನ್ಯದ ಪ್ರತಿನಿಧಿ ಸ್ವರೂಪ ಸದಾ ಪುಟಿಯುತ್ತಿರುವ ಬಿಸಿನೀರ ಬುಗ್ಗೆ ಇದ್ಹಂಗ. ಸಾಹೇಬರನ್ನ ನಾನು ೧೯೭೬ ರಿಂದ ಹತ್ತಿರದಿಂದ ನೋಡೇನಿ, ತಿಳದೇನಿ, ಮೆಚ್ಚೇನಿ. ವ್ಯವಹಾರದ ಸಲುವಾಗಿ ಶಿವಮೊಗ್ಗಾಕ್ಕ ಬಂದು ನೆಲೆಸಿದ ಇಬ್ರಾಹಿಂ ಆ ಊರಿನ ಭಾಗ್ಯವಾದರು; ಅದನ್ನ ಕೇಂದ್ರ ಮಾಡಿಕೊಂಡು ಕರ್ನಾಟಕ ಸಂಸ್ಕೃತಿಗೆ ಎಲ್ಲಾ ಜಾತಿ ಧರ್ಮ ಪಂಗಡ ಗುಂಪು ವಿಚಾರ ಆಚಾರಗಳಿಗೆ ಸಂಪರ್ಕಸೂತ್ರ ಆದರು, ಹಿರೇಮಣಿ ಆದರು, ಸಹಾಯದ ಸುಗ್ಗಿ ಆದರು. ವಿರೋಧಿಗಳು ಸಹಿತ ಹತ್ತಿರ ಬಂದು ಇವ ನಮ್ಮವ ಇವ ನಮ್ಮವ ಅಂತ ಅಪ್ಪಿಕೊಳ್ಳೊ ಹಂಗ ತಮ್ಮ ವ್ಯಕ್ತಿತ್ವವನ್ನ ಗೊಮ್ಮಟಗೊಳಿಸಿಕೊಂಡರು.

ಕೆಲವರ ಕೂಡ ನಮಗ ವಿಚಿತ್ರ ರೀತಿಯ ಆತ್ಮೀಯ, ಅನ್ಯೋನ್ಯ ಸಂಬಂಧ ತಮ್ಮಷ್ಟಕ್ಕ ತಾವ್ಅ ಬೆಳೆದು ಬರತಾವು. ಅದು ಹಿಂದಿನ ಜನ್ಮದ ಋಣಾನುಬಂಧನೂ ಇದ್ದಿರಬೇಕು. ೧೯೭೬ ರ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯೊಳಗ ಪಾಲುಗೊಳ್ಳಾಕ ನಾ ಹೋಗಿದ್ದೆ. ಅದ್ಅ ಸಮ್ಮೇಳನದಾಗ ಗೋಪಾಲಕೃಷ್ಣ ಅಡಿಗರು ಸಾಹಿತ್ಯಿಕ ಬಂಡಾಯದ ಭೇರಿ ಬಾರಿಸಿದ್ದರು. ತುರ್ತು ಪರಿಸ್ಥಿತಿ ತನ್ನ ಕರಾಳ ಛಾಯೆಯನ್ನ ಸುತ್ತ ಚೆಲ್ಲಿತ್ತು. ಅಂಥಾ ಹೊತ್ತಿನ್ಯಾಗ, ಎರಡನೇ ದಿನ ಸಂಜೀಮುಂದ ಅಕಸ್ಮಾತ್ ಇಬ್ರಾಹಿಂ ಸಾಹೇಬರು ಎದುರಿಗೆ ಬಂದು ನಿಂತರು– ಬಿಳೀ ಅಂಗಿ, ಬಿಳೀ ನಗಿ, ಬಿಳೀ ಮಾತು, ಬಿಳೀ ಹೃದಯದ ಸಾಹೇಬರ ಕೈಯಾಗ ಗುಲಾಬಿ ಮಗ್ಗಿ. ನನ್ನ ಕೈಯಾಗ ಇಟ್ಟರು. ಇವತ್ತು ರಾತ್ರಿ ಊಟಕ್ಕ ನಮ್ಮಲ್ಲೇ ಬರಬೇಕು ಅಂದರು. ನನಗ ದಿಕ್ಕ್ಅ ತಿಳೀಲಿಲ್ಲ.

ನಂತರ ಕರಕೊಂಡು ಹೋದರು. ಅಲ್ಲಿ ಅಡಿಗರಿಂದ ಹಿಡಕೊಂಡು ಎಲ್ಲಾ ಬಣ ಗುಂಪು ವಿಚಾರಗಳ ಸಾಹಿತಿಗಳು ಕೂಡಿದ್ದರು. ಇಬ್ರಾಹಿಂ ಸಾಹೇಬರ ದರಬಾರದೊಳಗ ನಿಜವಾದ ಸಾಹಿತ್ಯ ಸಮಾರಾಧನೆ, ಸದ್ಭಾವದ ಆರಾಧನೆ ನಡೆದಿತ್ತು. ಅವತ್ತಿನಂಥ ಆತಿಥ್ಯ ಗೌರವ ಪ್ರೀತಿ ಇವತ್ತಿನ ತನಕಾನೂ ನನ್ನಂಥ ಅನೇಕ ಸಾಹಿತಿಗಳಿಗೆ ಸಾಹೇಬರಿಂದ ಸಿಗತಾ ಇರೋದು ನಮ್ಮ ನಸೀಬ, ಅದು ಅವರ ಹಿರೇತನ.

ಒಬ್ಬ ಆದರ್ಶ ಪರಿಪೂರ್ಣ ಸಂಪನ್ನ ಮುಸ್ಲಿಂ ಕನ್ನಡಿಗ ಹೆಂಗಿರತಾನ ಅನ್ನೂದಕ್ಕ ಜೀವಂತ ಉತ್ತರ ಈ ಇಬ್ರಾಹಿಂ ಸಾಹೇಬರು ಅಂತ ಗದುಗಿನ ತೋಂಟದಾರ್ಯ ಗುರುಗಳು ಹೇಳಿದ್ದು ನೂರಕ್ಕ ನೂರು ಖರೆ. ಇಬ್ರಾಹಿಂ ಸಾಹೇಬರು ತಮ್ಮ ಸಂಸ್ಕೃತಿಯ ಅಮೃತವನ್ನ ತಮ್ಮ ಸಂಪರ್ಕಕ್ಕ ಬಂದ ಎಲ್ಲರಿಗೂ ಕೊಟ್ಟಿದ್ದು ಇಡೀ ನಾಡಿಗೆ ಗೊತ್ತು.

೧೯೩೧ ರಲ್ಲಿ ಜನಿಸಿದ ಇಬ್ರಾಹಿಂ ಸಾಹೇಬರಿಗೆ ಮೊನ್ನೆ ೭೫ ತುಂಬಿದಾಗ ನಾನೂ ಒಂದು ಲೇಖನ ಕಳಿಸಬೇಕಿತ್ತು, ಏನೇನೋ ಗದ್ದಲ, ಕಳಸಲಿಲ್ಲ. ಪ್ರಜಾವಾಣಿಯೊಳಗ ಮೊದಲ ನಾ ಬರೀತಿದ್ದ 'ಚಹಾದ ಜೋಡಿ ಚೂಡಾದ್ಹಾಂಗ' ಅಂಕಣದಾಗ ಬರೆದಿದ್ದನ್ನ ತೊಗೊರ್‍ರಿ ಅಂತ ಹೇಳಾಕೂ ಆಗಲಿಲ್ಲ.

ಈಗ ಸಾಹೇಬರಿಗೆ ಅರ್ಪಿಸಿದ 'ಅಮೃತ ಶರಧಿ' ಪುಸ್ತಕ ನನ್ನ ಕೈಯಾಗ ಅಯ್ತಿ. ಸಾಹೇಬರ ಅದೇ ಬಿಳೀ ನಗಿ ಬಿಳೀ ಬದುಕು ಬಿಳೀ ಆದರ್ಶ ಇಲ್ಲಿಯ ಪುಟಪುಟದ ತುಂಬ ಪುಟಿಯಾಕ್ಹತ್ತ್ಯಾವು. ಮೃತ್ಯುಂಜಯ ರುಮಾಲೆ ಬರೆದ 'ಜೀವನ ಶರಧಿ' ಒಂದು ಸಮಗ್ರ ಇತಿಹಾಸ. ಇನ್ನೂ ಏನೇನೋ ಶಿಸ್ತಿನ ಕೆಲಸ ಇಲ್ಲಿ ಆಗಬೇಕಿತ್ತು. ಇರಲಿ, ಶಿಸ್ತಿನ ನಮ್ಮ ಸಾಹೇಬರಿಗೆ ೮೦ ತುಂಬುವ ಹೊತ್ತಿಗಾದರೂ ಇನ್ನಷ್ಟು ಶಿಸ್ತಿನ ಒಂದು ಕ್ರಮಬದ್ಧ ಗ್ರಂಥ ಅರ್ಪಣ ಆಗೂಹಂಗ ಆಗಬೇಕು.

ಬೆಟ್ಟದಾ ಮೇಲೊಂದು ಮನೆಯ ಮಾಡಿ

ವಿಜಯಾ ಶ್ರೀಧರ್

ಮೂರ್ಖ ಮನೆ ಕಟ್ಟುತ್ತಾನೆ, ಬುದ್ಧಿವಂತ ಅದರಲ್ಲಿ ವಾಸಿಸುತ್ತಾನೆ ಎಂಬ ಗಾದೆ ಹೇಳುತ್ತ, ಅಪ್ಪ ಮನೆ ಕಟ್ಟಲು ಸಾಧ್ಯವಾಗದ ತನ್ನ ಅಸಹಾಯಕತೆಯ ನೋವನ್ನು ನಗುತ್ತಲೇ ಮರೆಯುತ್ತಿದ್ದ. ಆದರೆ ಅಮ್ಮ, 'ಪಶು-ಪಕ್ಷಿಗಳೂ ತಮ್ಮ-ತಮ್ಮ ಗುಹೆ-ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ನಾವು ಮನುಷ್ಯರು ಇನ್ನೆಷ್ಟು ವರ್ಷ ಈ ಬಾಡಿಗೆ ಮನೆಯಲ್ಲಿ ಒದ್ದಾಡಬೇಕು?' ಅಂತ ಬೇಸರಪಟ್ಟುಕೊಳ್ಳುತ್ತಿದ್ದಳು.

ಅಂತೂ ಅಪ್ಪ ಮನೆಗಾಗಿ ಶಿರ್ಶಿಯಲ್ಲಿ ಸೈಟ್ ಕೊಂಡಿದ್ದು, ನಾನು ಹೈಸ್ಕೂಲ್ ಓದುತ್ತಿದ್ದಾಗ. ಶಿರ್ಶಿ ಪೇಟೆಯಿಂದ ೪-೫ ಕಿ.ಮೀ. ದೂರದ ಮರಾಠಿಕೊಪ್ಪವೆಂಬ ಹಾಳು ಗುಡ್ಡ-ಕೊಂಪೆಯಂಥ ಸ್ಥಳದಲ್ಲಿ ಸರಕಾರದಿಂದ ಸಿಕ್ಕ ಈ ಜಾಗ ಕೊಳ್ಳಲು ಕಾರಣ, ಅದು ತುಂಬ ಕಡಿಮೆ ಬೆಲೆಗೆ ದೊರೆತದ್ದು. ಅಲ್ಲಲ್ಲಿ ಬಡವರ ನಾಲ್ಕಾರು ಗುಡಿಸಲು ಕಾಣಿಸುತ್ತಿತ್ತು. ಎಲ್ಲೆಲ್ಲೂ ಬಿದಿರು ಹಿಂಡು, ಕವಳೀ ಹಣ್ಣಿನ ಪೊದೆಗಳು.

ಸೈಟ್ ಕೊಂಡ ಎರಡು ವರ್ಷ ಅಪ್ಪನಿಗೆ ಮನೆ ಕಟ್ಟಲು ಸಾಧ್ಯವಾಗಲೇ ಇಲ್ಲ. ಸರಕಾರಿ ನೌಕರಿ ನಿಮಿತ್ತ ಅಲೆಮಾರಿ ಜೀವನ ನಡೆಸುತ್ತಿದ್ದ ಏಕಮಾತ್ರ ಮಗಳ ಕಷ್ಟ ನೋಡಲಾರದೇ, ಅಜ್ಜ. ತನ್ನ ಹಳ್ಳಿ ಸಂಸಾರದ ಹಲವಾರು ತಾಪತ್ರಯಗಳಿದ್ದರೂ, ಈ ಬೆಟ್ಟದ, ಸಾಕಷ್ಟು ದೊಡ್ಡ ಸೈಟ್‌ನಲ್ಲಿ ಹೆಂಚಿನ ಮಹಡಿಮನೆ ಕಟ್ಟಿಸಿಕೊಟ್ಟಿದ್ದ. ಹಾಗೇನೇ ಮನೆ ಸುತ್ತಲೂ ಪಾಗಾರದ ಹತ್ತಿರ ಸಾಲಾಗಿ ಹನ್ನೆರಡು ತೆಂಗಿನ ಸಸಿಗಳನ್ನು ನೆಡಸಿದ್ದ. ಅಮ್ಮ ಬಹು ದಿನದಿಂದ ಬಯಸಿದ್ದ ಸ್ವಂತ ಮನೆಯ ಗೃಹಪ್ರವೇಶ ಸರಳವಾಗೇ ನೆರವೇರಿತ್ತು. ಅದು ನಾನು ಎಂಟನೇ ತರಗತಿ ಮುಗಿಸಿದ ವರ್ಷ. ಬೇಸಿಗೆ ರಜೆಯಲ್ಲಿ ನಾವು ನಮ್ಮ ಸ್ವಂತ ಮನೆಗೆ ಬಂದಿದ್ದೆವು. ಬಾಡಿಗೆ ಗೂಡಿನೊಳಗಿಂದ ಬಂದ ಅಪ್ಪ-ಅಮ್ಮ, ನಾಲ್ಕು ಮಕ್ಕಳಿಗೆ ಈ ಮನೆ ವಿಶಾಲ ಅರಮನೆಯಂತೆ ಭಾಸವಾಗಿತ್ತು. ಗಾಳಿ-ಬೆಳಕು ಸಮೃದ್ಧವಾಗಿದ್ದ ಈ ಸ್ವಂತ ಮನೆ ಸುಖವೆಂದು ಅನಿಸಿತ್ತು.

ಆದರೆ... ಬೇಸಿಗೆ ಕಳೆದು ಮಳೆಗಾಲ ಪ್ರಾರಂಭವಾಗುವ ಸಮಯ. ಅಪ್ಪನಿಗೆ ಮುಂಡಗೋಡಕ್ಕೆ ವರ್ಗವಾಗಿತ್ತು. ನಲವತ್ತು ವರ್ಷಗಳ ಹಿಂದೆ ಶಿರ್ಶಿಗೆ ಮುಂಡಗೋಡ ದೂರವೇ! ಬಸ್ಸುಗಳು ವಿರಳವಾಗಿ ಸಂಚರಿಸುತ್ತಿದ್ದವು. ಈ ಸ್ವಂತ ಮನೆಯಲ್ಲೇ ನಾವಿರಬೇಕೆಂದು ಹಳ್ಳಿಯಲ್ಲಿದ್ದ ಅಜ್ಜ-ಅಜ್ಜಿಯರ ಇಚ್ಛೆಯಾಗಿತ್ತು. ಅಲ್ಲದೇ ಅಣ್ಣ ಧಾರವಾಡದಲ್ಲಿ ಕಾಲೇಜು ಸೇರಿದ್ದ. ಅಕ್ಕ ಹೊಸದಾಗಿ ಪ್ರಾರಂಭವಾಗಿದ್ದ ಶಿರ್ಶಿ ಕಾಲೇಜಿಗೆ ಸೇರಿದ್ದಳು. ನಾನು, ತಮ್ಮ ಹೈಸ್ಕೂಲ್. ನಮ್ಮ ವಿದ್ಯಾಭ್ಯಾಸ ಹಾಳಾಗಬಾರದೆಂದು ಅಮ್ಮ, ಮೂವರು ಮಕ್ಕಳು ಶಿರ್ಶಿಯ ಈ ಸ್ವಂತ ಮನೆಯಲ್ಲೇ ಉಳಿದೆವು. ಅಣ್ಣ ಧಾರವಾಡದಲ್ಲಿ ಖೋಲಿ ಮಾಡಿ ಸ್ನೇಹಿತರೊಡನೆ ಇದ್ದ. ಅಪ್ಪ ಮುಂಡಗೋಡದಲ್ಲಿ. ಅಣ್ಣ ತಿಂಗಳಿಗೊಮ್ಮೆ ಬಂದರೆ ಅಪ್ಪ ವಾರಕ್ಕೊಮ್ಮೆ ಬರುತ್ತಿದ್ದ.

ನಮ್ಮ ಅಜ್ಜ, ಅಜ್ಜಿಯ ಆಗ್ರಹದಿಂದ ಕಟ್ಟಿಸಿಕೊಟ್ಟ ಮನೆ ಇದಾಗಿತ್ತು. ಅಜ್ಜಿಯ 'ಲಕ್ಷ್ಮಿ' ಎಂಬ ಹೆಸರನ್ನು ನೆನಪಿಸಲು 'ಲಕ್ಷ್ಮೀನಿವಾಸ' ಅಂತ ಮನೆಗೆ ಹೆಸರಿಟ್ಟಿದ್ದೆವು. ಸರಸ್ವತಿಯನ್ನು ಒಲಿಸಿಕೊಳ್ಳುವ ತಪಸ್ಸಿನಲ್ಲಿದ್ದ ನಮ್ಮ ಸಂಸಾರದಲ್ಲಿ ಲಕ್ಷ್ಮಿಯ ಅಭಾವವಿತ್ತು. ಆರು ಜನರಿಗೆ ಮೂರು ಸಂಸಾರ ನಿಭಾಯಿಸಬೇಕಾದ ಕಷ್ಟವಿತ್ತು.

ಸ್ವಂತ ಮನೆಯ ಹಲವಾರು ಕಷ್ಟಗಳು ನಿಧಾನವಾಗಿ ಅರಿವಾಗತೊಡಗಿದ್ದವು. ಇಲ್ಲಿ ಗುಡ್ಡದ ಮೇಲಿನ ಮನೆಯ ಸುತ್ತಲೂ ಹೆಚ್ಚು ಮನೆಗಳೇ ಇರಲಿಲ್ಲ. ಹಾಗಾಗಿ ಅಪ್ಪ ಮನೆಯಲ್ಲಿ ಇರದಾಗ ಅಮ್ಮ, ನಾನು, ಅಕ್ಕ-ತಮ್ಮ ಮನೆಯಲ್ಲಿರುವಾಗ ಭಯವಾಗುತ್ತಿತ್ತು. ಮಳೆಗಾಲದಲ್ಲಿ ರಾತ್ರಿಯಾದರಂತೂ ಎಲ್ಲ ಬಿದಿರು ಮಟ್ಟಿಗಳೂ ಕವಳೀ ಪೊದೆಗಳೂ ಭೂತಗಳಾಗಿ ಹೆದರಿಸುತ್ತಿದ್ದವು. ನಮಗೆ ಇರದ ಭೂತದ ಬಗ್ಗೆ ಹೆದರಿಕೆಯಾದರೆ, ಅಮ್ಮನಿಗೆ ಭೂತದಂಥ ಮನುಷ್ಯರ ಬಗ್ಗೆ ಹೆದರಿಕೆ ಇತ್ತು.

ನೀರಿನದೊಂದು ದೊಡ್ಡ ಸಮಸ್ಯೆಯಾಗಿತ್ತು ಈ ಗುಡ್ಡದಲ್ಲಿ. ಆಗ ಬಾವಿಗಳೇ ನೀರಿಗೆ ಆಸರೆಯಾಗಿದ್ದವು. ಮನೆಯ ಹಿಂದೆ ಅಪ್ಪ ಬಾವಿ ತೋಡಿಸಿದ್ದ. ಪಾತಾಳದಷ್ಟು ಕೆಳಗೆ ನೀರು ಬಂದಿತ್ತು. ಗಡಗಡೆ ಹಾಕಿ ಹಗ್ಗಕ್ಕೆ ಕೊಡಪಾನ ಕಟ್ಟಿ ನೀರು ಸೇದಬೇಕಾಗಿತ್ತು. ಕೆಲಸಕ್ಕೆ ರುಕ್ಮಿಣಿ ಎಂಬ ಹೆಂಗಸು ಬರುತ್ತಿದ್ದಳು. ಒಂದು ದೊಡ್ಡ ಹಂಡೆ, ಒಂದು ದೊಡ್ಡ ಕೊಳಗ ನೀರು ತುಂಬಿ ಹೋಗುತ್ತಿದ್ದಳು. ೪-೬ ಜನರಿಗೆ ಸ್ನಾನಕ್ಕೆ, ಅಡಿಗೆಗೆ, ಬಟ್ಟೆ ತೊಳೆಯಲು ತುಂಬ ನೀರು ಬೇಕಾಗುತ್ತಿತ್ತು. ಎಲ್ಲಕ್ಕೂ ಹೆಚ್ಚಾಗಿ ಮನೆ ಸುತ್ತಲೂ ನೆಟ್ಟ ತೆಂಗಿನ ಸಸಿಗಳನ್ನು ಬದುಕಿಸಿಕೊಳ್ಳಬೇಕಾಗಿತ್ತು. ಅಮ್ಮ ಒಂದು ಉಪಾಯ ಮಾಡಿ ಒಬ್ಬೊಬ್ಬರು ಮೂರು-ಮೂರು ಗಿಡಗಳಿಗೆ ನೀರು ಸೇದಿ ಹಾಕಬೇಕು, ಯಾರ ಗಿಡ ಚೆನ್ನಾಗಿ ಬೆಳೆಯುತ್ತದೋ ಅವರಿಗೆ ಒಂದು ವರ್ಷದ ನಂತರ ಬಹುಮಾನ ಕೊಡುವುದಾಗಿ ಆಸೆ ತೋರಿಸಿದ್ದಳು.

ಅಕ್ಕ ಉಪಾಯ ಮಾಡಿ ಬಾವಿಗೆ ಹತ್ತಿರದ ಗಿಡಗಳನ್ನು ಆಯ್ಕೆ ಮಾಡಿಕೊಂಡಿದ್ದಳು. ನಮ್ಮೆಲ್ಲರ ಗಿಡಗಳಿಗಿಂತ ಅಕ್ಕನ ಗಿಡಗಳು ಚೆನ್ನಾಗಿ ಬೆಳೆಯುತ್ತಿದ್ದವು. ನಾವು ಒಂದೇ ಎರಡೇ ಕೊಡ ನೀರು ಸೇದಿ ಹಾಕಿದರೆ ಅಕ್ಕ ಕಷ್ಟಪಟ್ಟು ೩-೪ ಕೊಡ ನೀರು ಹಾಕುತ್ತಿದ್ದಳು. ಅಮ್ಮ ಒಂದು ತೆಂಗಿನ ಮರದ ಬುಡದಲ್ಲಿ ದೊಡ್ಡ ಸೈಜುಗಲ್ಲು ಹಾಕಿಸಿದ್ದಳು. ಅದರ ಮೇಲೆ ಬಟ್ಟೆ ತೊಳೆಯುತ್ತಿದ್ದೆವು. ಹಾಗಾಗಿ ಅದೊಂದು ಗಿಡ ಹೆಚ್ಚು ಸೊಂಪಾಗಿ ಬೆಳೆದಿತ್ತು. ಬೇಸಿಗೆಯಲ್ಲಂತೂ ನೀರು ಇನ್ನೂ ಆಳಕ್ಕಿಳಿದು ಒಂದು ಕೊಡಪಾನ ನೀರು ಸೇದುವುದರೊಳಗೆ ಉಸಿರು ಬರುತ್ತಿತ್ತು. ಮಳೆಗಾಲ ಬಂತು ಅಂದರೆ, ಮಣ್ಣಾದ, ಕೆಂಪಾದ ನೀರು ಮೇಲೇರಿ ಬರುತ್ತಿತ್ತು. ಆದರೆ ಆ ನೀರಿನಿಂದ ತೊಂದರೆಯೇ ಹೆಚ್ಚಾಗಿತ್ತು. ಮಳೆಗಾಲದಲ್ಲಿ ತೆಂಗಿನ ಗಿಡಗಳಿಗೆ ನೀರು ಬೇಕೂ ಇರಲಿಲ್ಲ.

ಮಳೆಗಾಲದಲ್ಲಿ ಮಳೆ ಭೋರೆಂದು ಸುರಿಯತೊಡಗಿದರೆ ನಾಲ್ಕು ತಿಂಗಳು ಕಷ್ಟಪರಂಪರೆಯ ಮಳೆ ಸುರಿದಂತೇ ಸರಿ. ಒಣಗಿದ ಕಟ್ಟಿಗೆ ಮುಗಿದು, ಹಸಿ ಕಟ್ಟಿಗೆಯಿಂದ ಒಲೆ ಉರಿಸಲಾಗದೇ ಅಮ್ಮ ಕಣ್ಣೀರು ಸುರಿಸಬೇಕಾಗುತ್ತಿತ್ತು. ಸುರಿಯುವ ಮಳೆಯಲ್ಲಿ ೪-೬ ಕಿ.ಮೀ. ದೂರದ ಶಾಲೆಗೆ ಹೋಗಿ ಬರುವ ಕಷ್ಟ, ಅಡಿಗೆಗೆ ಬೇಕಾಗುವ ಸಾಮಾನು ಖರ್ಚಾದರೆ ಪೇಟೆಯಿಂದ

ತರಬೇಕಾದ ಅನಿವಾರ್ಯತೆ. ಯಾರಿಗಾದರೂ ಆರಾಮಿಲ್ಲದಿದ್ದರೆ ಯಾವ ಡಾಕ್ಟರರೂ ಈ ಕೊಂಪೆಗೆ ಬರಲು ಒಪ್ಪುತ್ತಿರಲಿಲ್ಲ.

ಹಾಲು-ಮೊಸರೂ ಸಿಗುತ್ತಿರಲಿಲ್ಲ. ನಮ್ಮ ಮನೆ ಸುತ್ತಲೂ ಅಲ್ಲಲ್ಲಿ ಇದ್ದ ಸಣ್ಣ-ಪುಟ್ಟ ಗುಡಿಸಲು-ಮನೆಗಳ ಜನ ಹಾಲು ಬಳಸುತ್ತಿರಲಿಲ್ಲ. ಕೆಲವರು ಕುರಿ ಸಾಕಿದ್ದರು. ಕೊನೆಗೊಮ್ಮೆ ನಮಗೆಲ್ಲ ಹಾಲಿಗಾಗಿ ಅಮ್ಮ ಆಕಳೊಂದನ್ನು ಸಾಕಿದ್ದಳು. ಮನೆ ಕಾಯಲು 'ಮೋತಿ' ನಾಯಿ. ಗುಡ್ಡದ ಮೇಲಿನ ಮನೆಯಾದ್ದರಿಂದ ಇಲಿಗಳ ಕಾಟದಿಂದ ಪಾರಾಗಲು 'ಊರ್ವಶಿ' ಎಂಬ ಬೆಕ್ಕು. ಒಳ್ಳೇ ಸಂನ್ಯಾಸಿ ಸಂಸಾರವಾಯ್ತಲ್ಲ ಎಂದು ಅಪ್ಪ ಅಲವತ್ತುಕೊಳ್ಳುತ್ತಿದ್ದರು. ಅಮ್ಮ 'ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ' ಎಂಬ ಅಕ್ಕನ ವಚನ ಹಾಡಿಕೊಳ್ಳುತ್ತ ಸಮಾಧಾನ ತಂದುಕೊಳ್ಳುತ್ತಿದ್ದರು.

ಅಪ್ಪ-ಅಣ್ಣ ಇರದ ರಾತ್ರಿಯಲ್ಲಿ ಕಂದೀಲು ಬೆಳಕಿನಲ್ಲಿ ನಮ್ಮ ಭಯ ಇನ್ನೂ ಹೆಚ್ಚುತ್ತಿತ್ತು. ರಾತ್ರಿ, ಅಮ್ಮ, ಮಕ್ಕಳು ಮಾತನಾಡುತ್ತ, ಓದುತ್ತ, ಭಜನೆ ಮಾಡುತ್ತ ನಿದ್ರೆ ಹೋಗುತ್ತಿದ್ದೆವು. ಇಷ್ಟೆಲ್ಲ ಕಷ್ಟಗಳ ಮಧ್ಯೆ ಸಣ್ಣ-ಪುಟ್ಟ ಸಂತಸಗಳೇ ನಮ್ಮನ್ನು ಮುಂದೆ ಸಾಗಿಸುತ್ತಿದ್ದವು. ಮನೆ ಸುತ್ತಲೂ ನೆಟ್ಟ ಹೂವಿನ ಗಿಡಗಳು ಬಣ್ಣ-ಬಣ್ಣದ ಹೂ ಅರಳಿಸಿ ನಗುತ್ತಿದ್ದವು. ಮುಂಜಾವಿನಲ್ಲಿ ಕೋಗಿಲೆಯ ಕೂಜನ, ಬಣ್ಣ-ಬಣ್ಣದ ಹಕ್ಕಿಗಳ ಹಾಡು ಕಿವಿಗೆ ಬೀಳುತ್ತಿತ್ತು.

ಬೇಸಿಗೆಯಲ್ಲಿ ಕವಳೀ ಮಟ್ಟಿಗಳು ಮೊದಲು ಪರಿಮಳದ, ಪುಟ್ಟಮಲ್ಲಿಗೆಯಂಥ ಬಿಳಿ ಹೂಗಳಿಂದ ತುಂಬಿ, ನಂತರ ಹುಳಿಯಾದ ಹಸಿರು ಕಾಯಿಗಳು ಗೊಂಚಲು ಗೊಂಚಲಾಗಿ ಬಿಡುತ್ತಿದ್ದವು. ಉಪ್ಪು ಬೆರೆಸಿ ಕವಳೀ ಕಾಯಿ ತಿನ್ನುವ ಸಂಭ್ರಮ. ಅಮ್ಮನಿಗೆ ಉಪ್ಪಿನಕಾಯಿ ಮಾಡುವ ಸಡಗರ. ತಿಂಗಳು ತುಂಬುವುದರೊಳಗೆ ಹುಳಿ-ಸಿಹಿ ಕಪ್ಪು ಹಣ್ಣುಗಳಿಂದ ಕವಳೀ ಮಟ್ಟಿ ತುಂಬಿರುತ್ತಿತ್ತು. ದೂರದ ಶಾಲೆಯ ಗೆಳತಿಯರ ಗುಂಪು ಭಾನುವಾರ ಬಂದಾಗ ಕವಳೀ ಹಣ್ಣುಗಳನ್ನು ತಿಂದೇ ಹೊಟ್ಟೆ ತುಂಬಿಕೊಳ್ಳುತ್ತಿದ್ದರು.

ಅಮ್ಮ ಈ ಮನೆಯಲ್ಲಿ ತನ್ನದೊಂದು ಸುಂದರವಾದ ಸಂಸಾರ ನಿಲ್ಲಿಸುವುದಕ್ಕೆ ಪಟ್ಟ ಕಷ್ಟ ನೋಡಿದರೆ ಅದೊಂದು ಅವಳ ಕರ್ಮಭೂಮಿಯೆಂದೇ ಅನಿಸುತ್ತಿತ್ತು. ಈ ಮನೆಯಲ್ಲಿ ನಾವು ಹಲವಾರು ರೀತಿಯ ಕಷ್ಟಗಳನ್ನು ಅನುಭವಿಸಿದ್ದೆವು. ಆದರೂ ಅದು ಅಪ್ಪ-ಅಮ್ಮನ ಪ್ರೀತಿಯ ಗೂಡಾಗಿತ್ತು. ಹೈಸ್ಕೂಲಿನಲ್ಲಿ ನಾವು ಓದುತ್ತಿದ್ದಾಗ ಒಮ್ಮೆ ಕಾನ್ವೆಂಟ್‌ನ ಮದರ್ ಸಮಾಜವಿಜ್ಞಾನ ಪಾಠ ಮಾಡುತ್ತ 'ಹೌಸ್' ಮತ್ತು 'ಹೋಮ್'ದ ಅಂತರ ವಿವರಿಸಲು ಒದ್ದಾಡುತ್ತಿದ್ದರು. ಕಲ್ಲು, ಮಣ್ಣು, ಇಟ್ಟಿಗೆಗಳಿಂದ ಕಟ್ಟಿದ ಬಿಲ್ಡಿಂಗ್ ಒಂದು 'ಹೌಸ್' ಆಗಬಹುದು. ಒಂದು ಸಂಸಾರ ತನ್ನೆಲ್ಲ ಸುಖ-ದುಃಖ, ಪ್ರೀತಿ-ವಾತ್ಸಲ್ಯಗಳಿಂದ ಅಲ್ಲಿ ವಾಸಿಸಿದರೆ ಅದು ಹೋಮ್, ಮನೆಯಾಗುತ್ತದೆ ಎಂದು ವಿವರಿಸಿದಾಗ ಅದು ನನ್ನ ಹೃದಯಕ್ಕೆ ಅಷ್ಟು ಸುಲಭವಾಗಿ ಅರ್ಥವಾಗಿದ್ದು, ಬೆಟ್ಟದ ಮೇಲಿನ ಈ ಮನೆಯಿಂದಾಗಿಯೇ! ಅಜ್ಜ ಕಟ್ಟಿಸಿಕೊಟ್ಟ, ಅಪ್ಪ-ಅಮ್ಮ, ತಮ್ಮ ನಾಲ್ಕು ಮಕ್ಕಳೊಡನೆ, ತಮ್ಮ ನಿಶ್ಚಿತ ನೆಲೆಗಳನ್ನು ಮುಟ್ಟಲು ಪ್ರಯತ್ನಿಸುತ್ತಿದ್ದ ಆ ಲಕ್ಷ್ಮೀನಿವಾಸ ನಮ್ಮ ಮನೆಯಾಗಿತ್ತು.

ನಿಧಾನವಾಗಿ ಸುತ್ತಲಿನ ಜಗತ್ತು ಬದಲಾಗತೊಡಗಿತ್ತು. ನಮ್ಮ ಮನೆ ಸುತ್ತ-ಮುತ್ತ ಹೊಸ ಹೊಸ ಮನೆಗಳು ಕಾಣತೊಡಗಿದ್ದವು. ನಮ್ಮ ಮನೆ ತೆಂಗಿನ ಮರಗಳು ದೊಡ್ಡದಾಗಿ ಸಿಹಿಯಾದ ಎಳನೀರು, ತೆಂಗಿನಕಾಯಿ ಕೊಡತೊಡಗಿದ್ದವು. ಅಪ್ಪ ನಿವೃತ್ತನಾಗಿದ್ದ. ಮಕ್ಕಳೆಲ್ಲ ಅವರವರ ಮನೆ ಕಟ್ಟಿಕೊಂಡು ನೆಲೆ ನಿಂತಿದ್ದರು. ಮರಾಠಿಕೊಪ್ಪದ ಮನೆಗೆ ಲೈಟ್ ಬಂದಿತ್ತು. ನಲ್ಲಿ ನೀರು ಬಂದಿತ್ತು. ಮರಾಠಿಕೊಪ್ಪ ಎಂಬ ಹೆಸರು ಬೇಡವೆಂದು ಕನ್ನಡೀಕರಣವಾಗಿ ಸುಸಂಸ್ಕೃತ ವಿದ್ಯಾನಗರವಾಗಿತ್ತು. ಅಲ್ಲಿಗೆ ಅಪ್ಪ-ಅಮ್ಮನ ಜೀವನದ ಒಂದು ಬಹು ದೊಡ್ಡ ಅಧ್ಯಾಯ ಮುಕ್ತಾಯವಾಗಿತ್ತು.

✤ ವಿಜಯಾ ಶ್ರೀಧರ್ : ಕೋಂ. ಡಾ. ಕೆ. ಆರ್. ಶ್ರೀಧರ್
೧ ನೇ ಮುಖ್ಯರಸ್ತೆ, ರಾಜೇಂದ್ರನಗರ, ಶಿವಮೊಗ್ಗ-೫೭೭ ೨೦೪ ✤

ಒಂದು ನರಳಿಕೆ ಒಂದು ನಿಟ್ಟುಸಿರು

ಅಶೋಕ ಶೆಟ್ಟರ್

ಕಲ್ಪನೆಗಳಿರಲಿಲ್ಲ; ಕನಸುಗಳೂ ಇರಲಿಲ್ಲ
ಯಾವುದೋ ದಿಕ್ಕಿನಿಂದ ಬಂದಳಾಕೆ
ಅವಳಿಗೆ ಮುಳ್ಳು ಚುಚ್ಚಿದರೆ ಅವನೇಕೆ ನೋಯಬೇಕು?
ಅವನ ಕಣ್ಣು ಒದ್ದೆಯಾದರೆ ಅವಳೆದೆ ಯಾಕೆ ಮುದ್ದೆ?

ಉತ್ತರಗಳಿರಲಿಲ್ಲ; ಪ್ರಶ್ನೆಗಳೂ ಇರಲಿಲ್ಲ
ಕನಸುಗಳಿಗೆ ಕಣ್ಣು ಬಣ್ಣ ಮೂಡಿದವು
ಕಲ್ಪನೆಗಳ ರೆಕ್ಕೆ ಕೊಟ್ಟಳಾಕೆ
ಹಾರಿತು ಹಕ್ಕಿ ಇಬ್ಬರನೂ ಹೊತ್ತು
ಹೊಳೆಹೊಳೆವ ಚಂದಿರನ ಕಂಗಾವಲಲ್ಲಿ

ಆತಂಕವಿರಲಿಲ್ಲ; ಕಳವಳವೂ ಇರಲಿಲ್ಲ
ನಗುತ್ತಿದ್ದಳು ನದಿಯ ಕಲರವದಂತೊಮ್ಮೆ
ಸಮುದ್ರದ ಅಲೆಗಳಬ್ಬರದಂತೆ ಒಮ್ಮೊಮ್ಮೆ
ಅಳುತ್ತಿದ್ದಳು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ
ದುಃಖಿತರೆದೆಗಳ ತೇವ ಒಸರಿದಂತೆ

ಹಾರುತ್ತಿದ್ದ ಹಕ್ಕಿಗಳ ಭುವಿಗೆ ಕರೆದರಾರೊ
ಹತ್ತು ದಿಕ್ಕು ಹಾರಿ ಎಷ್ಟು ದೂರ ಏರಿ ಏನೆಲ್ಲ ಕಂಡಿದ್ದವುಗಳಿಗೆ
ಜಾತಿ ಪಾಠ ಹೇಳಿದರು ನೀತಿ ಪಾಠ ಹೇಳಿದರು
ರೆಕ್ಕೆ ಕೊಚ್ಚಿದರು, ಅದು ತಮ್ಮ ಹಕ್ಕೆಂಬಂತೆ

ಭೂಮಿಯೂ ಇದೆ; ಸೂರ್ಯನೂ ಇದ್ದಾನೆ
ಬಹಳಷ್ಟು ಆಷಾಢಗಳ ನಂತರವೂ
ಆ ಗಿಡ ಮರ ಕೇಳುತ್ತವೆ; ಆತ ಏನಾದ?
ಅಲ್ಲಿ ಗಿಳಿ ಗೊರವಂಕ ಕೇಳುತ್ತವೆ : ಆಕೆ ಏನಾದಳು?

ಗ್ರಹಗಳೆಲ್ಲ ತಮ್ಮ ಕಕ್ಷೆಯಲ್ಲಿ ಚಲಿಸುತ್ತಲೇ ಇವೆ
ಹಾದಿ ಬೀದಿಯಗುಂಟ ಮೇ ಫ್ಲವರ್ ಉದುರಿ
ಕೆಂಪು ಹರಡುತ್ತಲೇ ಇದೆ

ಸಾಗಿಯೇ ಇರುವ ಈ ಜಗವ್ಯಾಪಾರದ ಜಂಜಡದಲ್ಲಿ
ಗಮನವಿಟ್ಟು ಆಲಿಸಿ
ಭೂಮಿಯ ಮೇಲೆ ಒಂದು ಮೌನ ನರಳಿಕೆ ಇದೆ
ಸೂರ್ಯನ ಕೆಳಗೆ ಇನ್ನೆಲ್ಲೋ ಒಂದು ನಿಟ್ಟುಸಿರು ಬಿಸುಸುಯ್ಯುತ್ತಿದೆ

❖ ಅಶೋಕ ಶೆಟ್ಟರ್ : 'ಶಾಂತಿಸಾಗರ', #೩೭, ತಪೋವನ ನಗರ, ಧಾರವಾಡ-೫೮೦ ೦೦೩ ❖

ಸುನೀತ ಪಂಚಕ

ಸಿ. ಪಿ. ಕೆ.

೧. ಎಚ್ಚರ

ಇದು ಅತಂತ್ರ, ಅನಿದ್ರವಹ ದರಿದ್ರಾವಸ್ಥೆ:
ಬೀಳದಿದ ಸ್ವಪ್ನಗಳ ವರ್ಣರಂಜಿತ ಮುದ್ರೆ;
ಚಿಟ್ಟೆಯಾಗುವ ಮುನ್ನ ತಳೆವ ಕೋಶಗತತ್ವ-
ವಲ್ಲ; ಭೂತಗಳೆಲ್ಲ ಮೈಮರೆತ ಸಮಯದಲಿ
ಜಾಗರದೊಳಿರುವ ಸಂಯಮಿಯ ಸ್ಥಿತಿಯೂ ಅಲ್ಲ!
ಆಗಿಹೋದ ಅನಿಷ್ಟಗಳ ನೆನೆದು, ಬರಲಿರುವ-
ಪಾಯಗಳ ಚಿಂತೆಯೊಳುಪಾಯಗಾಣದೆ ಹೊರಳಿ
ನರಳುವುದೆ ನರಕ? ನೆಮ್ಮದಿಯೆ ಇರುಳಿನ ಹುರುಳು;
ಅದಕೆ ಎರವಾದರೆಲ್ಲಿಂದ ಎರವಲು ತರುವ
ಚಾತುರ್ಯ? "ಕರ್ಮಕೌಶಲ ಯೋಗ." ಯೋಗವಾಗಲಿ,
ಭೋಗವಾಗಲಿ ನಾಸ್ತಿ; ಬುತ್ತಿ ಕೇವಲ ಕರ್ಮ!
ಬೇಗ ಬೆಳಗಾಗಿ ಜಗದಕ್ಷಿ ರಕ್ಷಿಸಲೆಮ್ಮ!

೨. ಭೂತವಾದ

ನಮಗೆ ಬೇಕಾಗಿಲ್ಲ ಭವಿಷ್ಯ ಹೇಳುವ ಮಂದಿ:
ಗೊತ್ತು ನಮಗದು! ಈಗ ಬೇಕಾಗಿಹುದು ಭೂತ
ಹೇಳಬಲ್ಲಂಥ ಜನ! ಐತಿಹ್ಯಗಳ ನಡುವ
ಇತಿಹಾಸ; ಬಣ್ಣಬಣ್ಣದ ಹೂವುಗಳ ನಡುವೆ
ಹಣ್ಣು; ಸೊನ್ನೆಗಳ ನಡುವಣ ಸಂಖ್ಯೆ; ಸಂಧ್ಯಾರಾಗ,
ಇಂದ್ರಚಾಪಗಳ ನಡುವಣ ಹುರುಳು; ಸವಿಸುಳ್ಳು-
ಗಳ ನಡುವೆ ಕಟುವಾದ ದಿಟ; ಹುಡಿಯಡಗಿಸಿದ
ಹೊನ್ನ ಕಣ; ವೈತಾಳಿಕರ ಮಾತುಗಳ ಗುಳ್ಳೆ
ಹಿಂದಿರುವ ಬಿಂದು; ಸಿಂಧುವಿನ ವಿಸ್ತಾರದಲಿ

ಅಲ್ಲೊಂದು ಇಲ್ಲೊಂದು ಹರಳು; ಇರುಳಿನ ನಡುವೆ
ಮಿಂಚುಗೆರೆ; ತೆರೆಮರೆಯ ಒಳಸಂಚುಗಳ ಜಾಲ–
ಇದನೆಲ್ಲ ಹಿಂಗೆಂದು ಹೇಳಬಲ್ಲವರಾರು?
ಅನಾಗತವಿರಲಿ ಅತ್ತ, ಗತಕಾಲಕ್ಕೆ ಕನ್ನ
ಕೊರೆವ ಕೌಶಲ ಯಾರಿಗಿದೆ, ತ್ರಿಲೋಚನ ವಿನಾ?

೩. ನಿಸ್ಸೀಮ

ಗಡಿ ಮೀರಿದವರು, ಗಡಿಯಾರದಾಚೆಗೆ ಕೂಡ
ನಿಂತ ವಿರಳರು; ಹುಟ್ಟಿ, ನೆಲದಲ್ಲಿ, ನಭದಲ್ಲಿ
ಬೇರು ಬಿಟ್ಟವರು; ಹೊಕ್ಕುಳ ಹಂಗ ಹರಿಯದ ವಿ-
ಚಿತ್ರತರ ಮಂದಿ; ಲೇಸಿಗೆ ಹುತಾತ್ಮರು, ಅಲ್ಲ,
ಆತ್ಮಹತರನವರತ ರತರು ಜೀವಸ್ತೋಮ
ಹಿತದಲ್ಲಿ: ಇತಿಹಾಸ ಸ್ಥಾವರಕೆ ಜಂಗಮತೆ
ಸಮನಿಸಿದ ಬೆರಗು! ನೆತ್ತರು, ಬೆವರು ಮನುಕುಲಕೆ
ಅಮೃತವಾದವರು; ತೀಡಿತ್ತು ಪರಿಮಳದುಸಿರು
ಮರುಭೂಮಿಯಲ್ಲಿ; ಕತ್ತಲ ನಡುವೆ ಕೋಲ್ಮಿಂಚು!
ಕಾಡುಪಾಪಗಳ ಪಳಗಿಸುವ ಪರವಿದ್ಯೆಯಲಿ,
ಗರುಡಮಂತ್ರದಲಿ, ಪಶುವಶದಲ್ಲಿ ಪರಿಣತರು;
ಮೂರು ಕಣ್ಣುಗಳಲ್ಲಿ ಮೂಲೋಕ ಕಂಡವರು;
ವಿಶ್ವದ ಕುಟುಂಬಕದ ಸುಖದ ಮಂಗಳಸೂತ್ರ
ಹಿಡಿದವರು: ಒಳ ಹೊರಗು ಸಂಪೂರ್ಣ ಸತ್ಪಾತ್ರ!

೪. ಪ್ರಶ್ನೆ

ಎಲ್ಲಿ ಪ್ರತ್ಯೇಕ? ಪ್ರಶ್ನೋಪನಿಷತ್ತು ಇಡೀ
ಬದುಕು; ಅಂತೆ ಸೃಷ್ಟಿ! ಇಲ್ಲ ಉತ್ತರಕಾಂಡ!
ಹೆಡೆಯೆತ್ತಿದ ಹಾವುಗಳ ಸಾವಿಲ್ಲದ ಸರಣಿ:
ಏನು? ಏಕೆ? ಹೇಗೆ? ಯಾರು? ಎಲ್ಲಿಂದ? ಎಲ್ಲಿಗೆ?–
ಇವುಗಳದೇ ವಿಶ್ವರೂಪ! ಧರ್ಮ ಕಲೆ ಸಾಹಿತ್ಯ
ತತ್ತ್ವಶಾಸ್ತ್ರಗಳೆಲ್ಲ ತಿಣುಕುತ್ತಿವೆ ಬಿಡಿಸಲು;
ಗೋಜಲುಗಳ ಉತ್ತರೋತ್ತರ; ಪಾರಾವಾರ
ಹಬ್ಬಿ ನಿಂತಿವೆ ಮುಂದೆ; ಒಗಟು ಮುಂಡಿಗೆ ಸವಾಲು
ಪ್ರಹೇಳಿಕೆಯ ಹೇಳಿಗೆ! ಯಾವ ಹೇಳಿಕೆ ತಾನೆ
ಬರಿದು ಮಾಡೀತು? ಇದೊ, ಯಾತ್ರೆ ನಡೆದಿದೆ ಪ್ರಶ್ನೆ-
ಯಿಂದ ಮತ್ತೆ ಪ್ರಶ್ನೆಗೆ! ಅಥವಾ ಪ್ರಶ್ನೆ ಸ್ಥಾಯಿ,
ಉತ್ತರವೊ ಸಂಚಾರಿ; ಕೊಟ್ಟು ದಣಿದಿದೆ ಬಾಯಿ!

೫. ರತ್ನಾಕರ

ಬತ್ತುವವು ಕಿರುಕೊಳ, ಕುಂಟೆ; ಬತ್ತುವುದುಂಟೆ
ಕಡಲ ವಿಸ್ತೀರ್ಣ? ಬತ್ತಿದರೆ ಹಳ್ಳಗಳೊಡಲು,
ಏನುಂಟು ಅಲ್ಲಿ? ಕಿರು ಜಲಚರಗಳವಶೇಷ!
ಅಕ್ಷಯಾನಂತ ಸಾಗರ ಮುತ್ತುರತ್ನಗಳ,
ಹವಳಗಳ ಮುಗಿಯದಾಕರ; ಮಹಾತಿಮಿ ತಿಮಿಂ-
ಗಿಲ ಬೃಹನ್ಮಕರ ರುಂದ್ರನಿವಾಸ! ಅಂತಿರಲಿ.
ಲಾವಣ್ಯ ಶರಧಿ: ಬದುಕಿಗೆ ರುಚಿಯನೀವಂಥ
ರುಚಿರಾಜ ಉಪ್ಪು ಅದು ಕೊಡುವ ನಿರುಪಮ ದಾನ!
ಕಡಲ ರೂಪಾಂತರವೆ ಮುಗಿಲು. ಬಹುಪಾಲು ಭೂ
ಸಮುದ್ರ! ಹೊಳೆ ಕೆರೆಗಳಲಿ ತೇಲುವುವು ಕಿರುದೋಣಿ;
ಕಡಲಿನೆದೆಯಲಿ ಭಾರಿ ಹಡಗುಗಳ ಸಂಚಾರ:
ಮಹಾನುಭಾವರ ಹೃದಯ ಕಡಲು; ಎಲ್ಲಿದೆ ಪಾರ?

✣ ಡಾ. ಸಿ. ಪಿ. ಕೃಷ್ಣಕುಮಾರ್ :
೨೨೬೫/೧೯, ಭಾರತಿ, ೬ನೇ ಕ್ರಾಸ್. ವಿನಾಯಕನಗರ, ಮೈಸೂರು - ೫೭೦ ೦೧೨ ✣

ಈ ದೇವರು — ಶಂಕರಗೌಡ ಎಂ. ಸಾತ್ಮಾರ

ಒಂದೊಮ್ಮೆ ಈ ದೇವರು
ಮನೆ ಜಗಲಿ ಏರಿದವು
ಮನೆ ಮಂದಿಗೆ ಭಕ್ತಿ ನೀಡಿದವು
ಮತ್ತೊಮ್ಮೆ ಈ ದೇವರು
ಊರ ಗುಡಿ, ಮಸೀದೆ, ಚರ್ಚು ಸೇರಿದವು
ಊರ ಮಂದಿಗೆ ಭಕ್ತಿ ನೀಡಿದವು
ಅನಂತರ ಈ ದೇವರು
ತೇರು, ಜಾತ್ರೆ. ಉರುಸು ಆದವು
ಹತ್ತೂರ ಮಂದಿಗೆ ಭಕ್ತಿ ನೀಡಿದವು
ಈಗ ಈ ದೇವರು
ಬಂದೂಕು ಬಾಂಬು ಆದವು
ಊರೂರು, ದೇಶ-ವಿದೇಶ ಸುತ್ತಿ
ಸಾವು ನೀಡಿದವು.

✣ ಶಂಕರಗೌಡ ಎಂ. ಸಾತ್ಮಾರ : #೫೨, ೬ನೇ ಕ್ರಾಸ್, ೧ನೇ ಮೇನ್, ರಾಧಾಕೃಷ್ಣನಗರ
ಗೋಕುಲ ರಸ್ತೆ, ಹುಬ್ಬಳ್ಳಿ-೫೮೦ ೦೩೦ ✣

ಶ್ರೀರಂಗ ವಾಙ್ಮಯ : ಆತ್ಮಕಥೆ ಹಾಗೂ ಜೀವನಚಿತ್ರಗಳು

ಎಂ. ಜಿ. ಹೆಗಡೆ

ಶ್ರೀರಂಗರು ೧೯೩೭ ರಲ್ಲಿ ಬರೆದ 'ರಂಗಭೂಮಿಯ ಮಹಿಮೆ' ಎಂಬ ಲೇಖನದಿಂದ ಒಂದು ಮಾತನ್ನು ಆಮೂರರು ಉದ್ಧರಿಸಿದ್ದಾರೆ : 'ರಂಗಭೂಮಿಯು ಗುಪ್ತಪ್ರಪಂಚದ ಬಹಿರಂಗ ಭೂಮಿಯಾಗಿರಬೇಕು. ಅಂತರಂಗದಲ್ಲಿ ನಡೆಯುತ್ತಿರುವ ವಿಷಯಗಳನ್ನು ಹೊರಕ್ಕೆ ತಂದು ವಿಮರ್ಶೆಗಾಗಿ ನಿಲ್ಲಿಸುವ ಶುಭ ಸ್ಥಾನವೇ ರಂಗಭೂಮಿ.' ಅವರ ಆತ್ಮಕಥೆ ಸಾಹಿತಿಯ ಆತ್ಮಜಿಜ್ಞಾಸೆಯಲ್ಲಿಯೂ ಸಹ ಆ ಕೃತಿಯ ಸ್ವರೂಪದ ಕುರಿತು ಇಂತಹುದೇ ಮಾತುಗಳಿವೆ : 'ಮನುಷ್ಯನ ಅಂತರ್ಯವನ್ನು ಚಿತ್ರಿಸುತ್ತಿದ್ದ ಶ್ರೀರಂಗನಿಗೆ ತನ್ನ ಅಂತರ್ಯವನ್ನೇ ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಇದು... ಅನುಭವ ವಿಮರ್ಶೆಯ ಪ್ರಾಮಾಣಿಕ ವರದಿ ಇಲ್ಲಿದೆ...' ಮುಂತಾಗಿ.

ಅಂದರೆ, ಶ್ರೀರಂಗರು ಆತ್ಮಕಥೆಯನ್ನೂ ಸಹಿತ ಒಂದು ರಂಗಭೂಮಿ, ಅಂತರಂಗದಲ್ಲಿ ನಡೆದ ವಿಷಯಗಳನ್ನು ಹೊರಕ್ಕೆ ತಂದು ವಿಮರ್ಶೆಗಾಗಿ ನಿಲ್ಲಿಸುವ ಶುಭ ಸ್ಥಾನ ಅಂತಲೇ ತಿಳೀತಾರೆ. ಇದಕ್ಕೆ ಅನುಗುಣವಾಗಿ ಆತ್ಮಜಿಜ್ಞಾಸೆಗೆ ಅನುಬಂಧವಾಗಿ ಜೋಡಿಸಿರುವ ನಾಲ್ಕಾರು ಟಿಪ್ಪಣಿಗಳು / ಲೇಖನಗಳನ್ನು ಬಿಟ್ಟು ಓದಿದರೆ ಆತ್ಮಜಿಜ್ಞಾಸೆಯೂ ಸಹಿತ ಶ್ರೀರಂಗರಿಗೆ ಬಹಳ ನೆಚ್ಚಿನದಾದ ಮೂರಂಕಿನ ನಾಟಕದ ಶಿಲ್ಪವನ್ನು ಹೊಂದಿರೋದು ಕಂಡುಬರ್ತದೆ :

ಮೊದಲನೇ ಅಂಕದ ಕಥಾನಾಯಕ : ಆರ್. ವ್ಹಿ. ಜಾಗಿರದಾರ
ಕಾಲ : ಬಾಲ್ಯದ ದಿನಗಳಿಂದ ಹಿಡಿದು ೧೯೫೪ ರ ವರೆಗೆ
ಆವರಣ : ಬಹುತೇಕವಾಗಿ ಧಾರವಾಡ

ಈ ಅಂಕದಲ್ಲಿ ಕಂಡುಬರುವ ೧. ಕರ್ನಾಟಕ ಕಾಲೇಜಿನ ಪ್ರೊಫೆಸರ್, ೨. ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿ, ೩. ಅಖಿಲ ಕರ್ನಾಟಕ ಏಕೀಕರಣ ಸಂಘದ ಪದಾಧಿಕಾರಿ, ೪. ಕರ್ನಾಟಕ ವಿಶ್ವವಿದ್ಯಾಲಯ ಸಂಘದ ಮುಂಚೂಣಿಯ ಹೋರಾಟಗಾರ –ಈ ಪಾತ್ರಗಳನ್ನು ಶ್ರೀರಂಗರು ನಾಟಕದ ಪರಿಭಾಷೆಯಲ್ಲೇ ವ್ಯಾಖ್ಯಾನಿಸ್ತಾರೆ :

• 'ಇವೆಲ್ಲ ನನ್ನ ಜೀವನಧ್ಯೇಯಕ್ಕೆ ಸಂಬಂಧಿಸಿಲ್ಲದೆ ನಾನು ಕೆಲಕಾಲ ನಿರ್ವಹಿಸಿದ ಪಾತ್ರಗಳು'. • 'ಇವೆಲ್ಲ ಜೀವನಪ್ರವಾಹದಲ್ಲಿ ಆನುಷಂಗಿಕ ಅನುಭವಗಳಾಗಿವೆ'. • 'ನನ್ನ ವಿಷಯದಲ್ಲಿ ಆನುಷಂಗಿಕ ಅನುಭವ ಹೆಚ್ಚಾಗಿದೆ; ವಿವಿಧವಾಗಿದೆ– ಏಕೆ? ಹೇಗೆ? ಎಂಬುದನ್ನು ತಿಳಿಯುವ ಕುತೂಹಲ ಈ ಅಂಶವನ್ನು ಬರೆಯುವುದಕ್ಕೆ ಕಾರಣವಾಗಿದೆ.'

ಆನುಷಂಗಿಕ ಅನುಭವ ನಿಬಿಡತೆಯ ಈ ಭಾಗದಲ್ಲಿ ಅವರು ಬಳಸುವ ದೃಷ್ಟಾಂತ, ಬೆಳೆಸುವ ಪ್ರತಿಮೆ ಅಂತ ಹೇಳಿದ್ರೆ ಪ್ರವಾಹದ್ದು; ಬೇರೆ ಬೇರೆ ಕಡೆಗಳಿಂದ ಹರಿದು ಬರುವ ಎಲ್ಲ ನೀರು ಒಂದೆಡೆ ಸೇರಿ ನದಿಯಾಗುವ ದೃಷ್ಟಾಂತದ್ದು. ಈ ದೃಷ್ಟಾಂತದ ಎರಡು ವ್ಯಾಖ್ಯಾನಗಳನ್ನು ಶ್ರೀರಂಗರೇ ನೀಡಿದ್ದಾರೆ : ಒಂದು– ನದಿಯ ನೀರಿನಲ್ಲಿ ಇದು ಇಂಥ ಝರಿಯ ಅಂಶ, ಇದು ಬೇರೆ ಝರಿಯ ಅಂಶ ಅಂತ ಹೇಳೋಕಾಗೋದಿಲ್ಲ; ಪ್ರತಿಯೊಂದು

ಝರಿಯ ನೀರು ಸೇರಿ ನದಿಯಾಗಿದೆ. ಇನ್ನೊಂದು– ನೀರಿನ ಒಂದೊಂದು ಹನಿಯಲ್ಲೂ ಎಲ್ಲಾ ಝರಿಗಳ ನೀರೂ ಇರಬಲ್ಲದು. ಮನುಷ್ಯನ ಜೀವನ ಪ್ರವಾಹವೂ ಹಾಗೆಯೇ. ಅದರಲ್ಲಿ ಬೇರೆ ಬೇರೆ ಬಗೆಯ ಅನುಭವ ಝರಿಗಳು ಸಮರಸವಾಗಿರ್ತವೆ. ಹೀಗಾಗಿ, ಬೇರೆ ಬೇರೆ ಝರಿಗಳನ್ನು ಅವುಗಳ ಉಗಮಸ್ಥಾನದಿಂದ ಹಿಂಬಾಲಿಸ್ತಾ ಬಂದು ನದಿಯ ತಟಾಕದ ಮೇಲೆ ನಿಲ್ಲುವ– ಕಾಲಾನುಕ್ರಮಣಿಕೆಯನ್ನು ಧಿಕ್ಕರಿಸಿ ವ್ಯಕ್ತಿತ್ವದ ಬಹುಮುಖತೆಯನ್ನು ದಾಖಲಿಸುವ– ವಿನ್ಯಾಸವನ್ನು ನಾವು ಈ ಭಾಗದಲ್ಲಿ ಕಾಣ್ತೇವೆ.

ಕೊನೆಯ ಅಂಕದ ಕಥಾನಾಯಕ, ಶ್ರೀರಂಗರೇ ಗುರುತಿಸಿರುವಂತೆ, ರಂಗಭೂಮಿಯ ಮುನ್ನಡೆಗಾಗಿ ಆಕಾಂಕ್ಷೆ ಇಟ್ಕೊಂಡು ಮಡೀತಿರೋವಂತಹ ಹಾಗೂ ಸುಖ-ದುಃಖ, ಸಿಹಿ-ಕಹಿ, ಎಡ-ಬಲ, ಸೋಲು-ಗೆಲುವು ದ್ವಂದ್ವಗಳಿಂದ ಪಾರಾಗಿರುವ, ಸ್ಥಿತಪ್ರಜ್ಞನಾದ ಆದ್ಯರಂಗಾಚಾರ್ಯ.

ಕ್ರಿಯಾಸ್ಥಾನ : ಬಹುತೇಕವಾಗಿ ಬೆಂಗಳೂರು

ಕಾಲಾವಧಿ : ಆದ್ಯರಂಗಾಚಾರ್ಯ ಸ್ಥಿತಿಯ ಬಾಲ್ಯ ೧೯೪೫ ರಿಂದ ಹಿಡಿದು ಆತ್ಮಜಿಜ್ಞಾಸೆಯ ಎರಡನೇ ಭಾಗವನ್ನು ಮುಗಿಸ್ತಾ 'ಈಗ ನನ್ನ ವ್ಯಕ್ತಿತ್ವ ಪೂರ್ತಿಯಾಗಿ ರೂಪುಗೊಂಡಿದೆ' ಅಂತ ಅನಿಸಿರುವ ವರೆಗೆ.

ಕುತೂಹಲದ ಸಂಗತಿ ಅಂದ್ರೆ ಈ ಅಂಕದಲ್ಲಿ ಅವರು ನದಿಯ ಪ್ರತಿಮೆಯನ್ನು ಬಿಟ್ಟುಕೊಟ್ಟು ದಾರಿಯ ಪ್ರತಿಮೆಯನ್ನು ಬೆಳೆಸ್ತಾರೆ. ಈ ಭಾಗದ ಆರಂಭದಲ್ಲೇ ನಾವು ಒಂದು ಭಗ್ನ ಪ್ರತಿಮೆಯನ್ನು ಕಾಣ್ತೇವೆ : 'ಮನುಷ್ಯನ ಕಾಮಶಕ್ತಿ (will power) ಮತ್ತು ಪ್ರಪಂಚದ ಪರಿಸ್ಥಿತಿ ಇವೆರಡರಲ್ಲಿ ಪರಿಸ್ಥಿತಿ ದಾರಿಯಂತೆ, ಕಾಮಶಕ್ತಿ ಚಕ್ರದಂತೆ. ದಾರಿಗುಂಟ ಹೋದರೆ ಚಕ್ರಗತಿ ಸುಲಭ, ಗತಿಗೆ ವೇಗ. ನಾನು ಆದ್ಯರಂಗಾಚಾರ್ಯ ಆದಾಗ ಚಕ್ರ ಮುರಿದಿತ್ತು. ದಾರಿ ಕಾಣದಾಗಿತ್ತು.'

ಹಾಗಾದ್ರೆ ಆದ್ಯರಂಗಾಚಾರ್ಯರ ಪ್ರಯಾಣ ಸಾಗಿದ್ದು ಹೇಗೆ? ಶ್ರೀರಂಗರೇ ಯಾವ ಉತ್ತರ ಕೊಡ್ತಾರೆ ಅನ್ನೋದನ್ನ ಆಮೇಲೆ ನೋಡೋಣ. ಸದ್ಯಕ್ಕೆ ಜಿಜ್ಞಾಸೆಯ ಈ ಭಾಗದಲ್ಲಿ ಪ್ರವಾಹಪತಿತ ಅಪರಿಹಾರ್ಯತೆಯ ನದಿ ಪ್ರತಿಮೆಗೆ ಬದಲಾಗಿ ಮನುಷ್ಯನ ಸಂಕಲ್ಪ ಶಕ್ತಿಯನ್ನು ವಿಶೇಷೀಕರಿಸುವ (prioritize ಮಾಡುವ) ಪ್ರಪಂಚದ ಪರಿಸ್ಥಿತಿ – ಕಾಮಶಕ್ತಿ, ದಾರಿ – ರಥದ ಚಕ್ರ ಈ ಪ್ರತಿಮೆ ಕೇಂದ್ರಕ್ಕೆ ಬಂದಿದೆ ಎಂಬುದನ್ನು ಗುರುತಿಸಿಕೊಂಡ್ರೆ ಸಾಕು.

ನಮಗೆಲ್ಲ ತಿಳಿದಿರುವಂತೆ 'ನದಿ' ಮತ್ತು 'ದಾರಿ' ಬದುಕಿನ ಕುರಿತು ಮತ್ತೆ ಮತ್ತೆ ಬಳಕೆಯಾಗಿರುವ ಹಳೇ ಪ್ರತಿಮೆಗಳಾಗಿವೆ. ಈ ಪ್ರತಿಮೆಗಳ ಮಧ್ಯದಲ್ಲಿ ಇನ್ನೊಂದು ಪ್ರತಿಮೆ ಬರ್ತದೆ. ಅದನ್ನಷ್ಟು ನೋಡಿ ಮುಂದುವರಿಯೋಣ.

ಎರಡನೇ ಅಂಕದ ನಾಯಕ : ನಟ - ನಾಟಕಕಾರ - ನಾಟ್ಯಾಭಿಮಾನಿ ಶ್ರೀರಂಗ

ಕಾಲಾವಧಿ : ಜಾಗಿರದಾರ ಹಾಗೂ ಆದ್ಯರಂಗಾಚಾರ್ಯ ಅವಸ್ಥೆಗಳಲ್ಲಿ ಹಂಚಿಹೋಗಿದೆ.

ಈ ಅಂಕದಲ್ಲಿ ನದಿ ಮತ್ತು ದಾರಿಯ ಪ್ರತಿಮೆಗೆ ಬದಲಾಗಿ ಹೊಸ ಕಥಾನಾಯಕನ ಮನೋಭಾವಕ್ಕೆ ಅನುಗುಣವಾಗಿರುವ ಸೂತ್ರದ ಪ್ರತಿಮೆ ಕೇಂದ್ರಕ್ಕೆ ಬಂದಿದೆ :

- 'ನಾಟ್ಯಸೂತ್ರವು ನನ್ನ ಐವತ್ತಕ್ಕೆ ಮಿಕ್ಕಿದ ವರ್ಷಗಳನ್ನು ಹೇಗೆ ಏಕಸೂತ್ರವಾಗಿ ಜೋಡಿಸಿವೆ

ಎಂಬುದನ್ನು ತೋರಿಸೋದೇ ಈ ಜಿಜ್ಞಾಸಾ ಭಾಗದ ಉದ್ದೇಶ.' • 'ಇದು ಒಂದು ರೀತಿಯಲ್ಲಿ ಸ್ವಗತ.' • 'ಜೇಡರ ಹುಳು ತನ್ನ ಸುತ್ತ ಸೂತ್ರವನ್ನು ಹೆಣೆಯುವಂತೆ ನನ್ನ ನಾಟಕಗಳು ಯಾವ ಆವರಣದಲ್ಲಿ ರಚಿತವಾಗಿದ್ದವೊ ಅದೇ ವಾತಾವರಣವನ್ನು ಮತ್ತೆ ಹೆಣೆಯುತ್ತಿದ್ದೇನೆ.'

ಈ ಅಂಕದ ಕೊನೆಯಲ್ಲಿ ಬರುವ ಮಾತು : 'ನಾಟ್ಯ ಜೀವನದ ಈ ದೃಶ್ಯ ಮುಗಿದುದಕ್ಕೆ ತೆರೆಯನ್ನಿಳಿಬಿಡ್ತೇನೆ.'

* * *

ಶ್ರೀರಂಗರು ಬರೆದಿರುವ ಎರಡು ಜೀವನಚರಿತ್ರೆಗಳನ್ನು ಇಲ್ಲಿಯೇ ಪ್ರಸ್ತಾಪಿಸಬಹುದು. ಜಿಜ್ಞಾಸೆಯಂತೆ ಇವೂ ಸಹಿತ ಮೂರಂಕಿನ ನಾಟಕಗಳೇ ಆಗಿವೆ. **ತರುಣ ತುರ್ಕಸ್ಥಾನ ಅರ್ಥಾತ್ ಕೆಮಾಲ ಪಾಶಾ** (೧೯೩೭) ಪುಸ್ತಕದಲ್ಲಿ ಶ್ರೀರಂಗರಿಗೆ ತಮ್ಮ ಕಥಾನಾಯಕನ ಕುರಿತು ರೋಮಾಂಚನಪೂರಿತ ಉದ್ವೇಗವಿದೆ. **ನಮ್ಮ ನೆಚ್ಚಿನ ನೆಹರೂ** (೧೯೬೪) ಪುಸ್ತಕ ಬರೆಯುವಾಗ ಆ ಉದ್ವೇಗ ಮಾಯವಾಗಿ ವ್ಯಕ್ತಿವಿಶಿಷ್ಟತೆಯ ಕುರಿತು ಕುತೂಹಲ ಮಾತ್ರ ಇದೆ. ಪಾಶಾ ಕುರಿತ ಪುಸ್ತಕದ ಶೈಲಿಯ ಒಂದೆರಡು ಝಳಕನ್ನಾದರೂ– ಉದಾಹರಣೆಗೆ ಅವೈದಿಕ ವಿರಾಟ ಪುರುಷನ ಪೂರ್ಣ ಪ್ರಮಾಣದ ಸಮರ್ಥನೆಯ ಧಾಟಿ ಹಾಗೂ ಧೋರಣೆ– ನಾವು **ಆತ್ಮಜಿಜ್ಞಾಸೆಯ** ಮೂರನೇ ಅಂಕದ ಸ್ವ-ಸಮರ್ಥನೆಯ ಧಾಟಿ ಹಾಗೂ ಧೋರಣೆಯಲ್ಲಿ ಕಾಣ್ತೇವೆ. ಇದೇ ರೀತಿ **ನೆಹರೂ** ಪುಸ್ತಕದಲ್ಲಿ ಕಾಣುವ ವ್ಯಕ್ತಿತ್ವದ ವಿಕಾಸದ ಕಲ್ಪನೆ **ಆತ್ಮಜಿಜ್ಞಾಸೆ**ಯಲ್ಲಿ ಕಾಣುವ ವ್ಯಕ್ತಿ, ವ್ಯಕ್ತಿತ್ವದ ಕಲ್ಪನೆಗೆ ಪೂರ್ತಿಯಾಗಿ ಸಂವಾದಿಯಾಗಿದೆ. ಚಾರಿತ್ರಿಕ ಕುತೂಹಲವನ್ನು ಮಾತ್ರ ಕೆರಳಿಸಬಹುದಾದ ಈ ಪುಸ್ತಕಗಳ ಬಗ್ಗೆ ಇಷ್ಟೇ ಮಾತು ಹೇಳಿ ಇವನ್ನು ಮತ್ತೆ ಪ್ರಸ್ತಾಪಿಸದೇ **ಆತ್ಮಜಿಜ್ಞಾಸೆ**ಗೆ ವಾಪಸಾಗ್ತೇನೆ.

* * *

ಆತ್ಮಜಿಜ್ಞಾಸೆಯ ಶಿಲ್ಪದ ಬಗ್ಗೆ ಹೇಳ್ತಿದ್ದೆ : ಅದು ಮೂರಂಕಿನ ನಾಟಕದ ಶಿಲ್ಪ; ಒಂದೊಂದು ಅಂಕದಲ್ಲೂ ಒಂದೊಂದು ಕೇಂದ್ರ ಪ್ರತಿಮೆ ಇದೆ; ಮತ್ತೆ ಕೃತಿಯುದ್ದಕ್ಕೂ ನಾಟಕದ ಪ್ರತಿಮೆಗಳು ಮತ್ತೆ ಮತ್ತೆ ಕಾಣಿಸಿಕೊಳ್ತಾವೆ ಅಂತ. ಮತ್ತೆ, **ಆತ್ಮಜಿಜ್ಞಾಸೆ**ಯಲ್ಲಿ ಜಿಜ್ಞಾಸೆಯಷ್ಟೇ ಶಿಲ್ಪ ನಿರ್ಮಾಣ ಕೂಡ ಮುಖ್ಯವಾಗಿದೆ ಹಾಗೂ ಶಿಲ್ಪವೂ ಜಿಜ್ಞಾಸೆಗೆ ಪೂರಕವಾಗಿದೆ ಎಂದು ಹೇಳಿದೆ. ಬಹುಶಃ ಈ ಕಾರಣದಿಂದಲೇ ಶ್ರೀರಂಗರು ಜಿಜ್ಞಾಸೆಯ ಶುರುವಿನಲ್ಲೇ ಕಲ್ಪನಾಮೂಲವಾದ ಜ್ಞಾನ – ಅನುಭವಮೂಲವಾದ ಜ್ಞಾನ, Fact – Fiction ಇವುಗಳ ವ್ಯತ್ಯಾಸವನ್ನು (ಇಂದಿನ postmodernistರಂತೆ) ಒಡೆದು ಹಾಕಿ ಆತ್ಮಕಥೆ ಅಂದ್ರೆ ಪೂರ್ತಿ ವಾಸ್ತವಿಕವಾಗಿ ನಡೆದುದರ ಕಥೆ ಎನ್ನಲಾಗದು ಎಂಬ ತೀರ್ಮಾನಕ್ಕೆ ತಲುಪ್ತಾರೆ. ಈ ಎಳೆಯನ್ನೇ ಮುಂದುವರಿಸ್ತಾ ಅವರು ಕೃತಿಯುದ್ದಕ್ಕೂ ಮತ್ತೆ ಮತ್ತೆ ತಮ್ಮದು ಆತ್ಮಕಥೆ ಆಗಿರದೇ ಆತ್ಮಜಿಜ್ಞಾಸೆಯಾಗಿದೆ ಎಂದು ನೆನಪಿಸ್ತಾರೆ ಹಾಗೂ 'ಆತ್ಮಜಿಜ್ಞಾಸೆ' (Reflective Autobiography) ಎಂಬ ಉಪಪ್ರಭೇದವನ್ನು ಕಲ್ಪಿಸಿ ಅದನ್ನು ವಿಸ್ತಾರವಾಗಿ ಚರ್ಚಿಸ್ತಾರೆ. ಈ ಪ್ರಭೇದದ ಒಂದು ಲಕ್ಷಣ ಅಂದ್ರೆ ಆತ್ಮಕಥೆಗೆ ಸಾಧ್ಯವಾಗದಿದ್ದಂತಹ ಆದಿ-ಅಂತ್ಯಗಳು ಇದಕ್ಕೆ ಸಾಧಿಸ್ತವೆ.

'ಇದೀಗ ನನ್ನ ವ್ಯಕ್ತಿತ್ವ ಪೂರ್ತಿಯಾಗಿ ರೂಪುಗೊಂಡಿದೆ' ಅನ್ನೋ ಬಗೆಯ ಮಾತು ಈ ಪ್ರಭೇದದಲ್ಲಿ ಮಾತ್ರ ಕೇಳಿಸಲು ಸಾಧ್ಯ. ಈ ಪ್ರಕಾರದ ಇನ್ನೊಂದು ಲಕ್ಷಣ ಅಂದ್ರೆ

ಬದುಕಿನ ಕುರಿತು, ಅದರ ಅರ್ಥದ ಕುರಿತು, ಕಥಿತ ವ್ಯಕ್ತಿಯ ಬದುಕಿನ ಅರ್ಥದ ಕುರಿತು ಆಳವಾದ ಹಾಗೂ ಸೂಕ್ಷ್ಮವಾದ reflection / ಚಿಂತನೆಯನ್ನು ಅದು ಒಳಗೊಂಡಿರ್ತದೆ. ಕೊನೆಯದಾಗಿ ಕಥಿತ ವ್ಯಕ್ತಿಯ ಬದುಕಿನ ದೃಷ್ಟಿಕೋನ, ಗ್ರಹಿಕೆ, ಗೃಹೀತಗಳು ಹಾಗೂ ಅವನ ಸಾಂಸ್ಕೃತಿಕ ಹಾಗೂ ideological ಪರಿಸರದ ದೃಷ್ಟಿಕೋನ, ಗ್ರಹಿಕೆ, ಗೃಹೀತಗಳು– ಇವುಗಳ ನಡುವೆ ಒಂದು ವಿಮರ್ಶಾತ್ಮಕ ದೂರ ಸದಾ ಉಳಿದುಕೊಳ್ತದೆ. ಶ್ರೀರಂಗರಂತೂ ಸನ್ನಿವೇಶಗಳ ವ್ಯತ್ಯಾಸ, ವಿನೋದ ದೃಷ್ಟಿ ತಮ್ಮ ಸ್ವಭಾವವೇ ಆಗಿದೆ ಎಂದಿದ್ದಾರೆ. ಹೀಗಾಗಿ ಕೃತಿಯುದ್ದಕ್ಕೂ ಯೋಜಿಸಿದ್ದು-ಆಗಿದ್ದು, ವ್ಯಕ್ತಿ-ಸಮಾಜ ಇತ್ಯಾದಿ ವ್ಯತ್ಯಾಸಗಳ ಜಿಜ್ಞಾಸೆ ನಡೆದಿರುವುದನ್ನು ನಾವು ನೋಡ್ತೇವೆ.

ಹೀಗೆ ಸಾಹಿತಿಯ ಆತ್ಮಜಿಜ್ಞಾಸೆ ಏಕಕಾಲದಲ್ಲಿ ಒಂದು ಚಿಂತನಪ್ರಧಾನವಾದ (Reflective autobiography– ಅಂದರೆ, ಬರೀತಿರೋ 'ಆತ್ಮ'ದ 'ಕಥೆ'ಯ ಅರ್ಥದ ಕುರಿತು, ಹಾಗೂ ಬದುಕಿನ ಕುರಿತು ಆಳವಾಗಿ ಚಿಂತಿಸುವ ಕೃತಿ) ಹಾಗೂ ಸ್ವಾಭಿಮುಖಿಯಾದ (Reflexive autobiography– ಅಂದರೆ, ತನ್ನ ಸ್ವ-ರೂಪದ ಕುರಿತು ಜಾಗೃತವಾಗಿರುವ, ತನ್ನ ರೂಪದ ಕಡೆ ಪ್ರಜ್ಞಾಪೂರ್ವಕವಾಗಿ ಲಕ್ಷ್ಯ ಸೆಳೆಯುವ ಕೃತಿ) ಮತ್ತೆ, ಈ ಕಾರಣದಿಂದ ಕನ್ನಡ ಆತ್ಮಕಥೆಗಳಲ್ಲೇ ಅತ್ಯಂತ ವಿಶಿಷ್ಟವಾದ ಆತ್ಮಕಥೆಯಾಗಿದೆ.

* * *

ಹಾಗಾದರೆ ಈ ಆತ್ಮಜಿಜ್ಞಾಸೆಯಲ್ಲಿ ಮಂಡಿತವಾಗಿರುವ 'ಆತ್ಮ'(self)ದ ಕಲ್ಪನೆ ಯಾವ ಬಗೆಯದು? ಇದರಲ್ಲಿ ಪ್ರಕಟವಾಗಿರುವ self ದ ಕಲ್ಪನೆಗೂ ಅದರ ಮೂರು ಅಂಕಗಳಲ್ಲಿ ಕ್ರಮವಾಗಿ ಬಳಕೆಯಾದ ನದಿ, ಸೂತ್ರ, ದಾರಿ ಈ ಪ್ರತಿಮೆಗಳಿಗೂ ನೇರವಾದ ಸಂಬಂಧವಿದೆ ಎನ್ನುವ ಅಂಶದೊಂದಿಗೆ ನನ್ನ ಮಾತು ಮುಗಿಸ್ತೇನೆ.

ಆತ್ಮಜಿಜ್ಞಾಸೆಯ ಮೊದಲನೇ ಅಂಕದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಒಂದು ಭಾವ ಅಂದರೆ ಅದು ವಿಸ್ಮಯದ್ದು. ತೀರದಲ್ಲಿ ನಿಂತು ಪ್ರವಾಹದ ಗತಿಯನ್ನು, ಅದು ತೆಗೆದುಕೊಳ್ಳುವ ಅನಿರೀಕ್ಷಿತ ತಿರುವುಗಳನ್ನು ಕಂಡಾಗಿನ ವಿಸ್ಮಯ ಅದು. ಉದಾಹರಣೆಗೆ ಜಾಗಿರದಾರರು ಗಾಂಧೀಜಿ ಹಾಗೂ ನೆಹರೂರನ್ನು ಭೆಟ್ಟಿಯಾದ ಸಂದರ್ಭಗಳ ನಿರೂಪಣೆಯನ್ನು ನೋಡಬಹುದು. ಗಾಂಧೀ ಭೆಟ್ಟಿಯ ಸಂದರ್ಭದಲ್ಲಿ ಅವರು ಆ ಭೆಟ್ಟಿಯನ್ನು ದೊರಕಿಸಿಕೊಂಡಿದ್ದೇ 'ಮಹಾತ್ಮಾಜಿ ದೇಶದ ತರುಣರನ್ನು ತಪ್ಪು ದಾರಿಗೆ ಎಳೀತಿದ್ದಾರೆ, ಈ ಬಗ್ಗೆ ಮಾತಾಡಬೇಕಿದೆ' ಅಂತ ಗಾಂಧೀಜಿಗೆ ಒಂದು ಚೀಟಿಯನ್ನು ಕಳಿಸಿ, ಆ ಭೆಟ್ಟಿಯ ವಿವರಗಳಲ್ಲಿ 'ಎಲ್ಲಿಂದ ಬಂತು ನನಗೆ ಇದೆಲ್ಲ ಧೈರ್ಯ?'– ಎಂಬ ವಿಸ್ಮಯಭಾವ ಬಹಳ ಸ್ಪಷ್ಟವಾಗಿ ಬಂದಿದೆ. ಅದೇ ರೀತಿ ನೆಹರೂರನ್ನು ಭೆಟ್ಟಿಯಾಗಿ 'ಭಾಷಾವಾರು ಪ್ರಾಂತ್ಯರಚನೆ ಅಗತ್ಯವಾಗಿದೆ' ಅಂತ ವಾದಿಸಿದಾಗಲೂ 'ಎಲ್ಲಿಂದ ಬಂದು ಈ ಧೈರ್ಯ? ಅಲ್ಲಿ ಹೇಳಿದ ಮಾತುಗಳನ್ನು ಆ ದಿನದ ವರೆಗೂ ಬಹಿರಂಗವಾಗಿ ಚರ್ಚಿಸಿದ್ದೇ ಇರಲಿಲ್ಲ'– ಎಂಬ ವಿಸ್ಮಯ ವ್ಯಕ್ತವಾಗಿದೆ. ಈ ಎರಡೂ ಸಂದರ್ಭಗಳಲ್ಲಿ 'ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಂ' (ಸಜ್ಜನರ ಸಂಗವು ಏನನ್ನು ಮಾಡಲಿಕ್ಕಿಲ್ಲ?) ಎಂದು ತುಂಬ ವಿನೀತರಾಗಿ ಅವರು ಸುಭಾಷಿತವೊಂದನ್ನು

ಉದ್ಧರಿಸ್ತಾರೆ. ಹೀಗೆ ಇಲ್ಲಿ ವ್ಯಕ್ತಿತ್ವ ರೂಪುಗೊಳ್ಳುವುದು ಹಾಗೂ ವ್ಯಕ್ತವಾಗುವುದು ಪರರ ನಡುವೆ, ಇತರರ ಒಡನಾಟದಲ್ಲಿ. ಇದನ್ನು ಸ್ಥೂಲವಾಗಿ humanist view ಅಥವಾ dialogical notion of self ಎಂದು ಕರೆಯಬಹುದು.

ಎರಡನೇ ಅಂಕದ ಶ್ರೀರಂಗನ ಕತೆಯಲ್ಲಿ ಆರಂಭದಲ್ಲಿಯೇ 'ನಾರಂಗೀ ನಿಶಾಣ' ಎಂಬ ಮರಾಠೀ ನಾಟಕದ ಉಜ್ವಲ ಪ್ರಯೋಗವನ್ನು ನೋಡಿದ ಮೇಲೆ 'ನನ್ನ ಆ ರೂಪ ನನಗೆಯೆ ಕಂಡುಕೊಂಡಿತು. ನಾನೊಬ್ಬ ನಾಟಕಕಾರ ಎಂಬ ಆತ್ಮಸಾಕ್ಷಾತ್ಕಾರ ಆ ಸಮಯದಲ್ಲಿ ನನಗೆ ಮಿಂಚಿತು.'– ಎಂಬ ಮಾತು ಬರ್ತದೆ. ಉದರ ವೈರಾಗ್ಯವನ್ನು ಬರೆದಾಗ ಅದನ್ನು ಪಂಡಿತ ತಾರಾನಾಥರು ಮುದವೀಡು ಕೃಷ್ಣರಾಯರಿಗೆ ಹೇಳಿದ್ದು, ಕೃಷ್ಣರಾಯರು ಅದನ್ನು ಲಕ್ಷ್ಯದಲ್ಲಿಟ್ಟುಕೊಂಡು ಧಾರವಾಡಕ್ಕೆ ಬಂದಿದ್ದ ಗರುಡ ಸದಾಶಿವರಾಯರ ಜೊತೆಗೆ ಶ್ರೀರಂಗರನ್ನು ಕರೆದುಕೊಂಡು ಹೋಗಿ ಅಲ್ಲಿ ಆ ನಾಟಕವನ್ನು ಓದಿದ್ದು, ಕಾಲೇಜಿನ ಕರ್ನಾಟಕ ಸಂಘಕ್ಕೆ ರಂಗಭೂಮಿಯ ಕುರಿತು ಮಾತಾಡಲು ಗರುಡರೆ ಬಂದಿದ್ದು, ಅವರು ಉದಾರ ಮನಸ್ಸಿನಿಂದ ನಾಟಕವನ್ನು ಹೊಗಳಿದ್ದು– ಈ ಘಟನಾಪರಂಪರೆ ಸಂಭವಿಸಿದ್ದು ಆಕಸ್ಮಿಕವಾಗಿಯೆ? ಇಲ್ಲವೆ ಒಂದು ನಿಯತ ಗುರಿಯನ್ನು ನಿರ್ಮಿಸಲು ಕ್ರಮಕ್ರಮವಾಗಿ ಘಟಿಸಿದ್ದೆ? ಇದೊಂದೂ ನಡೆದಿದ್ದಿಲ್ಲವಾದರೆ ಶ್ರೀರಂಗ ಒಬ್ಬ ನಾಟಕಕಾರನೆಂದು ಮುಂದೆ ಬರ್ತಿದ್ದನೆ? ಈ ಕಾರಣದಿಂದ ಶ್ರೀರಂಗ ಸುದೈವಿ ಅನ್ನಬಹುದೆ?– ಎಂದೆಲ್ಲ ಕೇಳಿಕೊಳ್ತಾ ಭಗವದ್ಗೀತೆಯ ಒಂದು ಮಾತನ್ನು ಉದ್ಧರಿಸ್ತಾರೆ : ಮನುಷ್ಯನು ಯಾವುದೊ ಒಂದು ಶಕ್ತಿಗೆ ಅಧೀನನಾಗಿ– 'ಬಲಾದಿವ ನಿಯೋಜಿತಃ'– ತನ್ನ ಕರ್ತವ್ಯವನ್ನು ಮಾಡಲೇಬೇಕಾಗ್ತದೆಯೆ? ಒಂದು ಹಂತದಲ್ಲಿ ಅವರು ಬಹಳ ಸ್ಪಷ್ಟವಾಗಿ ಹೇಳ್ತಾರೆ : 'ನನ್ನದೇ ಒಂದು ಅಜೇಯ ಶಕ್ತಿ ನನ್ನನ್ನು ಈ ಪದವಿಗೆ ಮುಟ್ಟಿಸಿದೆ ಎಂದು ಹೇಳಿ ಅನುಭವಕ್ಕೆ ಕೃತಘ್ನನಾಗಲಾರೆ.' ಅದೃಶ್ಯನಾಗಿರುವ ಸೂತ್ರಧಾರನ ಅಸ್ತಿತ್ವದ ಸೂಚನೆ ಹಾಗೂ ಪೋಣಿಸಿದಂತೆ ಸುಸಂಬದ್ಧವಾಗಿ ಕಾಣುವ ಘಟನಾಪರಂಪರೆ ಶ್ರೀರಂಗರನ್ನು ವಿನೀತರನ್ನಾಗಿಸಿದೆ.

ಮೂರನೆಯ ಅಂಕ– ಅಂದ್ರೆ, ಆತ್ಮಕಥೆಯ ಕೊನೆಯ ಭಾಗಕ್ಕೆ ಬರುವಷ್ಟರಲ್ಲಿ ವಿಸ್ಮಯದ ಭಾವ ಪೂರ್ತಿಯಾಗಿ ಕಾಣೆಯಾಗಿರುವುದು ನಮ್ಮ ಗಮನಕ್ಕೆ ಬರ್ತದೆ. ಇಲ್ಲಿ ಭಗ್ನವಾದ ರಥದ ಪ್ರತಿಮೆ ಕಾಣಿಸಿಕೊಳ್ತದೆ ಎಂದು ಆಗಲೇ ಹೇಳಿದೆ. ಈ ಪ್ರತಿಮೆಯ ಸಂದರ್ಭದಲ್ಲೇ ಮನುಷ್ಯನ ಇಚ್ಛಾಶಕ್ತಿ ಹಾಗೂ ಪುರುಷಪ್ರಯತ್ನವನ್ನು ಪರಿಸರ-ಪರಿಸ್ಥಿತಿಯ ಒತ್ತಾಯ-ಒತ್ತಡ ಹಾಗೂ ವ್ಯಕ್ತಿಗೆ ಹೊರಗಿನ ಶಕ್ತಿಯೊಂದಿಗೆ ಮುಖಾಮುಖಿಯಾಗಿಸಿರುವ ಒಂದು ವ್ಯಾಖ್ಯಾನವಿದೆ. ಇಲ್ಲಿ, 'ಹೊರಗಿನ ಬಲ ಮನುಷ್ಯನನ್ನು ಪ್ರೇರಿಸ್ತದೆ ಅಂತಾದ್ರೆ ಮನುಷ್ಯನಿಗೆ ಕಾಮ (will) ಎಂಬುದೇ ಇಲ್ವೆ? ಅವನ ಬುದ್ಧಿಶಕ್ತಿ ನಿರರ್ಥಕವೆ?' ಎಂಬ ಪ್ರಶ್ನೆಗಳನ್ನು ಎದುರಿಸ್ತಾ 'ಮನುಷ್ಯನಿಗೆ ಕಾಮಿಸುವ ಶಕ್ತಿ ಇದೆ; ಅದಕ್ಕೆ ಆನುಷಂಗಿಕವಾಗಿ ಎರಡರಲ್ಲಿ ಒಂದನ್ನು ಆಯ್ದುಕೊಳ್ಳೋ ಶಕ್ತಿಯೂ ಇದೆ; ಎಲ್ಲ ಸಂದರ್ಭಗಳಲ್ಲೂ ನಾನು ನನ್ನ ಇಚ್ಛೆಗೆ ವಿರುದ್ಧವಾಗಿ ನೂಕಲ್ಪಟ್ಟರೂ ಎರಡು ದಾರಿಗಳಲ್ಲಿ ಒಂದನ್ನು ನಾನೇ ಹೊಣೆಗಾರಿಕೆಯಿಂದ ಆಯ್ದುಕೊಂಡಿದ್ದೇನೆ'– ಎಂದು ಶ್ರೀರಂಗರು ತೀರ್ಮಾನಿಸ್ತಾರೆ. ದಾರಿ ಕಾಣದಾಗಿದ್ದರೂ, ರಥದ ಚಕ್ರ ಮುರಿದಿದ್ದರೂ ದಾರಿ ಸಾಗಿದ್ದು ಕಾಮಶಕ್ತಿ/will powerನಿಂದ ಎಂದು ಅದನ್ನು ವಿಶೇಷೀಕರಿಸೋದನ್ನು ನಾವು ಕಾಣ್ತೇವೆ. ಇದು ಸ್ಪಷ್ಟವಾಗಿ rationalist view of self ಅಥವಾ

Cartesian notion of self. ಶ್ರೀರಂಗರ ಈ ನಿಲುವಿಗೂ ಈ ಭಾಗದಲ್ಲಿರುವ ವಾರಿಯ ಪ್ರತಿಮೆ ಹಾಗೂ ಸ್ವ-ಸಮರ್ಥನೆಯ ಧಾಟಿ-ಧೋರಣೆಗೂ ನೇರವಾದ ಸಂಬಂಧವಿದೆ. ಒಂದು ಹಂತದಲ್ಲಿ 'ಈ ರೀತಿ ರಹಸ್ಯಭೇದವನ್ನು ಮಾಡಿ ನಾನು (ಶ್ರೀರಂಗ) ಆದ್ಯರಂಗಾಚಾರ್ಯರಿಗೆ ವಿಶ್ವಾಸಘಾತವನ್ನು ಮಾಡುತ್ತಿದ್ದೇನೆಯೆ?' ಎಂದು ಅವರು ಕೇಳಿಕೊಳ್ತಾರೆ. ಇದರೊಂದಿಗೆ, 'ಬೆಂಗಳೂರಿಗೆ ಬಂದ್ಮೇಲೆ ಆದ್ಯರಂಗಾಚಾರ್ಯರೊಡನೆ ಮುಕ್ತ ಮನಸ್ಸಿನಿಂದ ವಿಚಾರ ವಿನಿಮಯ ಮಾಡಲು ಸಮಯ ದೊರಯಿತು' ಎಂಬ ಬಗೆಯ ಮಾತುಗಳಲ್ಲಿ 'ಆದ್ಯರಂಗಾಚಾರ್ಯ' ಒಂದು ವ್ಯಕ್ತಿಯಾಗಿರುವಷ್ಟೇ ಒಂದು ವಿಶಿಷ್ಟ ಮನಃಸ್ಥಿತಿಯಾಗಿದೆ ಎಂಬುದೂ ಸ್ಪಷ್ಟವಾಗ್ತದೆ. ಅಂದರೆ, 'ಜಿಜ್ಞಾಸೆ'ಯ ಈ ಭಾಗದಲ್ಲೂ ವಿನೀತ ಭಾವವಿದೆ; ಆದರೆ ಅದು ಬದುಕಿನ ನಿಗೂಢತೆಯು ಹುಟ್ಟುಹಾಕಿದ್ದಲ್ಲ, ಬದಲಾಗಿ ನಿರೂಪಿತ ಆದ್ಯರ ಬೌದ್ಧಿಕ ಸಾಮರ್ಥ್ಯದ ಕುರಿತು ನಿರೂಪಕನಿಗಿರುವ ಗೌರವ ಹಾಗೂ ಆ ಅವಸ್ಥೆಯ ಪರಿಪೂರ್ಣತೆಯ ಕುರಿತು ಆತನಿಗಿರುವ ಪ್ರಚಂಡ ವಿಶ್ವಾಸ ಹುಟ್ಟುಹಾಕಿದ್ದು.

❖ ಡಾ. ಎಂ. ಜಿ. ಹೆಗಡೆ : 'ಅಹಲ್ಯಾ', ಚಿತ್ರಿಗಿ, ಕುಮಟಾ-೫೮೧ ೩೪೩ ❖

ಬಯಲಾಟ

ಸುಕನ್ಯಾ ಮಾರುತಿ

ಒಂದೊಂದೆ ಸಂವತ್ಸರ ಸವೆಸುತ್ತ
ಸಾಗಿದೆ ಬಾಳಿನ ತೇರು
ಸಡಿಲಾಗುತ್ತಿವೆ ಮೆಲ್ಲಮೆಲ್ಲನೆ
ಬದುಕಿನ ಬೇರು

ನರಳಿದೆ ಋತುಚಕ್ರ
ಕಾಲಚಕ್ರದ ದಾಳಿಗೆ
ಒಸಗೆ ತರುವ ವಸಂತ
ಬೇಸಿಗೆಯ ಧಗೆ ಹತ್ತಿಸಿದ್ದಾನೆ
ಗುರುತು ಸಿಗದಂತೆ
ಬದಲಾಯಿಸಿದ್ದಾನೆ

ಚಿಗುರ ತುಂಬ ಒಗರು ಒಸರಿ
ಹೊಸ ಹಸಿರಿನುಸಿರಲ್ಲಿ
ಜಿನುಗುವ ಬನಿಯಿಲ್ಲ
ಕೋಗಿಲೆಗೆ ಸವಿ ದನಿಯಿಲ್ಲ
ರಸ ರೋಮಾಂಚನವಿಲ್ಲ
ಇಲ್ಲ ಇಲ್ಲ ಇಲ್ಲ

ಪ್ರೇಮ ಸಮ್ಮಿಲನದಲಿ
ವೈಶಾಖದ ಕಾವಿಲ್ಲ
ಮೃದು ಮಧುರ ನೋವಿಲ್ಲ
ಉಲ್ಲಾಸದ ಉದ್ಗಾರದಿ ದಮ್ಮಿಲ್ಲ
ಸವಿದು ಸುಖಿಸಿದ ಹಮ್ಮಿಲ್ಲ
ಇಲ್ಲವೇ ಇಲ್ಲ

ಬಿಸಿಲ ಝಳ ತಾಗಿ
ಆವಿಯಾಗಿವೆ ಭಾವ
ಬಿರುಕು ಬಿಟ್ಟಿದೆ ಭೂಮಿ
ಬೀಳು ಬಿದ್ದ ಎದೆಹೊಲದಿ
ರಣರಂಗ ಕೋಲಾಹಲ

ಚೆದುರಿದ ಚತುರಂಗ ಬಲ
ಏಕಾಗಿ ಏಕಾಂಗಿ ಹೋರಾಟ?
ಸವೆದ ಸಂವತ್ಸರಗಳ
ಗುಣಿಸಿ ಭಾಗಿಸುವಾಟ?
ಉರುಳಿದ ರಥ ಚಕ್ರ
ಮರಳಿ ಬಾರದ ಈ ಬದುಕೇ
ದೊಡ್ಡ ಬಯಲಾಟ.

❖ ಸುಕನ್ಯಾ ಮಾರುತಿ :
'ಸಂಸ್ಕೃತಿ', ೧ನೇ ಕ್ರಾಸ್, ಶಾರದಾ ಕಾಲನಿ, ವಿದ್ಯಾಗಿರಿ, ಧಾರವಾಡ-೫೮೦ ೦೦೪ ❖

ಜಯಂತ ಕಾಯ್ಕಿಣಿಯವರ 'ಬಣ್ಣದ ಕಾಲು'

ಮಾಧವ ಕುಲಕರ್ಣಿ

ಕನ್ನಡದ ಕಥಾಲೋಕವು ಬೌದ್ಧಿಕ ಬಂಧನದಿಂದ ತನ್ನನ್ನೇ ಬಿಡಿಸಿಕೊಳ್ಳಲು ಹೆಣಗಾಡುತ್ತಿರುವ ಸಂಧಿಕಾಲದಲ್ಲಿ ಜಯಂತ ಕಾಯ್ಕಿಣಿಯವರ ಸಣ್ಣಕತೆಗಳ ಸಂಕಲನ 'ಬಣ್ಣದ ಕಾಲು' ಹೊರಬಂದಿದೆ. 'ಬದ್ಧತೆ' ಮತ್ತು 'ಬೌದ್ಧಿಕತೆ'ಗಳಿಂದ ತುಸು ದೂರ ಸರಿದು ಮಾನವನ ಮೂಲಭೂತ ಕಾಳಜಿಗಳಿಗೆ ಮತ್ತು ಭಾವನೆಗಳಿಗೆ ಸ್ಪಂದಿಸಬೇಕೆಂಬ ವಿವೇಕವು ಕೆಲವು ಲೇಖಕರಲ್ಲಾದರೂ ಮೂಡಿದ್ದು ಕನ್ನಡ ಸಾಹಿತ್ಯದ ಸುದೈವ. ಅಂಥ ಒಂದು ವಿವೇಕದಿಂದಲೇ ಜಯಂತ ಕಾಯ್ಕಿಣಿ ತಮ್ಮ ಕತೆಗಳನ್ನು ಬರೆಯುತ್ತಾರೆ. ಸರಿಯುತ್ತಿರುವ ಕ್ಷಣಗಳಲ್ಲಿ ಅಡಗಿದ ಜೀವನದ ಸಣ್ಣ ಸಣ್ಣ ಅನೂಹ್ಯಗಳನ್ನು, ಅಂತಃಕರಣದ ಅಗಾಧ ಸೆಲೆಗಳನ್ನು ಮತ್ತು ಭಾವನಾ ಸ್ಪರ್ಶದ ಲೋಕವೊಂದನ್ನು ಅವರ ಕತೆಗಳು ಸಫಲವಾಗಿ ಸೆರೆಹಿಡಿಯುತ್ತವೆ. ಇಂಥಲ್ಲಿ ಘಟನೆಗಳ ಅಭಾವ ಕೂಡ ಕತೆಗೆ ಭಾವನೆಗಳ ಮೆರುಗನ್ನು ತಂದುಕೊಡುವುದರಿಂದ ಓದುಗನು ಕತೆಯ ಮೂಲಭೂತ ಅಂಶವಾದ ಕುತೂಹಲದ ಅಂಶವನ್ನು ಕೂಡ ಮರೆತುಬಿಡುತ್ತಾನೆ.

ಜಯಂತ ಕಾಯ್ಕಿಣಿಯವರ ಕತೆಗಳಲ್ಲಿ ಬರುವವರೆಲ್ಲ ಜೀವನದ ಜನಸಾಮಾನ್ಯರು, ಕಳೆಕೊಂಡವರು, ಚಿಕ್ಕದಕ್ಕೆ ಪುಳಕಗೊಳ್ಳುವವರು, ಅನೂಹ್ಯದತ್ತ ಮುಖ ಮಾಡಿ ನಿಂತವರು. ಹೀಗಾಗಿ 'ಬೃಹತ್'ನ್ನು ಸೆರೆಹಿಡಿಯಬೇಕೆಂಬ 'ಛಲ' ಇಲ್ಲಿಯ ಕತೆಗಳಲ್ಲಿ ಇಲ್ಲ; ಮತ್ತು ಹೇಳಬೇಕಾಗಿರುವುದು ವಾಚ್ಯವಾಗಬಾರದೆಂಬ ಎಚ್ಚರ ಇಲ್ಲಿಯ ಕತೆಗಳನ್ನು ಸೋಜಿಗ ಹುಟ್ಟಿಸುವ ರೀತಿಯಲ್ಲಿ ಕಾಪಾಡಿದೆ.

'ಚಂದ್ರಶಾಲೆ'ಯಲ್ಲಿ ಬರುವ ಕಾಯಕ್ಕ ತೇರನ್ನೇ ತನ್ನ ಗಂಡನೆಂದು ಬಗೆದಿದ್ದಾಳೆ. ಅವಳು ಹುಚ್ಚಿಯೂ ಅಲ್ಲ, ತಲೆ 'ಶುದ್ಧ'ವಿದ್ದವಳೂ ಅಲ್ಲ. ಹಾಗೆಯೇ ಇಲ್ಲಿ ಬರುವ ಕುಂಕುಮದಂಗಡಿಯ ವಿಶ್ವೇಶ್ವರಯ್ಯನು ವ್ಯಾಪಾರದಲ್ಲಿ ವ್ಯವಹಾರಸ್ಥನಾದರೂ, ಸಂಚಾರಿ ಬಳೆ ಅಂಗಡಿಯ ಬಸವಣ್ಣೆಯೊಡನೆ ದೈಹಿಕ ಸಂಬಂಧ ಹೊಂದಿದ ಮೇಲೆ ಚಿಕ್ಕಮಗುವಾಗುತ್ತಾನೆ. ಓದುವ ಹುಡುಗ ಮಾಬಲನು ಎದುರು ಮನೆಯ ಹುಡುಗಿಯ ಒಂದು ನೋಟಕ್ಕೆ ಪುಳಕಗೊಳ್ಳುತ್ತಾನೆ. ದೈಹಿಕವಾದದ್ದು, ದೈಹಿಕವಲ್ಲದೆ ಕೇವಲ ಮಾನಸಿಕವಾದದ್ದು ಇವುಗಳ ಮಧ್ಯೆ ಇರುವ ಅತ್ಯಂತ ತೆಳುವಾದ ಒಂದು ಗೆರೆಯನ್ನು ಈ ಕತೆಯು ಅತ್ಯಂತ ನವಿರಾಗಿ ಸೆರೆಹಿಡಿಯುತ್ತದೆ. ವಿಶ್ವೇಶ್ವರಯ್ಯನ ಅಂಗಡಿಯ ಬಣ್ಣದ ಕುಂಕುಮಗಳ ವರ್ಣನೆ ಮತ್ತು ತೇರಿಗೆ ಕಟ್ಟಿದ ಬಣ್ಣದ ಸಲಾಕೆಗಳ ವರ್ಣನೆಯಲ್ಲಿಯ ಸಾಮ್ಯವನ್ನು ಗಮನಿಸಿದರೆ, ಸಂಕೀರ್ಣ ಸಂಬಂಧಗಳಲ್ಲಿಯ ಸಾಮಾನ್ಯವಾದ ಒಂದು ಎಳೆಯನ್ನೇ ಈ ಬಣ್ಣಗಳು ಪ್ರತಿನಿಧಿಸುತ್ತವೆನ್ನಿಸುತ್ತದೆ.

'ಗಾಳಿಮರದ ನೆರಳು' ಇದೇ ಕತೆಯ ಇನ್ನೊಂದು ಮಗ್ಗುಲೆಂಬಂತೆ ತೋರುತ್ತದೆ. ವೆಂಕಟೇಶ ಏನೋ ಅಪರಾಧ ಮಾಡಿ ಜೈಲಿಗೆ ಹೋಗಿದ್ದಾನೆ. ಅವನನ್ನು ಕಾರವಾರಕ್ಕೆ ಕರೆದೊಯ್ಯುವ ಪೊಲೀಸ್ ವ್ಯಾನ್‌ಗಾಗಿ ಅವನ ತಂಗಿ ತುಳಸಿ ಮತ್ತು ಅವನ ಬಸುರಿಯಾದ ಹೆಂಡತಿ ನಾಗಮ್ಮ ಮುಖ್ಯ ರಸ್ತೆಗೆ ಬರುವ ಸನ್ನಿವೇಶವಿದೆ. ಆದರೆ ವೆಂಕಟೇಶನನ್ನು ಇನ್ನೊಬ್ಬಳೂ ಇಷ್ಟಪಟ್ಟಿದ್ದಾಳೆ. ಈ ಮೂರನೆಯವಳಾದ ಗೌರಿಯು ವೆಂಕಟೇಶನ ಭೇಟಿಗಾಗಿ ಹಾತೊರೆದು, ಆ ದಿನ ಅಲ್ಲಿ

ಬಂದು ಮರದ ಹಿಂದೆ ಅಡಗಿ ನಿಂತು ತನ್ನ ಇನಿಯನ ದರ್ಶನಕ್ಕಾಗಿ ಕಾತರದಿಂದ ಕಾದಿದ್ದಾಳೆ. ಈ ಸನ್ನಿವೇಶ ನಿರ್ಮಾಣದ ಹಿಂದೆ ಕೆಲಸ ಮಾಡಿದ ಕತೆಗಾರನ ಮನಸ್ಸಿನ ಬಗ್ಗೆ ಹಲವಾರು ದೃಷ್ಟಿಯಿಂದ ಕೌತುಕವೆನ್ನಿಸುತ್ತದೆ. ಇವರೆಲ್ಲಾ ಕಡುಬಡವರು. ಆದರೆ ಅವರು 'ಬಡವರ್ಗ'ವನ್ನು ಪ್ರತಿನಿಧಿಸುತ್ತಾರೆ ಎಂಬ ಕಿಂಚಿತ್ತಾದರೂ ಭಾವನೆ ಬಾರದಂತೆ ಅವರು ಚಿತ್ರಿತರಾಗಿದ್ದಾರೆ. ಬೆಟ್ಟವಿಳಿದಾಗ ಕಾಣುವ ಸಮುದ್ರ, ಇಲ್ಲಿ ಬರುವ ಗಾಳಿ-ಬಿಸಿಲು, ರಸ್ತೆ, ವಾಹನಗಳು ಇವೆಲ್ಲವುಗಳೊಡನೆ ಈ ಪಾತ್ರಗಳು ಒಂದಾಗಿ ಬಿಟ್ಟಿವೆ. ಕಾಯ್ಕಿಣಿಯವರ ಬರವಣಿಗೆಯ ಶಕ್ತಿ ಇಲ್ಲಿಯೇ ಇದೆ ಎಂದು ಕಾಣುತ್ತದೆ. ಅವರು ತಮ್ಮ ಪಾತ್ರಗಳನ್ನು ತಾವು ವರ್ಣಿಸುತ್ತಿರುವ ಪರಿಸರದ ಒಂದು ಭಾಗವನ್ನಾಗಿ ಮಾಡಿಬಿಡುತ್ತಾರೆ ಮತ್ತು ಅಲ್ಲಿ ಮಿಡಿಯುವ ಭಾವನೆಗಳನ್ನು ಪ್ರಸ್ತುತಪಡಿಸಿ ವಿರಮಿಸುತ್ತಾರೆ. ಓದುಗನು ತದನಂತರದಲ್ಲಿ ಜೀವನದ ಈ ಸೂಕ್ಷ್ಮಗಳನ್ನು ಕುರಿತು ಯೋಚಿಸುವಂತೆ ಮಾಡುವ ಪ್ರಬಲವಾದ ಜೀವನಜನ್ಯ ಶಕ್ತಿಯೊಂದು ಈ ಕತೆಗಳ ಹಿಂದೆ ಹೀಗೆ ಕೆಲಸ ಮಾಡುತ್ತದೆ. ಮರದ ಹಿಂದೆ ಅಡಗಿದ ಗೌರಿ ವ್ಯಾನು ನಿಂತಾಗ ಹೊರಬರುವುದಿಲ್ಲ. ಜಗಳ ಕಾಯುವುದಿಲ್ಲ. ಆದರೆ ವ್ಯಾನು ಹೊರಟ ನಂತರ ಅವಳು ಹೊರಬಂದು 'ಬಲ್ಲಿನಂತೆ ಬಾಗಿ' ವ್ಯಾನು ಹೋದ ದಿಕ್ಕನ್ನು ನೋಡುತ್ತಾಳೆ. ಆಗ ಈ ಮೂವರೂ ಸಮಾನ ದುಃಖಿಗಳನ್ನು 'ಗಾಳಿಮರಗಳ ನಡುವಿಂದ ಗಾಳಿಯೊಂದು ಮೂವರನ್ನೂ ಸಂತೈಸುವಂತೆ ಸುಯ್ಯತೊಡಗಿ'ತಂತೆ! ಸಾಗುತ್ತಿರುವ ಜೀವನದ ಅನೂಹ್ಯ ಘಳಿಗೆಗಳನ್ನು ಸೆರೆಹಿಡಿಯಬೇಕೆಂಬ ಅದಮ್ಯ ಆಸೆಯೇ ಕತೆಗಾರನ ಉದ್ದೇಶವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

'ತೀರ' ಕತೆಯಲ್ಲೂ ಇದೇ ಪ್ರಕ್ರಿಯೆ ನಡೆಯುತ್ತದೆ. ವೆಂಕಟೇಶನ ಅಪರಾಧವೇನು ಎಂಬುದು 'ಗಾಳಿಮರದ ನೆರಳು' ಕತೆಯಲ್ಲಿ ಗೊತ್ತಾಗುವುದಿಲ್ಲ. 'ತೀರ' ಕತೆಯಲ್ಲಿ ಸಮುದ್ರಕ್ಕೆ ದಂಡೆಗೆ ಬಂದು ಬಿದ್ದ ಪ್ರಾಣಿ ಯಾವುದೆಂಬುದು ಗೊತ್ತಾಗುವುದಿಲ್ಲ. ಆದರೆ ಆ ಅನಾಮಿಕ ದೈತ್ಯಾಕಾರದ ಸತ್ತ ಪ್ರಾಣಿಯೆದುರು ಬಸ್ ಡ್ರೈವರ್ ಮೋನಸಗಿಯ, ವಿಜೇ ಮಾಸ್ತರರ, ಮತ್ತು ಚಾ ದುಕಾನಿನ ರುಕ್ಮಾಂಗದರ ಜೀವನದ ಆಳವಾದ ದುಃಖದ ಪಲಕುಗಳು ತೆರೆದುಕೊಳ್ಳುತ್ತವೆ. ಅವರು ತಮಗರಿವಿಲ್ಲದಂತೆಯೇ ತಮ್ಮ ದುಃಖವನ್ನು ಆ ದೈತ್ಯದ ಮುಂದೆ ಅರುಹುತ್ತಾರೆ. ದುಃಖದ ಮೂಲ ಮತ್ತು ಅದರ ಒತ್ತಡವು ವೆಂಕಟೇಶನ 'ಸಂಬಂಧ'ಗಳಲ್ಲಿ ಅಡಗಿರುವಂತೆ ಇಲ್ಲಿ ಅನಾಮಿಕ ದೈತ್ಯದೊಡನೆ ಮಾಯವಾಗುತ್ತಿರುವ ಕ್ಷಣಗಳಲ್ಲಿ 'ತೀರ'ದ ಮೂವರ ದುಃಖವು ಮಾತಿನ ರೂಪವನ್ನು ಪಡೆಯುತ್ತದೆ. ಇವರು ಮೂಲದಲ್ಲಿ ಆಶ್ಚರ್ಯದೆದುರು ತಮ್ಮನ್ನೇ ತೆರೆದುಕೊಳ್ಳಬಲ್ಲವರು, ಮತ್ತು ಇಂಥ ತೆರೆದುಕೊಳ್ಳುವಿಕೆಯು ಕೆಲವೊಮ್ಮೆ ಅಸಂಗತವಾಗಿ ಕಂಡರೂ ಅದು ಸತ್ಯ. ಅಲ್ಲಿ ತರ್ಕಕ್ಕೆ, ಯೋಜನಾಬದ್ಧ ಚಿಂತನೆಗೆ ಸ್ಥಾನವಿಲ್ಲ.

'ಚಂದ್ರಶಾಲೆ'ಯ ಕಾಯಕ್ಕನಿಗೆ ಬುದ್ಧಿ ಶುದ್ಧವಾಗಿಲ್ಲವೆಂದು ಕತೆಯಲ್ಲಿ ಸ್ಪಷ್ಟವಾದರೂ ಅದರ ಕಾರಣ ಅಲ್ಲಿ ಇಲ್ಲ. ಹಾಗೆಯೇ 'ಸ್ವಪ್ನದೋಷ' ಕತೆಯಲ್ಲಿ ಲೀಲಾಧರನಿಗೆ ಏಕೆ ಬುದ್ಧಿ ಶುದ್ಧವಾಗಿ ಉಳಿಯುವುದಿಲ್ಲ ಎಂಬುದಕ್ಕೆ ಸ್ಪಷ್ಟ ಕಾರಣಗಳು ಇಲ್ಲ. ಆತನ ಹೆಂಡತಿ ಭವಾನಿಗೆ ಹೇಗಾದರೂ ಮಾಡಿ ಚಿನ್ನದ ಬಳೆ ಮಾಡಿಸಿಕೊಳ್ಳಬೇಕೆಂಬ ಆಸೆ. ಗಂಡ ದೂರದ ಊರಲ್ಲಿ ಕೆಲಸಕ್ಕಿದ್ದಾನೆ. ಅವಳು ಈ ರೀತಿಯಾಗಿ ಸಹಜ ರೀತಿಯಲ್ಲಿ ಕಾಮವಂಚಿತಳು. ಕತೆಯಲ್ಲಿ ಇದು ಎಲ್ಲಿಯೂ ವಾಚ್ಯವಾಗದೆ ಬೆಳೆಯುತ್ತ ಹೋಗುತ್ತದೆ. ಅವಳು ಅಡುಗೆಯ ಕಾಯಕಕ್ಕೆ ಇಳಿಯುತ್ತಾಳೆ. ಅವಳ ಗಂಡ ಒಮ್ಮೆ ಊರಿಗೆ ಬಂದಾಗ ಅವಳು ಅಡುಗೆ ಕೆಲಸಕ್ಕೆ ಹೋಗುವುದನ್ನು

ವಿರೋಧಿಸಿ ತನ್ನ ವಿರೋಧವನ್ನು ಹಿಂಸೆಯ ರೂಪಕ್ಕೆ ತಿರುಗಿಸುತ್ತಾನೆ. ಆದರೆ ಆತನಿಂದ ತನಗೆ ಸಂತಾನ ಪ್ರಾಪ್ತಿಯಾಗಿಲ್ಲವೆಂದು ಅವಳು ಅಂದಿನ ಆಪ್ತ ಕ್ಷಣದಲ್ಲೇ ಅವನ ಗಮನಕ್ಕೆ ತಂದಾದ ಮೇಲೆ ಅವನು ಹೊರಟುಹೋಗುತ್ತಾನೆ. ಅವನ ಬುದ್ಧಿಯು ಸ್ವಪ್ನಲೋಕ ಪ್ರವೇಶಿಸುವುದಕ್ಕೆ ಇದು ನಾಂದಿಯಾಗುತ್ತದೆ. ಅವನನ್ನು ತಿದ್ದಲು ಹೋದ ಭವಾನಿಯು ಹೊಸದೊಂದು ಲೋಕವನ್ನು ಪ್ರವೇಶಿಸುತ್ತಾಳೆ. ಲೀಲಾಧರ ತನ್ನ ಈ ಅವಸ್ಥೆಯಲ್ಲಿ ಅವಳನ್ನು ಗುರುತಿಸುವುದಿಲ್ಲ. ಆದರೂ ಅವನೊಡನೆ ಸಂಸಾರ ಹೂಡುತ್ತಾಳೆ. ಮದುವೆಯಾದ ನಂತರ ಹೆಣ್ಣು ಸಂಸಾರದಲ್ಲಿ ಬಯಸುವುದನ್ನೆಲ್ಲ ಭವಾನಿಯು ಏಕಮುಖವಾಗಿ ಪಡೆಯುತ್ತಾಳೆ. ಆದರೆ ತನ್ನ ಗಂಡನನ್ನು ಮತ್ತೆ ಊರಿಗೆ ಕರೆದೊಯ್ಯುವ ಪ್ರಯತ್ನಕ್ಕೆ ಅವಳು ತೊಡಗಿದಾಗ ಅವನು ತನ್ನ ಸ್ವಪ್ನಲೋಕವನ್ನು ಬಿಟ್ಟು ವಾಸ್ತವಕ್ಕೆ ಬರಲಾರದವನಾಗಿದ್ದಾನೆ. ಭವಾನಿಯು ವಾಸ್ತವಕ್ಕೆ ಮರಳುತ್ತಾಳೆ. ಅಲ್ಲಿಗೆ ಸ್ವಪ್ನಲೋಕ ಮತ್ತು ವಾಸ್ತವದ ಸಂಬಂಧ ಕಡಿದುಬೀಳುತ್ತದೆ. ಇದೊಂದು ಅದ್ಭುತವಾದ ಪ್ರಯತ್ನ. ಕಾರ್ಯಕಾರಣಗಳ ಸಂಬಂಧವಿಲ್ಲದೆ ಘಟಿಸುವ ಘಟನೆಗಳಲ್ಲಿ ಅಡಗಿರುವ ಬೆರಗು ಕತೆಯ ಜೀವಾಳವಾಗಿದೆ. ಹಾಗೆಯೇ ಭವಾನಿಯ ಜೀವನದ ಎರಡು ಆಸೆಗಳಾದ ಚಿನ್ನದ ಬಳೆ ಮತ್ತು ಸಂತಾನದಲ್ಲಿ ಅವಳು ಚಿನ್ನದ ಬಳೆಯೊಂದನ್ನೇ ತನ್ನದನ್ನಾಗಿ ಮಾಡಿಕೊಳ್ಳುತ್ತಾಳೆ. ಅಷ್ಟರಮಟ್ಟಿಗೆ ಅವಳು ವಾಸ್ತವಕ್ಕೆ ಬರುತ್ತಾಳೆ. ಇಲ್ಲಿ ಬರುವ ಎರಡು ಊರುಗಳು, ಎರಡು ಆಯ್ಕೆಗಳು, ಎರಡು ಲೋಕಗಳು, ವಾಸ್ತವ ಮತ್ತು ಸ್ವಪ್ನ ಇವೆಲ್ಲವೂ ಪ್ರತಿಮೆಗಳೊ ಎಂಬ ರೀತಿಯಲ್ಲಿ ಚಿತ್ರಿತವಾಗಿ ಕತೆಯು ಕಾವ್ಯದ ಶಿಲ್ಪವನ್ನೇ ಪಡೆಯುತ್ತದೆ.

‘ಟ್ರೈಸಿಕಲ್’ ಮತ್ತು ‘ಬಿಡು ಬಿಡು ನಿನ್ನಯ’ ಕತೆಗಳ ಕೇಂದ್ರದಲ್ಲಿ ಇಬ್ಬರು ಮಾಸ್ತರರಿದ್ದಾರೆ. ‘ಟ್ರೈಸಿಕಲ್’ನಲ್ಲಿಯ ಮಾಸ್ತರರ ಮುಜುಗರವು ಅಂತಃಕರಣದಿಂದ ಕಟ್ಟಿಹಾಕಲ್ಪಟ್ಟಿದೆ. ತಾವು ಕೊಟ್ಟ ಟ್ರೈಸಿಕಲ್ ಮೇಲೆ ಅದನ್ನಾಡುವ ಮಗುವಿಗೆ ಎಷ್ಟೊಂದು ಪ್ರೇಮವಿದೆಯೆಂದರೆ ಅದನ್ನು ಕೊಟ್ಟವರು ಅದನ್ನು ಕೇಳಬಂದಾಗ, ಟ್ರೈಸಿಕಲ್‌ನಲ್ಲಿಯ ಮಗುವಿನ ತಾದಾತ್ಮ್ಯ ಗೆದ್ದುಬಿಡುತ್ತದೆ. ಮತ್ತೆ ವೈಚಾರಿಕತೆಯಿಂದ ದೂರವಾಗಿ ಕೋಮಲ ಭಾವವೊಂದನ್ನು ಸೆರೆಹಿಡಿಯುವ ಪ್ರಯತ್ನವೇ ಇಲ್ಲಿಯೂ ಕಾಣುತ್ತದೆ. ಆದರೆ ‘ಬಿಡು ಬಿಡು ನಿನ್ನಯ’ ಕತೆಯಲ್ಲಿಯ ಮಾಸ್ತರರು ಬೇರೊಂದು ರೀತಿಯಲ್ಲಿಯ ಸಮಸ್ಯೆಯನ್ನೇ ಎದುರಿಸುತ್ತಿದ್ದಾರೆ. ಮಾಸ್ತರರು ಊರಿನಲ್ಲಿಯ ನವಿಲುಗಳನ್ನು ರಕ್ಷಿಸಲು ಹೋಗಿ ಇನ್ನೊಬ್ಬ ಘನಶ್ಯಾಮನೆಂಬ ಮಾಸ್ತರನ ಮನಸ್ಸಿನಲ್ಲಿ ಬೆಳೆಯತೊಡಗುತ್ತಾರೆ. ದ್ವೇಷಭಾವವಿಲ್ಲದೆ ಅಥವಾ ಮತ್ಸರವಿಲ್ಲದೆ ಕೆಲವರಿಗೆ ಬದುಕು ಅಸಹನೀಯವಾಗಬಹುದೆಂಬುದನ್ನು ಈ ಕತೆಯು ಮಾರ್ಮಿಕವಾಗಿ ತೋರಿಸುತ್ತದೆ. ಪ್ರೀತಿ, ಅಂತಃಕರಣ, ಕೋಮುವಾದ ಭಾವನೆಗಳು, ಸರಿದು ಮಾಯವಾಗುವ ಕ್ಷಣಗಳಲ್ಲಿ ಅಡಗಿದ ಮಾನವೀಯ ಮಿಡಿತ ಇವುಗಳನ್ನು ಸೆರೆಹಿಡಿಯಲು ಪ್ರಯತ್ನಿಸುವ ಕತೆಗಾರನು ‘ಬಿಡು ಬಿಡು ನಿನ್ನಯ’ ಕತೆಯಲ್ಲಿ ಅವನಿಗೇ ಗೊತ್ತಿಲ್ಲದಂತೆ ಬೆಳೆಯುವ ಘನಶ್ಯಾಮನ ಮನಸ್ಸಿನಲ್ಲಿಯ ಮತ್ಸರವನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಾರೆ. ಮಾಸ್ತರರಿಗೆ ಪ್ರಿಯವಾದ ಮಿರ್ಜಾನಕ್ಕೆ ಅವರು ಎಷ್ಟೊ ವರ್ಷಗಳ ಮೇಲೆ ಮರಳಿ ಬಂದ ಮೇಲೂ ಘನಶ್ಯಾಮನ ಮನಸ್ಸಿನಲ್ಲಿ ಮನೆ ಮಾಡಿದ ತಾವು ಇನ್ನೂ ಅಲ್ಲಿ ಜೀವಂತವಾಗಿದ್ದೇವೆಂಬುದು ಅವರ ಗಮನಕ್ಕೆ ಬರುತ್ತದೆ. ಕೊನೆಗೆ ಘನಶ್ಯಾಮನಿಗೆ ಕಾಯಿಲೆಯೆಂದು ಗೊತ್ತಾದೊಡನೆ ಮಾಸ್ತರರಿಗೆ ಅವನನ್ನು ನೋಡುವ ಮನಸ್ಸಾಗುತ್ತದೆ. ಘನಶ್ಯಾಮನು ಕಾಯಿಲೆಯಲ್ಲೂ ಮಾಸ್ತರರ ಹೆಸರನ್ನು ನೆನೆಸುತ್ತಾನೆಂದು ಅವನ ಮಗ

ದಿಲೀಪನಿಂದ ಗೊತ್ತಾಗುತ್ತದೆ. ಮಾಸ್ತರರಿಗೆ ಅವನನ್ನು ಭೇಟಿಯಾಗುವ ಮನಸ್ಸಾಗುತ್ತದೆ. ಆದರೆ ಈ ಭೇಟಿಯಿಂದ ಘನಶ್ಯಾಮನನ್ನು ಇನ್ನೂ ಬದುಕಿಸಿ ಉಳಿಸಿರಬಹುದಾದ ಮತ್ಸರವು ಮಾಯವಾಗಿ ಅವನಿಗೆ ಬದುಕಿ ಉಳಿಯುವ ಉದ್ದೇಶವೇ ಇಲ್ಲದಂತಾಗಬಹುದೆಂಬ ಭಯವೂ ಮಾಸ್ತರರನ್ನು ಕಾಡುತ್ತದೆ. ಇದು ಈ ಕತೆಯ ಮೂಲ ಉದ್ದೇಶವೂ ಹೌದು. ಕೆಲವು ಮನುಷ್ಯರಿಗೆ ಪ್ರೀತಿ, ಅಂತಃಕರಣಗಳಿಗಿಂತ ಬದುಕಿ ಉಳಿಯಲು ಮತ್ಸರದಂಥ, ದ್ವೇಷದಂಥ ಭಾವನೆಗಳೂ ಬೇಕಾಗಬಹುದೆಂಬ ಇಂಗಿತ ಕತೆಯಲ್ಲಿ ಬಹು ಶಕ್ತಿಯುತವಾಗಿ ಮೂಡಿಬಂದಿದೆ. ಕೆಡುಕಿನ ಮುಖಗಳು ಹಲವಾರು. ತನ್ನಲ್ಲಿಲ್ಲದ ಗುಣ ಇನ್ನೊಬ್ಬನಲ್ಲಿದೆ ಎಂಬ ಅರಿವು ಘನಶ್ಯಾಮ ನಂಥವರನ್ನು ಹೇಗೆ ಮುರಿಗೊಳಿಸುತ್ತದೆಂಬ ಸೋಜಿಗ ಕತೆಯುದ್ದಕ್ಕೂ ಹಬ್ಬಿದೆ.

'ಚುಕ್ಕಾಣಿ' ಅಷ್ಟೊಂದು ಯಶಸ್ವಿಯಾದ ಕತೆಯಲ್ಲ– ಇಲ್ಲಿಯ ಬೇರೆ ಕತೆಗಳಿಗೆ ಹೋಲಿಸಿದರೆ. ಇಲ್ಲಿ ಒಂದು ವಾತಾವರಣ ನಿರ್ಮಾಣಕ್ಕೆ ಕತೆಗಾರರು ಕೊಟ್ಟಷ್ಟು ಮಹತ್ವವನ್ನು ಕತೆ ಅರಳಬೇಕಾದುದರೆಡೆ ಕೊಟ್ಟಿಲ್ಲ. ಇಲ್ಲಿಯ ಮಾಸ್ತರರ ಮಗಳು ಪ್ರಾಯಶಃ ಏನೋ ಒಂದು ಎಡವಟ್ಟು ಕೆಲಸ ಮಾಡಿದ್ದಾಳೆ. ಅವಳು ಊರು ಬಿಟ್ಟು ಹೊರಡುವ ಪ್ರಯತ್ನಕ್ಕೆ ಆ ದಿನ ಬಸ್ಸು ಬರದೆ ಕಲ್ಲು ಬಿದ್ದಿದೆ. ಆದರೆ ಆ ಬಸ್ಸು ಬಾರದ್ದರಿಂದ ಆ ಪುಟ್ಟ ಊರಲ್ಲಿಯ ಚಟುವಟಿಕೆಗಳೆಲ್ಲಾ ಹೇಗೆ ಸ್ತಬ್ಧಗೊಂಡವೆಂದು ಕತೆಗಾರರು ಪ್ರಭಾವಶಾಲಿಯಾಗಿ ಚಿತ್ರಿಸುತ್ತಾರೆ. ಈ ಸ್ತಬ್ಧತೆಯು ಮಾಸ್ತರರ ಮನಃಸ್ಥಿತಿಗೆ ಸಂವಾದಿಯಾಗಬೇಕೆಂಬ ಆಶಯವು ಕ್ಷೀಣವಾಗಿ ಕತೆಯಲ್ಲಿ ಗೊತ್ತಾಗುತ್ತವೆ. ಆದರೆ ಅದು ಕತೆಯಲ್ಲಿ ಸಂಭವಿಸುವುದಿಲ್ಲ.

ಇನ್ನು ಮುಂದಿನ ಕತೆಗಳು ಗೋಕರ್ಣದ ಪರಿಸರವನ್ನು ಬಿಟ್ಟು ಮುಂಬಯಿಯತ್ತ ಧಾವಿಸುತ್ತವೆ. 'ಚೌತಿ ಚಂದ್ರ'ದಲ್ಲಿಯ ಡ್ರೈವರ್ ಪಾಂಡುರಂಗನು ಕೇವಲ ಒಂದು ರಜೆಯ ವಿಷಯದಲ್ಲಿ ಜಗಳವಾಡಿ ಡಬಲ್ ಡೆಕ್ಕರ್ ಸಿಟಿ ಬಸ್ಸೊಂದನ್ನು ತೆಗೆದುಕೊಂಡು ಗಣೇಶ ಚೌತಿಗಾಗಿ ತನ್ನ ಊರಿನತ್ತ ಧಾವಿಸುವುದು ಕೇವಲ ಆಕಸ್ಮಿಕವಲ್ಲ. ಈ ಸಂಕಲನದ ಪ್ರಾರಂಭಿಕ ಕತೆಗಳಲ್ಲಿ ಬರುವ ಪ್ರಾದೇಶಿಕತೆ ಎಷ್ಟೊಂದು ದಟ್ಟವಾಗಿದೆಯೆಂದರೆ ಪಾಂಡುರಂಗನಲ್ಲಿರುವಂಥ ಸೆಳೆತವು ಕತೆಗಾರರಲ್ಲಿಯೂ ತಮ್ಮ ಪ್ರದೇಶದ ಬಗ್ಗೆ ಇರಲೇಬೇಕು. ಅದಕ್ಕೇ ಪಾಂಡುರಂಗನ ಸೆಳೆತದ ಹಿಂದೆ ಯಾವುದೇ ತರ್ಕವನ್ನು ಹುಡುಕಲು ಸಾಧ್ಯವಾಗುವುದಿಲ್ಲ. ಪ್ರಾದೇಶಿಕ ಸೆಳೆತವು ಇಂಥದೇ ಒಂದು ಸೆಳೆತವಾಗಿರುತ್ತದೆ. ತಮಾಷಾದ ಹೆಣ್ಣಿನ ಜೊತೆ ಪಾಂಡುರಂಗನು ಕಳೆಯುವ ಕೆಲ ರಸಘಳಿಗೆಗಳು ವಾಸ್ತವದಿಂದ ದೂರವಾಗಿದ್ದರೂ ಕೂಡ, ಪ್ರಾದೇಶಿಕತೆಯಲ್ಲಿಯ ತನ್ಮಯತೆಯಿಂದ ಉಂಟಾಗುವ ಆನಂದವೇ ಆ ಕಲ್ಪನೆಯಲ್ಲಿಯೂ ಇದೆ. ಈ ಕತೆ ಈ ದೃಷ್ಟಿಯಿಂದ ನನಗೆ ಬಹಳ ಮಹತ್ವದ್ದಾಗಿ ತೋರಿದೆ. ಹಾಗೆಯೇ ಮುಂಬಯಿ ಮತ್ತು ರತ್ನಾಗಿರಿಯ ಒಂದು ಮೂಲೆಯನ್ನು ಜೋಡಿಸುವ ಈ ಕತೆಯು ಲೇಖಕನ ಸೃಜನಕಲೆಯಲ್ಲಿಯ ಒಂದು 'ಬಿಟ್ಟ ಸ್ಥಳ'ವನ್ನು ತುಂಬುವ ಪ್ರಯತ್ನವಂತೆಯೂ ಕಾಣುತ್ತದೆ.

ಈ ಸಂಕಲನದ ಹೆಸರು ಪಡೆದಿರುವ 'ಬಣ್ಣದ ಕಾಲು' ಕೂಡ ಮುಂಬಯಿ ಮತ್ತು ಗೋವಾದ ಪರಿಸರವನ್ನು ಜೋಡಿಸುವಂತೆ ಮೇಲ್ನೋಟಕ್ಕೆ ಕಂಡರೂ, ಕತೆಯ ಆಶಯ ಇನ್ನೂ ಆಳವಾಗಿದೆ. ಗೋವಾದ ಪರಿಸರವು ಇಲ್ಲಿ ಗೋಕರ್ಣದ ಪರಿಸರಕ್ಕಿಂತ ಭಿನ್ನವಾಗಿಲ್ಲ ಎನ್ನುವಂತೆ ವರ್ಣಿತವಾಗಿದೆ. ಅದೇನೇ ಇದ್ದರೂ, ಮಾನವೀಯ ಸಂಬಂಧಗಳಲ್ಲಿಯ ಅಲಿಖಿತ ಪಾರ್ಶ್ವ

ಮತ್ತು ಮಹಾನಗರಗಳಲ್ಲಿ ಅನಿವಾರ್ಯವಾಗಿ ಹುಟ್ಟಿದ ಕ್ರೌರ್ಯ ಇವುಗಳ ತುಲನಾತ್ಮಕ ದೃಷ್ಟಿಕೋನವೇ ಕತೆಯ ಕೇಂದ್ರವಲ್ಲಿದ್ದಂತೆ ಕಾಣುತ್ತದೆ. ಚಂದು ಮತ್ತು ಹೂವು ಮಾರುವ ಕುಂಟ ಮಂಗೇಶರ ಮಧ್ಯೆ ಇರುವ ಒಂದು ಅನಿರ್ವಚನೀಯವಾದ ಸ್ನೇಹವು ಮುಂಬಯಿಯ ಕರಾಳ ರಿಮಾಂಡ್ ಹೋಮ್‌ಗೆ ಸಾಟಿಯಾಗಿ ನಿಲ್ಲುವುದು ಅಶಕ್ಯವೆಂಬುದು ಕತೆಯ ಸನ್ನಿವೇಶ ಮತ್ತು ವಿವರಗಳ ಹಿಂದೆ ಮೌನವಾಗಿ ನಡೆದುಬರುತ್ತದೆ. ಈ ವಿಜಯವು ಎಲ್ಲಿಯೂ ವಾಚ್ಯವಾಗದೆ, ಚಂದುನ ತಂದೆಗೆ ತನ್ನ ಮಗನ ತುಂಟಾಟವು ಮುಂಬಯಿಯ ಕ್ರೌರ್ಯದೆದುರು ಏನೇನೂ ಅಲ್ಲ ಎಂಬ ಅರಿವು ಉಂಟಾಗುವುದಿದೆಯಲ್ಲ, ಅದು ಈ ಕತೆಯ ಹೆಚ್ಚುಗಾರಿಕೆ. ಚಂದುನಿಗೆ ತಾನು ಎಂಥ ಜಗತ್ತಿಗೆ ಕಾಲಿಡುತ್ತಿದ್ದೇನೆಂಬ ಅರಿವಿಲ್ಲ, ಕಾಟಕರ್‌ನನ್ನು ನಂಬಿ ಮುಂಬಯಿಗೆ ಹೋದ ಚಂದುವಿನ ತಂದೆ ನರಸಿಂಹನಿಗೆ ಉಂಟಾಗುವ ಭ್ರಮನಿರಸನ ಮತ್ತು ಮುಂಬಯಿಯ ರಿಮಾಂಡ್ ಹೋಮ್‌ನ ಒಳದರ್ಶನವಾಗದಿದ್ದರೂ, ಮುಂಬಯಿ ದರ್ಶನ ದಿಂದಲೇ ಆ ರಿಮಾಂಡ್ ಹೋಂ ಹೇಗಿರಬಹುದೆಂಬುದು ಓದುಗರ ಅರಿವಿಗೆ ಬರುವಂತೆ ಮಾಡುವುದು— ಇವೆಲ್ಲ ಪಳಗಿದ ಕಥನ ಕ್ರಮಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

'ಸೇವಂತಿ ಹೂವಿನ ಟ್ರಕ್ಕು' ಕತೆಯಲ್ಲಿ ಜೀವನವಿಡೀ ತನ್ನ ಬಾಳನ್ನು ಇನ್ನೊಬ್ಬರ ಸೇವೆಯಲ್ಲಿ ಸವೆಯಿಸಿದ ದುರ್ಗಿಯ ಅಂತಿಮ ದಿನಗಳು ಮುಂಬಯಿಯಲ್ಲಿ ಕಳೆಯುತ್ತಿರುವ ಚಿತ್ರಣವಿದೆ. ಮುಂಬಯಿಯ ಜೀವನದಲ್ಲಿ ಮಾನವೀಯ ಸಂಬಂಧಗಳು ಕ್ರಮೇಣ ಕ್ಷೀಣವಾಗುತ್ತ ಬಂದು ಅವಳಿಗೆ ಕೊನೆಗೆ ಸಾಯುವ ಮಾತ್ರೆ ಕೊಡುವ ತಯಾರಿ ನಡೆಯುತ್ತದೆ. ಸೇವಂತಿ ಹೂವಿನಂತೆ ಮರುದಿನ ದುರ್ಗಿಯು ಬಾಡಿ ಕೊನೆಯಪ್ಪಬೇಕು. ಇದೇ ದುರ್ಗಿ ಗೋಕರ್ಣದ ಪರಿಸರದಲ್ಲಿದ್ದರೆ ಏನಾಗುತ್ತಿತ್ತೆಂಬುದು ಕತೆಗಾರರನ್ನು ಕಾಡಿರಬಹುದು. 'ಚಂದ್ರಶಾಲೆ' ಯಲ್ಲಿಯ 'ಹುಚ್ಚಿ' ಕಾಯಕ್ಕನನ್ನು ಸಹಿಸಿದಂತೆ ದುರ್ಗಿಯನ್ನೂ ಸಹಿಸುತ್ತಿದ್ದರೇನೋ! ಆದರೆ ಮುಂಬಯಿ ಯಲ್ಲಿ ಕೆಲಸಕ್ಕೆ ಬಾರದ ದುರ್ಗಿಯನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ಪ್ರಾಯಶಃ ಆ ನಗರ ಜೀವನಕ್ಕೇ ಅಂಥ ಶಕ್ತಿ ಇಲ್ಲ.

'ದಿಟ್ಟಿ ಬೊಟ್ಟು' ಕತೆಯಲ್ಲಿ ಕಾಣಸುವ ಕೆ.ಕೆ. ದುರ್ಗಿಗಿಂತ ಭಿನ್ನವಲ್ಲ. ದುರ್ಗಿಗೆ ಹಳ್ಳಿಯ ಹಿನ್ನೆಲೆಯಿದೆ. ಕೆ.ಕೆ.ಗೆ ಇಲ್ಲ. ದುರ್ಗಿಯು ಉದ್ದೇಶರಹಿತವಾಗಿ ದುಡಿದಿದ್ದಾಳೆ. ಕೆ.ಕೆ. ಒಂದು ಉದ್ದೇಶವಿಟ್ಟುಕೊಂಡು ಜೀವನ ಸವೆಸಿದ್ದಾರೆ. ಅನಾಥ ಮಕ್ಕಳಿಗೆ, ಬಡ ಮಕ್ಕಳಿಗೆ ಈ ಮೂಲ ಸಮಾಜವಾದಿ ಪರಿವರ್ತಿತ ಮಾನವತಾವಾದಿ ಕಲಾಕಾರನು ಚಿತ್ರಕಲೆಯನ್ನು ಕಲಿಸಲು ಪ್ರಯತ್ನಿಸಿದ್ದಾನೆ. ಒಮ್ಮೊಮ್ಮೆ ಈ ಪ್ರಯತ್ನ ಹಾಸ್ಯಾಸ್ಪದವಾಗಿ ತೋರಿದರೂ ಆತನಿಗೆ ಆ ಪ್ರಪಂಚ ವಾಸ್ತವವೆ. ಈ ಕಲಾಕಾರನ ಕೊನೆಯ ದಿನಗಳು ಕೂಡ ದಾರುಣವಾಗಿವೆ. ಆದರೆ ಆತ ಸಂಪಾದಿಸಿದ ವಿಶ್ವಾಸ ಮತ್ತು ಪ್ರೀತಿ ಆತನನ್ನು ಸ್ವಲ್ಪಾದರೂ ಕಾಪಾಡಿದೆ. ಸಾಮಾಜಿಕ ವಾಗಿ ತೊಡಗಿಸಿಕೊಂಡ ನಿರುಪದ್ರವಿ ಮತ್ತು ನಿಃಸ್ವಾರ್ಥಿಯು ಕೊನೆಗಾಲದಲ್ಲಿ ಹೆಚ್ಚಿನದನ್ನು ಅಪೇಕ್ಷಿಸುವುದಿಲ್ಲ ಎಂಬ ಧ್ವನಿ ಕತೆಯಲ್ಲಿ ವಿಶೇಷವಾಗಿ ಅಡಕವಾಗಿದೆ. ಸಾವಿನಂಚಿನಲ್ಲಿಯ ತಾಯಿಯು ತನ್ನ ಮಗಳಿಗೆ ಜಡೆ ಹಾಕುವ ಚಿತ್ರದೊಂದಿಗೆ ಕತೆ ಮುಕ್ತಾಯವಾಗಿದೆ. ಸಾವಿನಂಚಿನಲ್ಲಿಯೂ ಅಂತಃಕರಣ, ಮಾಯೆ, ವಾತ್ಸಲ್ಯ ಇವುಗಳಿಗೆ ಸ್ಥಾನವಿದೆ ಎಂಬುದು

ಓೀಗೆ ಚಿತ್ರಿತವಾಗಿದ್ದರೆ ಇಲ್ಲಿ 'ಸೇವಂತಿಗೆ ಹೂವಿನ ಟ್ರಿಪ್ಪು' ಕತೆಯಲ್ಲಿ ಅವುಗಳ ಅಭಾವ ಎದ್ದು ಕಾಣುತ್ತದೆ. ಕೆ.ಕೆ. ನಮ್ಮ ಸಮಾಜದಲ್ಲಿಯ ದಿಟ್ಟ ಬೊಟ್ಟಿನಂತೆ ಕಾಣುತ್ತಾರೆ.

'ಅಪರೂಪ' ಕತೆಯಲ್ಲಿಯ ಹುಡುಗಿ ವರ್ಷಾ ಮೊದಮೊದಲು ತನ್ನ ಊನವನ್ನು– ಬಲಪಾರ್ಶ್ವ ಸೊಟ್ಟಗೆ– ಮುಚ್ಚಿಟ್ಟುಕೊಳ್ಳಲು ಹೆಣಗುತ್ತಿದ್ದವಳು ನಿಧಾನಕ್ಕೆ ಅದನ್ನು ಒಪ್ಪಿಕೊಳ್ಳುತ್ತಾಳೆ. ಅವಳ ಮದುವೆಯ ಪ್ರಯತ್ನದ ಹಿಂದೆ ಅಡಗಿದ ಜವಾಬ್ದಾರಿ ಕಳೆದುಕೊಳ್ಳಬೇಕೆಂಬ ಹುನ್ನಾರಿಗೆ ವಾತ್ಸಲ್ಯದ ಸ್ಪರ್ಶವೂ ಇದೆ. ಕೊನೆಗೆ ತಮ್ಮನಿಗೆ ಒಂದು ಟೆಲಿಫೋನ್ ಬೂತ್ ಹಾಕಲು ತನ್ನ ಊನವೇ ಆಸರೆಯಾಗಿ ನಿಲ್ಲಬಹುದೆಂಬ ಸಂಗತಿಯು ವರ್ಷಾಳಲ್ಲಿ ಪುಳಕವನ್ನುಂಟುಮಾಡುತ್ತದೆ. ಮದುವೆಗೆಂದು ಫೋಟೊ ತೆಗೆಯಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದವಳು, ತಮ್ಮನಿಗೆ ಆಸರೆಯಾಗುವ ಫೋಟೊಕ್ಕೆ ತನ್ನ ಊನವನ್ನೇ ಮುಂದೆ ಮಾಡಿ ನಿಲ್ಲುತ್ತಾಳೆ.

'ಹೊಸ್ತಿಲು' ಕತೆ ಮಾತ್ರ ಓದುಗರನ್ನು ಒಂದು ವಿಚಿತ್ರವಾದ ಕನಸಿನ ಲೋಕಕ್ಕೆ ಕರೆದೊಯ್ಯುತ್ತದೆ. ಮೋಡಕಾ ದುಕಾನಿನ ಮುಚ್ಚಿಮಿಯಾ ಕನ್ನಡಿಯಲ್ಲಿ ತನ್ನ ಕನಸಿನ ಲೋಕದ ಮಹಿಳೆಯನ್ನು ಕಾಣತೊಡಗುತ್ತಾನೆ! ಆತನು ಪಡೆದ ಆ ಕನ್ನಡಿಯುಳ್ಳ ಟೇಬಲ್ ಬಂದ ಮೇಲೆಯೇ ಆತನಿಗೆ ಕನ್ನಡಿಯಲ್ಲಿ ಆ ಕನಸಿನ ಲೋಕದ ಮಹಿಳೆ ಏಕೆ ಕಾಣತೊಡಗುತ್ತಾಳೆ ಎಂಬುದಕ್ಕೆ ಕತೆಯಲ್ಲಿ ಉತ್ತರವಿಲ್ಲ. ಇದು ಕತೆಯನ್ನು ದುರ್ಬಲವನ್ನಾಗಿ ಮಾಡಿದೆ. ಇಂಥ ಕನಸಿನ ಲೋಕ ಮತ್ತು ವಾಸ್ತವದ ಮಿಲನದಲ್ಲಿರುವ ಹೊಸ್ತಿಲು ಕತೆಯಲ್ಲಿ ವಾಚ್ಯವಾಗುವುದಿಲ್ಲ, ನಿಜ. ಆದರೆ ಮುಚ್ಚಿಮಿಯಾನ ಜೀವನದ ಪರಿಶ್ರಮದಲ್ಲಿ ಒಂದು ಆರೋಗ್ಯಪೂರ್ಣ ಲೈಂಗಿಕ ಸಂಬಂಧಕ್ಕೆ ಸ್ಥಾನವೇ ಇಲ್ಲದಾಗಿದ್ದರಿಂದ ಇಂಥ ಕನಸಿನ ಲೋಕ ಅನಿವಾರ್ಯವೆಂಬಂತೆ ಇಲ್ಲಿನ ಬಾಳು ಚಿತ್ರಿತವಾಗಿದೆ. ಇದು ಕೂಡ ಮುಂಬಯಿಯ ಜೀವನದ ಒಂದು ಭಾಗವೆ. 'ಬಣ್ಣದ ಕಾಲು' ಕತೆಯಲ್ಲಿ ಬರುವ ಚಹಾ ಮಾರುವ ಹುಡುಗ ಪೋಪಟ್ ಇಲ್ಲಿ ಕೂಡ ಕಾಣಿಸಿಕೊಳ್ಳುತ್ತಾನೆ. 'ಬಣ್ಣದ ಕಾಲು' ಕತೆಯಲ್ಲಿ ಕ್ರೌರ್ಯಕ್ಕೆ ಸಂವಾದಿಯಾಗಿ ಬರುವ ಹಳ್ಳಿಗಾಡಿನ ಮುಗ್ಧತೆಯಂತೆ ಇಲ್ಲಿ ಅನಾರೋಗ್ಯಕರ ಪರಿಸರಕ್ಕೆ ಕನಸಿನ ಲೋಕವೊಂದು ಸಂವಾದಿಯಾಗಿ ಬಂದಂತೆ ತೋರುತ್ತದೆ.

ಜಯಂತ ಕಾಯ್ಕಿಣಿಯವರು ಕಂಡ ಜೀವನದ ಹರಹು ದೊಡ್ಡದು. ಅದರಲ್ಲಿ ಅವರು ತದೇಕ ಚಿತ್ತದಿಂದ ಗಮನಿಸಿದ ವಿಷಯಗಳೂ ಅನೇಕ. ಇಷ್ಟಾದರೂ ಕೂಡ ಒಂದೇ ಕಥಾವಸ್ತುವಿನ ಹಲವಾರು ಪಾರ್ಶ್ವಗಳನ್ನು ಕತೆಗಾರರು ತಿರುಗಿಸಿ ನೋಡುತ್ತಿದ್ದಾರೆನ್ನಿಸುತ್ತದೆ. ಪ್ರಾದೇಶಿಕತೆಯ ಬಲವಿರುವ ಕತೆಗಳಲ್ಲಿ ವಿವರಗಳು ಭಾಷೆಯ ಹೊಸ ಅನೂಹ್ಯತೆಗೆ ದಾರಿ ಮಾಡಿಕೊಡುತ್ತವೆ. ಅಲ್ಲಿ ಘಟನಾವಳಿಗಳು ಕೂಡ ಗೌಣವಾಗಿಬಿಡುತ್ತವೆ. ನಗರ ಜೀವನವನ್ನು ಚಿತ್ರಿಸುವಾಗ ಮಾತ್ರ ಕೆಲವೆವೆ ಘಟನೆಗಳು ಅನಿವಾರ್ಯವಾಗುತ್ತವೆ.

ಕನ್ನಡದ ಕಥಾಲೋಕವು ನಿರೂಪಣಾ ವಿಧಾನ ಮತ್ತು ಭಾಷೆಯಲ್ಲೇ ಸಂಭವಿಸುವ ಸಂಬಂಧಗಳ ಸಬಲತೆಯ ಮಧ್ಯೆ ತುಯ್ಯುತ್ತಿದೆ. ಅಂಥ ಒಂದು ಸನ್ನಿವೇಶದ ಎಲ್ಲ ಶಕ್ತಿಯನ್ನು ಹರಳುಗಟ್ಟಿಸಿಕೊಂಡು 'ಬಣ್ಣದ ಕಾಲು' ಕಥಾಸಂಕಲನದ ಕತೆಗಳು ಮಾಗಿ ನಿಂತಿವೆ.

✤ ಮಾಧವ ಕುಲಕರ್ಣಿ : EWS-೧೫೫೫, ೯ನೇ ಮೇನ್, ೧ನೇ ಹಂತ ಹೆಬ್ಬಾಳ್
ಮೇಟಗಳ್ಳಿ, ಮೈಸೂರು-೫೭೦ ೦೧೬

✤

ಅಶೋಕ ಹೆಗಡೆಯವರ 'ಅಶ್ವಮೇಧ'

ನರೇಂದ್ರ ಪೈ

ಉತ್ತರ ಕನ್ನಡದ ಬಹುತೇಕ ಎಲ್ಲ ಕತೆಗಾರರಲ್ಲಿ ಕಾಣಸಿಗುವ ಗ್ರಾಮೀಣ ಬದುಕಿನ ತಾಜಾತನ, ಸೂಕ್ಷ್ಮ ಸಂವೇದನೆ ಮತ್ತು ಪರಿಸರದ್ದೇ ಕಾಣ್ಕೆಯಾದ ವೈಶಿಷ್ಟ್ಯಗಳು ಇಲ್ಲಿನ ಕತೆಗಾರರ ಕತೆಗೆ ವಿಶೇಷ ಸೊಗಡು, ಆಪ್ತ ಧಾಟಿ ಒದಗಿಸಿಕೊಟ್ಟಿದೆ. ಮೂಲಭೂತವಾಗಿ ಅಶೋಕರ ಬರವಣಿಗೆಯ ಜಾಡು ಕೂಡ ಇದೇ ಸೊಗಡು ಪಡೆದು ಬಂದಿರುವಂಥದ್ದು. ಅಶೋಕರ ಮೊದಲ ಕಥಾಸಂಕಲನದಲ್ಲಿನ ('ಒಂದು ತಗಡಿನ ಚೂರು') ಬಹುತೇಕ ಎಲ್ಲ ಕತೆಗಳಲ್ಲೂ ಇದನ್ನು ಕಾಣಬಹುದು. ಆದರೆ ಪ್ರತಿ ಸಂಕಲನದಲ್ಲೂ ಅಶೋಕರು ವಿಭಿನ್ನ ಪಾತಳಿಯಲ್ಲಿನ ಕತೆಗಳನ್ನು ಕೊಟ್ಟಿರುವುದು ಗಮನಾರ್ಹ. 'ಒಂದು ತಗಡಿನ ಚೂರು' ಸಂಕಲನದ ಒಂದು ವರ್ಗದ ಕತೆಗಳು ಉತ್ತರ ಕನ್ನಡದ ಜನಜೀವನ, ಸಾಂಸಾರಿಕತೆ, ಪ್ರೇಮ, ಕಾಮ, ತಲೆಮಾರು ಮತ್ತು ನಗರ ಜೀವನ ತರುವ ತಲ್ಲಣಗಳ ಸುತ್ತ ಇದ್ದರೆ ಇಲ್ಲಿನ ದೂರ ಸಮುದ್ರದ ಕಾಡು, ಗಡಿಯಾರ ಗೋಪುರದ ಇತಿಹಾಸವು, ಒಂದು ತಗಡಿನ ಚೂರು ಕತೆಗಳಲ್ಲಿ ಅಶೋಕರು ತಮ್ಮ ಕತೆಗಾರಿಕೆಯ ಬೇರೆಯೇ ಮಜಲಿನ ಸಾಧ್ಯತೆಗಳತ್ತ ಹೊರಳಿರುವುದನ್ನು ಕಾಣುತ್ತೇವೆ. ಅದೇ ರೀತಿ ತಮ್ಮ ಎರಡನೆಯ ಕಥಾಸಂಕಲನಕ್ಕೆ ('ಒಳ್ಳೆಯವನು') ಬರುವಾಗ ನಮಗೆ ಎದುರಾಗುವುದು ವಿಭಿನ್ನ ಬಗೆಯ ಕತೆಗಳು. ಇಲ್ಲೂ ವಸ್ತು, ಶೈಲಿ, ತಂತ್ರ ಮತ್ತು ಆಶಯಗಳಲ್ಲಿ ವೈವಿಧ್ಯ ಇದೆ. ಅನೇಕ ಕಡೆ ಇವರು ತಮ್ಮದೇ ಹಳೆಯ ಮಾರ್ಗದಿಂದ ಹೊರಳಿ ನಡೆದುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಆಲಿಕಲ್ಲು, ನೀಲಿ ಬಾನಿನಲ್ಲಿ ನಗುವ ಚಂದಿರ, ಹೊಳೆವದ್ದೆ ತಾರೆ, ನಿನ್ನ ಹೆಸರಿನಲ್ಲಿ ಒಂದು ತೆರೆ ಹುಟ್ಟಲಿ, ಉಳಿದಿದ್ದೆ ದಾರಿ ಕತೆಗಳು ಅಂಥ ಹಂಬಲವನ್ನು ತಮ್ಮೊಳಗೆ ಹೊಂದಿದ್ದ ಕತೆಗಳೇ. ಆದರೆ ಅವು ಪೂರ್ತಿಯಾಗಿ ತಾತ್ವಿಕ ಆಯಾಮಗಳಿಗೆ ಶರಣಾಗುವುದಿಲ್ಲ. ಬಹುಶಃ ಈ ಹೆಸರುಗಳೇ ಅದನ್ನೆಲ್ಲ ಸೂಚಿಸುತ್ತಿರುವಂತಿದೆ! ಹಾಗೆಯೇ ಈ ಕತೆಗಳು ಕೇವಲ 'ಭಾವ' ನಿರ್ಮಿತಿಯೊಂದಿಗೆ ನಿಲ್ಲುವುದೂ ಇಲ್ಲ. ಅಶೋಕರ ಅತ್ಯುತ್ತಮ ಕತೆಗಳು ಈ ಎರಡು ಬಗೆಯ ಕತೆಗಳಲ್ಲೇ ಸಿಗುತ್ತವೆ. 'ಅಂತರದಂಗೆ'ಯಂಥ ಕತೆಯಲ್ಲಿ ಸಮಕಾಲೀನ ವಸ್ತು, ವಿವರಗಳಿಂದ ಜಾಗತೀಕರಣ, ಮುಕ್ತ ವ್ಯಾಪಾರ ನೀತಿ, ಕ್ಷಿಪ್ರ ಆರ್ಥಿಕತೆಗಳೆಲ್ಲಾ ಸೇರಿ ಸಾಮಾನ್ಯ ಮನುಷ್ಯನೊಬ್ಬನ ಭ್ರಮಾತ್ಮಕ ಹೊಸ ಜಗತ್ತೊಂದು ಏಕಾಏಕಿ ತೆರೆದುಕೊಳ್ಳುವುದನ್ನೂ ಮತ್ತು ಅದು ಅಷ್ಟೇ ಬೇಗ ಬಿಳಿಚಿಕೊಂಡು ಯೂಸ್ ಎಂಡ್ ಥ್ರೋ ತರದ ಬದುಕನ್ನೇ ಅವನ ಪಾಲಿಗೆ ನಿರ್ಮಿಸಿ ಕೊಡುವುದನ್ನೂ ಅದ್ಭುತವಾಗಿ ಚಿತ್ರಿಸಿದೆ. ಆದರೆ ಅಂತರದಂಗೆ, ಒಳ್ಳೆಯವನು, ಕೈ ಹಿಡಿದವರು ಕತೆಗಳು ಅಶೋಕರ ಎಂದಿನ ಶೈಲಿಯಿಂದ ತೀರ ಭಿನ್ನವಾಗಿಯೇ ನಿಲ್ಲುತ್ತವೆ.

ಈ ಹಿನ್ನೆಲೆಯನ್ನು ಗಮನಿಸಿಯೇ ಅಶೋಕರ ಕಾದಂಬರಿ 'ಅಶ್ವಮೇಧ'ವನ್ನು ಕುರಿತು ಮಾತನಾಡುವುದು ಸೂಕ್ತ. ಯಾಕೆಂದರೆ ಮೇಲ್ನೋಟಕ್ಕೆ ಸುಮಾರು ಮೂರು ನಾಲ್ಕು ದಶಕದಷ್ಟು

ಹಿಂದಿನ ಕಾಲಮಾನದ ಒಂದು ಕತೆಯನ್ನು ಅಶೋಕರು ಇಲ್ಲಿ ನಮಗೆ ಹೇಳುತ್ತಿದ್ದಾರೆ. ಇವತ್ತಿಗೆ ಇದು ಹೇಗೆ ಮತ್ತು ಯಾಕೆ ಪ್ರಸ್ತುತ ಎಂಬ ಪ್ರಶ್ನೆಯ ಜೊತೆಗೇ ಅಶೋಕರ ಸಾಹಿತ್ಯಕ್ಕೆ ದಕ್ಕಿದ ವಸ್ತು, ನಿರೂಪಣೆಯ ವಿಧಾನ ಮತ್ತು ಅವರ ದೃಷ್ಟಿಯಲ್ಲಿ ಸಮಕಾಲೀನ ಸಂಗತಿಗಳ ಪ್ರಾಧಾನ್ಯಗಳು ಸರಿಸುಮಾರು ಈ ಒಂದು ದಶಕದಲ್ಲಿ ಪಡೆದುಕೊಂಡ ತಿರುವುಗಳನ್ನೂ ಗಮನಿಸಲು ಆಗ ಮಾತ್ರ ನಮಗೆ ಸಾಧ್ಯವಾಗಬಹುದು.

ಸುಬ್ರಾಯ ಹೆಗಡೆ, ಸೀತಾರಾಮ ಭಟ್ಟ ಅಪ್ಪಾಗಿ ಕತೆಯ ಮುಖ್ಯ ಭೂಮಿಕೆಗೆ ಬರದ ಚಂದ್ರಹಾಸ ಭಟ್ಟ, ಶಂಭು ಹೆಗಡೆ, ಪುರುಷೋತ್ತಮ, ಮಠದ ಸ್ವಾಮಿ ಒಂದು ಕಡೆ, ಬಹುತೇಕ ಒಂಟಿಯಾಗಿಯೇ ರಾಮಾನಾಯ್ಕ ಇನ್ನೊಂದು ಕಡೆ. ಆದರೂ ಸುಬ್ರಾಯ ಹೆಗಡೆಯನ್ನು ಉಪಾಯವಾಗಿ ಮಣಿಸುವ ಅವರದೇ ಗುಂಪು, ರಾಮಾನಾಯ್ಕನನ್ನು ಬಳಸಿಕೊಳ್ಳುವ ಅವನದೇ ಗುಂಪು (ರಾಜಕಾರಣ), ಎರಡೂ ಕಡೆ ಈ ಸಂಕೀರ್ಣ ಪರಿಸ್ಥಿತಿಯಲ್ಲೇ ಉಗಮವಾಗುವ ಚರ್ಚು ಮತ್ತು ಬೇರೊಂದು ಮಠ ಸ್ಥಾಪನೆಯ ಯೋಜನೆ, ಅದರ ತಯಾರಿಯಲ್ಲೇ ತಮ್ಮ ತಮ್ಮ ಅಜೆಂಡಾ ವಿಸ್ತರಣೆಗೆ ಈ ಸಂದರ್ಭವನ್ನು ಬಳಸಿಕೊಳ್ಳಲು ಕಾದಿರುವಾಗ ಈ ಎರಡೂ ಕಡೆಯ ಮುಂದಿ ತಮಗೇ ತಿಳಿಯದ ಹಾಗೆ ಅದಕ್ಕೆ ಬಲಿ ಬೀಳುವುದು ಎಲ್ಲವೂ ಕತೆಗೆ ಅಗತ್ಯವಾದ ಸಂಕೀರ್ಣತೆಯನ್ನು ತಂದುಕೊಡುವಲ್ಲಿ ಸಫಲವಾಗಿದೆ. ನಡುವಲ್ಲಿ ನಿಂತಂತೆ ಕಾಣುವ ರಾಜೀವ ಗಾಯತೊಂಡೆ ಕೂಡ ಇಲ್ಲಿ ನಾಯಕನಲ್ಲ. ಒಂದು ರೀತಿ ಹಳ್ಳಿಗೆ ಬರುವ ಆದರ್ಶವಾದಿ ಪಟ್ಟಣಿಗನಂತೆ ಈ ರಾಜೀವ ಗಾಯತೊಂಡೆ ಓದುಗರ ಮನದಲ್ಲಿ ಮೂರ್ತಿಯಾಗುವ ಮೊದಲೇ ಅವನನ್ನೂ ಒಬ್ಬ ಸಾಧಾರಣ ಅವಕಾಶವಾದಿಯೆಂಬಂತೆ ಚಿತ್ರಿಸಿ, ಅದು ಅಳಿಸಿಹೋಗುವ ಮೊದಲೇ ಅವನನ್ನು ಮತ್ತೆ ಮೊದಲಿನ ಚಿತ್ರಕ್ಕೆ ತಂದಿರುವುದರಲ್ಲಿ ತುಂಬ ಔಚಿತ್ಯ ಕಾಣುತ್ತದೆ. ಈ ಪಾತ್ರ ಊರಿನ ಜಡ, ಚಲಿಸದ ನೀರಿನಂತಿದ್ದ ಜೀವಂತಿಕೆಗೆ ಚಲನೆಯನ್ನು ತರುವುದಂತೂ ಸತ್ಯ. ಹಾಗೆಯೇ ಇಲ್ಲಿನ ನಿಜವಾದ ಅಶ್ವಮೇಧದ 'ಕುದುರೆ' ಕೂಡಾ ಇವನೇ ಎಂಬುದೂ ಸತ್ಯ. ಕಥಾನಕದ ಕೊನೆಯಲ್ಲಿ ಬರುವ ಮಠದ ಸ್ವಾಮಿಯ 'ಸಾಮ್ರಾಜ್ಯ' ವಿಸ್ತರಣೆಯ ದಾಹ ಬ್ರಾಹ್ಮಣರ ದಾಹ ಕೂಡ ಆಗಿ ಅಶ್ವಮೇಧದ ತಯಾರಿ ಸುರುವಾದರೂ ಅಲ್ಲಿ ಪೂರ್ಣಾಹುತಿ ನಡೆಯುವುದಕ್ಕೂ ಮುನ್ನ ರಾಜೀವ ಗಾಯತೊಂಡೆಯ ವಧೆಯಾಗಬೇಕೆಂಬ ಸಂಚು ರೂಪುಗೊಂಡಿರುವುದು ಇದನ್ನು ಪುಷ್ಟೀಕರಿಸುತ್ತದೆ. ಅಲ್ಲದೆ, ಮಠದ ಸಾಮ್ರಾಜ್ಯ ವಿಸ್ತರಣೆಯ ದಾಹ ಹೇಗೆ ಊರ ಬ್ರಾಹ್ಮಣ ಭೂಮಾಲೀಕರ ದಾಹ ಕೂಡ ಆಗಿತ್ತೆಂಬುದನ್ನೂ ಮತ್ತೆ ರಾಜೀವ ಗಾಯತೊಂಡೆ ಅದನ್ನು ಎದುರಿಸುವ ನೇರ ಮಾರ್ಗವನ್ನೂ ಕಾದಂಬರಿಕಾರರು ಬೀಜರೂಪದಲ್ಲಿ ಕೊಡಲು ಸುಬ್ರಾಯ ಹೆಗಡೆಯ ಕಪಾಳಮೋಕ್ಷದ ಪ್ರಕರಣವನ್ನು ಬಳಸಿಕೊಳ್ಳುತ್ತಾರೆ. ಇಡೀ ವ್ಯವಸ್ಥೆಯಲ್ಲಿ ಹೊಸತನ, ಬದಲಾವಣೆ ಮತ್ತು ಅಭಿವೃದ್ಧಿಗಳನ್ನು ವಿರೋಧಿಸುವ ಒಂದು ಪಂಗಡ ಮತ್ತು ಅಂಥ ಪ್ರತಿರೋಧವನ್ನು ಮೆಟ್ಟಿನಿಂತು ಮುನ್ನಡೆವ ಛಾತಿ ಪ್ರದರ್ಶಿಸಲೇಬೇಕಾದ ಆದರೆ ತೀರ ದುರ್ಬಲವಾದ ಇನ್ನೊಂದು ಪಂಗಡ ಇಲ್ಲಿರುತ್ತ ಪರಿಸ್ಥಿತಿ ಅಂಥ ಒಂದು ಸಾಧ್ಯತೆಯನ್ನೇ ಅನುಮಾನಿಸುವಂತಿರುತ್ತದೆ. ರಾಮಾನಾಯ್ಕನಂಥವರ ನಾಯಕತ್ವದ ಗುರುತ್ವ ಅದಗಿರುವುದು

ಈ ಹಿನ್ನೆಲೆಯಲ್ಲಿ, ಪ್ರತಿರೋಧದ ಮೊದಲ ಸ್ವರ ಏಳುವುದು ಮತ್ತು ಅದನ್ನು ಅನಿವಾರ್ಯಗೊಳಿಸುವಂಥ ಅದೇ ಸಮಾಜದ ಅಂತರ್ಗತ ಅಂಶಗಳು ಅನೇಕ ಬಾರಿ ಯಾರ ಗಮನಕ್ಕೂ ಬರದೆ ಹೋಗುತ್ತವೆ. ಇದೂ ಒಂದು ಸಂಕ್ರಮಣದ ಘಟ್ಟ. ಅದು ರೂಪುಗೊಂಡ ಚರಿತ್ರೆ ಹಾಗಾಗಿ ಬಹಳ ಮುಖ್ಯ ಮತ್ತು ಯಾವ ಕಾರಣಕ್ಕೂ ಅವಜ್ಞೆಗೆ ತುತ್ತಾಗಬಾರದ ಸಂಗತಿ. ಕಾದಂಬರಿಯ ಮಹತ್ವ ಇರುವುದು ಇಲ್ಲಿ.

ರಾಮಾನಾಯ್ಕನ ಕುದುರೆ ಕಟ್ಟುವ ಕ್ರಿಯೆ ಹಲವಾರು ಸಂಗತಿಗಳನ್ನು ಧ್ವನಿಸುವುದು ಗಮನಾರ್ಹ. ಅಶ್ವಮೇಧದ ಕುದುರೆಯನ್ನು ಕಟ್ಟುವುದು ಅದಕ್ಕೆ ರಕ್ಷಣೆ ಕೊಡುವ ಕ್ರಿಯೆ ಕೂಡ. ಹಾಗಾಗಿಯೇ ವೈರಿಗಳ ಕೊಲೆಯ ಸಂಚಿಗೆ ಗುರಿಯಾಗಿರುವ ರಾಜೀವ ಗಾಯತೊಂಡೆಯನ್ನು ರಾಮಾನಾಯ್ಕ ರಕ್ಷಿಸಿಕೊಳ್ಳುವನೆ ಅಥವಾ ಅವನ ಸಾವು ಇಡೀ ಹೋರಾಟಕ್ಕೆ ನೀಡಬೇಕಾದ ಬಲಿಯಾಗುವುದೆ ಎಂಬ ಪ್ರಶ್ನೆಗಳು ಓದುಗನನ್ನು ಕಾಡುತ್ತ ಉಳಿಯುತ್ತವೆ.

ಫ್ಯೂಡಲ್ ಅನಿಸದ ಬ್ರಾಹ್ಮಣ ಭೂಮಾಲೀಕ ವರ್ಗ ನಡೆಸುತ್ತ ಬಂದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಶೋಷಣೆ ಅದರ ಒಟ್ಟಾರೆ ಸ್ವರೂಪ ಮತ್ತು ದೂರಗಾಮಿ ಪರಿಣಾಮಗಳೊಂದಿಗೆ ಅಷ್ಟಾಗಿ ತಟ್ಟದಂತಿರುವ ಈ ಪುಟ್ಟ ಹಳ್ಳಿಯಂಥ ಹಳ್ಳಿಯಲ್ಲಿ ಚಲನೆ ಹೀಗೆಯೇ ಬರಬೇಕೆ, ನಮ್ಮ ಸಮುದಾಯಗಳು ಪರ ವಿರೋಧಿ ನೆಲೆಗಳನ್ನು ಮೀರಿ ನಡೆಯಬೇಕಾಗಿರುವಲ್ಲಿಯೂ ಯಾಕೆ ಸಣ್ಣತನ, ಭೇದ, ಹುನ್ನಾರುಗಳಿಂದ ಛಿದ್ರಗೊಳ್ಳುತ್ತವೆ ಮತ್ತು ಅದೆಲ್ಲದರಿಂದ ವಿನಾಶದ ಹಾದಿಯನ್ನು ತುಳಿಯುತ್ತವೆ ಎಂಬ ಬಹಳ ಪ್ರಸ್ತುತವೂ ಗಹನವೂ ಆದ ಪ್ರಶ್ನೆಗಳೆದುರು ನಮ್ಮನ್ನು ಕಾದಂಬರಿ ನಿಲ್ಲಿಸುವುದು ಕೂಡ ಈ ರಾಜೀವನ ಪಾತ್ರದ ಮೂಲಕವೇ. ಇಲ್ಲಿ ಕಾದಂಬರಿ ಸಮಕಾಲೀನ ಸಮಸ್ಯೆಯೊಂದಿಗೆ ಮುಖಾಮುಖಿ ಯಾಗಬೇಕಾಗುತ್ತದೆ. ಕಾದಂಬರಿಯ ಕಾಲಮಾನದಲ್ಲಿ ಬಹಳ ಮುಖ್ಯವಾಗಿದ್ದ ಜಾತಿ ಸಮಸ್ಯೆಗೆ ಹೇಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಮುಖಗಳಿದ್ದವೊ ಹಾಗೆಯೇ ಇವತ್ತಿನ ಕೋಮುವಾದಕ್ಕೂ ಈ ಬಗೆಯ ಸಂಕೀರ್ಣ ಸಮಸ್ಯೆಗಳ ಕೊಂಡಿ ಇದ್ದೇ ಇದೆ. ಇವೆರಡೂ ಪ್ರಶ್ನೆಗಳು ಏಕಕಾಲಕ್ಕೆ ಭಿನ್ನ ಬಗೆಯ ನಿಲುವನ್ನು ನಮ್ಮ ಜಾತಿವಾದಿಗಳಲ್ಲೂ ಕೋಮುವಾದಿಗಳಲ್ಲೂ ತರುತ್ತಿರುವುದು ಕುತೂಹಲಕರ. ಆದರೆ ಕಾದಂಬರಿಯಲ್ಲೇ ಬರುವ ಚರ್ಚಿನವರ ಶಾಲೆ ಇಂಥ ಯಾವುದೇ ಪ್ರಶ್ನೆಗಳ ಎದುರು ನಿಲ್ಲುವುದಿಲ್ಲ. ಅದಕ್ಕೆ ಆ ಕಾಲ ಎಷ್ಟು ಕಾರಣವೋ ಕಾದಂಬರಿಕಾರರ ಕೃತಿನಿಷ್ಠ ನಿಲುವು ಕೂಡ ಅಷ್ಟೇ ಕಾರಣವಿರಬಹುದೇ? ಯಾಕೆಂದರೆ ಅಶೋಕರು ಇಲ್ಲಿ ಶಾಲೆಯೊಂದಿಗೇ ಚರ್ಚು ಕೂಡಾ ಬರುವುದನ್ನು ಗಮನಿಸಿದ್ದಾರೆ!

ಜಾತಿಯ ನೆಲೆಯಲ್ಲಿ ಹುಟ್ಟುವ ಸಂಘರ್ಷಗಳು ಧರ್ಮದ ನೆಲೆಯ ಪ್ರಶ್ನೆಗಳ ಎದುರು ಹೆಚ್ಚು ಸಂಕೀರ್ಣವೂ, ವೈರುಧ್ಯಮಯ ನಿಲುವಿಗೆ ಕಾರಣವಾಗುವಂಥದ್ದೂ ಆಗಿರುತ್ತ, ಪ್ರಸ್ತುತ ಸಮಕಾಲೀನ ಜಗತ್ತಿನಲ್ಲೇ ವರ್ಗ ಸಂಘರ್ಷ ಮತ್ತು ಜಾತಿವಾರು ಸಂಘರ್ಷಗಳು ಈ ಧಾರ್ಮಿಕ ನೆಲೆಯಲ್ಲಿ ಪಡೆದುಕೊಳ್ಳುತ್ತಿರುವ ವಿಚಿತ್ರ ನೆಲೆಗಳನ್ನು ನಾವು ಪ್ರತಿನಿತ್ಯ ಕಾಣುತ್ತಿರುವಾಗಲೂ (ಉದಾ : ಕನಕ ಗೋಪುರದ ವಿಚಾರದಲ್ಲಿ ನಮ್ಮ ಕುರುಬರು ಮತ್ತು ಉಡುಪಿಯ ವೈದಿಕ

ಬ್ರಾಹ್ಮಣರು ತಳೆಯುವ ನಿಲುವು ಮತ್ತು ಧೋರಣೆಗಳು ಆಂತರಿಕ ಭಿನ್ನತೆಯಿಂದ ಇರುತ್ತ ಹಿಂದೂ ಮುಸ್ಲಿಂ ಪ್ರಶ್ನೆಯ ಎದುರು ಎರಡೂ ವರ್ಗದವರಲ್ಲಿ ಅದು ತಳೆಯುವ ರೂಪಾತರ; ಅಮೆರಿಕದ ಆಕ್ರಮಣಕಾರೀ ಧೋರಣೆಯ ಬಗ್ಗೆ ಸಾಮಾನ್ಯವಾಗಿ ಸಿಗುವ ಮುಸ್ಲಿಂ ವಿರೋಧಿ ಸಮರ್ಥನೆ ಮತ್ತು ಅಮೆರಿಕದಿಂದ ಅಂಥದೇ ಆಕ್ರಮಣವನ್ನು ಎದುರಿಸುತ್ತಿರುವ ಕೆಲವು ಕರಿಯ ಮತ್ತು ತೈಲ ಉತ್ಪಾದಿಸುತ್ತಿರುವ ರಾಷ್ಟ್ರಗಳ ಸಂದರ್ಭದಲ್ಲಿ ಅದು ಪಡೆಯುತ್ತಿರುವ ವಿರೋಧ ಇತ್ಯಾದಿ) ಅಂಥ ಸಂದರ್ಭಗಳೆದುರು ಕಾದಂಬರಿ ಕಾಲಾತೀತವಾಗಲಾರದ ನಿಷ್ಠುರತೆಯನ್ನೂ ಬದ್ಧತೆಯನ್ನೂ ಕಾಪಾಡಿಕೊಂಡು ಬಂದಿರುವುದು ಕೃತಿಯ ಹೆಚ್ಚುಗಾರಿಯನ್ನಾಗಿಯೂ ಮಿತಿಯನ್ನಾಗಿಯೂ ಕಾಣುವುದು ಸಾಧ್ಯವಿದೆ. ಕೃತಿಯ ಸಮಕಾಲೀನತೆಯ ಪ್ರಶ್ನೆಯನ್ನು ಚರ್ಚಿಸುವಾಗ ಕೃತಿ, ಕೃತಿಯ ಕಾಲಮಾನಕ್ಕೆ ಸಮಕಾಲೀನವಾಗಿರಬೇಕೆ, ಓದುಗನ ಓದಿನ ಕಾಲಕ್ಕೆ (ಅಥವಾ ಅದು ಪ್ರಕಟವಾದ ಕಾಲಕ್ಕೆ) ಸಮಕಾಲೀನವಾಗಿರಬೇಕೆ ಎನ್ನುವ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ಇವತ್ತು ಪ್ರಕಟವಾಗುತ್ತಿರುವ ಇತರ ಕಾದಂಬರಿ, ಸಣ್ಣ ಕತೆಗಳನ್ನು ಗಮನವಲ್ಲಿಟ್ಟುಕೊಂಡು ನೋಡುವಾಗ ಇನ್ನೂ ಕೆಲವು ಹೊಸ ಆಯಾಮಗಳೂ ನಮ್ಮ ಚಿಂತನೆಗೆ ಒದಗಿ ಬರಬಹುದಾಗಿದೆ. ಇವತ್ತು ಕಾರಂತರಾದಿಯಾಗಿ ಅಡಿಗರ, ಶಾಂತಿನಾಥ ದೇಸಾಯರ ಕಾದಂಬರಿಗಳು ಮತ್ತೆ ಮುದ್ರಣಗೊಳ್ಳುತ್ತಿವೆ. ಹಿಂದೆಂದಿಗಿಂತ ಹೆಚ್ಚಾಗಿ ಹಲವಾರು ಪ್ರಮುಖ ಅನ್ಯಭಾಷಾ ಕೃತಿಗಳು ಕನ್ನಡಕ್ಕೆ ಬರುತ್ತಿವೆ. ಆತ್ಮಚರಿತ್ರೆಗಳು, ಜೀವನಚರಿತ್ರೆಗಳು ಹೆಚ್ಚುಹೆಚ್ಚಾಗಿ ಅಚ್ಚಾಗುತ್ತಿವೆ. ತೇಜಸ್ವಿ (ಮಾಯಾಲೋಕ), ಕೆ. ಸತ್ಯನಾರಾಯಣ (ಕಾಲಜಿಂಕೆ), ಕುಸುಮಾಕರ ದೇವರಗೆಣ್ಣೂರು (ಬಯಲ ಬಸಿರು), ಬಾಳಾಸಾಹೇಬ ಲೋಕಾಪುರ (ಉಧೋ ಉಧೋ), ಚಂದ್ರಕಾಂತ ಕುಸನೂರು (ಕೆರೂರುನಾಮಾ), ವಿವೇಕ ಶಾನಭಾಗ (ಇನ್ನೂ ಒಂದು) ಮುಂತಾಗಿ ವಿಭಿನ್ನವೂ ವಿಶಿಷ್ಟವೂ ಆದ ಕೆಲವು ಮಹತ್ವದ ಕಾದಂಬರಿಗಳು ಹೊಸದಾಗಿ ನಮ್ಮೆದುರಿಗಿವೆ.

ಹೊಸ ಕಾದಂಬರಿಗಳನ್ನಷ್ಟೇ ಗಮನಿಸಿದರೂ ಪ್ರಸ್ತುತ ಕನ್ನಡ ಕಾದಂಬರೀ ಲೋಕ ಏಕಕಾಲಕ್ಕೆ ಮುವ್ವತ್ತು ನಲವತ್ತು ವರ್ಷಗಳಷ್ಟು ಹಿಂದಕ್ಕೂ ವರ್ತಮಾನಕ್ಕೂ ತುಯ್ಯುವ ಜಾಯಮಾನ ಹೊಂದಿರುವುದು ಕಾಣಿಸುತ್ತದೆ. ಈ ಹಿನ್ನೆಲೆಯಲ್ಲೂ ನಾವು ಸಮಕಾಲೀನ ಪ್ರಶ್ನೆ ಎತ್ತುವಾಗ ಏನನ್ನು ಧ್ವನಿಸುತ್ತಿದ್ದೇವೆ ಅಥವಾ ನಿರೀಕ್ಷಿಸುತ್ತಿದ್ದೇವೆ ಎಂಬುದನ್ನು ಸ್ಪಷ್ಟಗೊಳಿಸಿಕೊಳ್ಳುವುದು ಬಹಳ ಮುಖ್ಯ.

ಇಡೀ ಕಾದಂಬರಿಯ ಆಶಯ ಕರ್ನಾಟಕದ ಮತ್ತು ಅದರಂತೆ ದೇಶದ ಉಳಿದ ಅನೇಕ ಭಾಗಗಳಿಂದ ಸರಿಸುಮಾರು ಇದೇ ಕಾಲಘಟ್ಟದಲ್ಲಿ ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಅಸ್ಪೃಶ್ಯ ಮತ್ತು ಅರೆಅಸ್ಪೃಶ್ಯ ಕೆಳವರ್ಗದಿಂದ ನಾಯಕರಾಗಿ ಹೊರಹೊಮ್ಮಿದ ಕೆಲವರ ದಿಟ್ಟತನ ಪ್ರಕಟಗೊಂಡ ಸಂದರ್ಭ ಮತ್ತು ಅದರ ಸಂದಿಗ್ಧಗಳನ್ನು ದಾಖಲಿಸುವುದೇ ಆಗಿತ್ತು ಅನಿಸುತ್ತದೆ. ಇದೇ ಅರ್ಥದಲ್ಲಿ ಇಲ್ಲಿನ ನಿರ್ಮಲೆ ಮತ್ತು ಕೃಷ್ಣನ ಪ್ರೇಮ (?) ಪ್ರಕರಣವನ್ನು ನೋಡುವುದು ಅನಿವಾರ್ಯವಾಗುತ್ತದೆ. ಇಲ್ಲವಾದಲ್ಲಿ ನಿರ್ಮಲೆಯ ನಿರ್ಧಾರಗಳು ತೀರ ಅಪಕ್ವ ಎನಿಸುತ್ತವೆ. ಅವಳು ತನ್ನ ತಪ್ಪುಗಳನ್ನು ಗುರುತಿಸಿಕೊಳ್ಳುವಲ್ಲಿ ಮತ್ತು ಅದರಿಂದಾದ ವಿಪರೀತ ಪರಿಣಾಮಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ವಿಫಲಳಾಗುತ್ತಾಳೆ.

ತನ್ನ ಮನೆಗೆಲಸದ ಕೃಷ್ಣನೊಂದಿಗೆ ನಿರ್ಮಲೆಯದು ಬಾಲ್ಯದಿಂದಾರಂಭವಾದ ಸಖ್ಯ. ಅವಳು ತಾಲೋಕಿನಲ್ಲೆಲ್ಲಾ ಸಂಪ್ರದಾಯಸ್ಥ ಕುಟುಂಬದವರೆಂದು ಹೆಸರಾದ ಗಣೇಶ ಹೆಗಡೆಯವರ ಮಗಳಾದರೆ ಅವನು ಅಸ್ಪೃಶ್ಯ. ಶುದ್ಧಾಚಾರಕ್ಕೆ ತನ್ನ ಬಟ್ಟೆ ಬಿಚ್ಚಿಟ್ಟು ಅವಳೊಂದಿಗೆ ಆಡಿ ಬೆಳೆದ ಅವನಿಗೆ ಮುಂದೆ ತನ್ನನ್ನು ಪ್ರೇಮಿಸಿ, ಮದುವೆಯ ದಿನವಂದು ಕದ್ದು ಓಡಿ ಬಂದು ಸಂಸಾರ ಹೂಡುವ ಧೈರ್ಯ ಮಾಡಿದ ಇದೇ ನಿರ್ಮಲೆ ರಾತ್ರಿ ತನ್ನೆದುರು ಬೆತ್ತಲಾದಾಗ ಅವಳನ್ನು ಎದುರಿಸುವುದು ಸಾಧ್ಯವಾಗುವುದಿಲ್ಲ. ಪ್ರೇಮದಿಂದ ತನ್ನ ಹಿಂದೆ ಬಂದು ಇದೀಗ ಬೆತ್ತಲಾಗಿ ತನ್ನೆದುರು ನಿಂತು ಆಹ್ವಾನಿಸುತ್ತಿರುವ ನಿರ್ಮಲೆಯೆದುರು ಭಕ್ತಿಭಾವದಿಂದ ಗುಡ್ಡೆಯಾಗಿ ಬೀಳುವ ಕೃಷ್ಣನಲ್ಲಿ ಮೈಲಿಗೆ ಮಾಡಿದೆ ಎನ್ನುವ ತಪ್ಪಿನ ಅನಿಸಿಕೆ ಹುಟ್ಟುಹಾಕಿದ್ದು ಬೇರೇನಲ್ಲ. ಶತಶತಮಾನದ ಪರಂಪರಾನುಗತ ಸ್ವೀಕೃತ ಮೌಲ್ಯಗಳಾದ ಹಿಂಜರಿಕೆ, ಭಯ, ಹೇಡಿತನ. ಇದನ್ನೇ ರಾಮಾನಾಯ್ಕ ಮುಂದೆ ಮೀರಲಿರುವುದು. ರಾಮಾನಾಯ್ಕನ ನಿಜವಾದ ಲಂಘನದ ಪ್ರಾಮುಖ್ಯತೆ ಇರುವುದೇ ಇಲ್ಲಿ. ಕಾದಂಬರಿಯಲ್ಲಿ ಮುಂದೆಂದೂ ಕಾಣಬರದ ಕೃಷ್ಣ ರಾಮಾನಾಯ್ಕನ ಪೂರ್ವಾಶ್ರಮದಂತೆ ಗೋಚರವಾಗುತ್ತಾನೆ ಮತ್ತು ಕಾದಂಬರಿ ರಾಮಾನಾಯ್ಕನ ಆಂತರಿಕ ವಿಕಾಸದ ಹೆಜ್ಜೆಗುರುತುಗಳನ್ನು ಇಲ್ಲಿಂದಲೇ ದಾಖಲಿಸುತ್ತದೆ, ಸುಪ್ತವಾಗಿ.

ಆದರೆ ನಿರ್ಮಲೆ ಕಾದಂಬರಿಯ ಉದ್ದಕ್ಕೂ ತರ್ಕಾತೀತವೆನಿಸುವ ನಡೆಯನ್ನೇ ತೋರುತ್ತಾಳೆ. ನಿರ್ಮಲೆಯ ಒಂದು ದುಡುಕಿನದ್ದಾಗಿಯೇ ಕಾಣುವ ನಿರ್ಧಾರ ಕೃಷ್ಣನ ಮತ್ತು ಅವನ ತಾಯಿಯ ಬದುಕನ್ನು ಗಣೇಶ ಹೆಗಡೆಯ ಬದುಕಿನೊಂದಿಗೇ ದುರಂತಕ್ಕೆ ತಳ್ಳುತ್ತದೆ. ಇಷ್ಟೆಲ್ಲ ಆದ ಮೇಲೂ ನಿರ್ಮಲೆ ಮತ್ತೆ ಊರಿಗೇ ಬರುವುದು ವಿಚಿತ್ರ ಎನಿಸುತ್ತದೆ. ಆದರೆ ಕತೆಯ ದೃಷ್ಟಿಯಿಂದ ಅವಳ ಪುನರಾಗಮನ ಅನಿವಾರ್ಯ. ಮನೋಭ್ರಾಂತಿಗೆ ಒಳಗಾದ ಅಪ್ಪ 'ನೀನು ಬೆಳ್ಳಿ' ಎಂದದ್ದೇ ಅದನ್ನು ಒಪ್ಪಿಕೊಳ್ಳುವ ಅವಳು ಕೃಷ್ಣನ ತಾಯಿ ದೇವಿಯೊಂದಿಗೇ ನೆಲೆಸುತ್ತಾಳೆ. ಅಂದರೆ ಆಗಲೂ ಅವಳು ಕೃಷ್ಣನ ಕುರಿತು ತಾನು ತನ್ನಷ್ಟಕ್ಕೇ ಕಟ್ಟಿಕೊಂಡ ಒಂದು ಭ್ರಾಂತಿಯಿಂದ ಮುಕ್ತಳಾಗುವುದಿಲ್ಲ. ಮುಕ್ತಿ ಸಿಗದಂತೆ ಸ್ವತಃ ಅವಳೇ ಇದ್ದಳು ಮತ್ತು ಹಾಗಿರು ಎಂದು ಅವಳ ಸನಾತನಿ ಅಪ್ಪ ನೀಡಿದ ನಿರ್ದೇಶನವನ್ನು ಪ್ರಶ್ನಿಸದೇ ಒಪ್ಪಿಕೊಂಡು ಬಿಡುವುದಕ್ಕೆ ಅದೇ ಅವಳನ್ನು ಪ್ರೇರೇಪಿಸಿತು ಎಂದು ನಾವು ತಿಳಿಯಬೇಕಾಗುತ್ತದೆ. ಅದೇ ರೀತಿ ಗಣೇಶ ಹೆಗಡೆ ಹಾಗಿರುವುದೇ ಸರಿ ಎಂದು ಅವಳನ್ನೂ ಸೇರಿ ಊರವರೆಲ್ಲ ತಿಳಿದುಕೊಂಡಂತೆ ವರ್ತಿಸುತ್ತಾರೆ. ಇದು ಅವಳಲ್ಲಿ ಅದುವರೆಗೆ ಕಾಣಬರುವ ಕ್ರಾಂತಿಕಾರಕ ನಿಲುವನ್ನು ಪೇಲವಗೊಳಿಸುತ್ತದೆ. ಅವಳು ಬೆಳ್ಳಿಯಾಗಿ ಶೂದ್ರರ ಕೇರಿಯಲ್ಲಿ ನೆಲೆಯಾಗುವುದಾಗಲೀ, ಮತ್ತೆ ನಿರ್ಮಲೆಯಾಗಿ ಬ್ರಾಹ್ಮಣರ ಕೇರಿಗೆ ಶೂದ್ರಳ ಸಹಿತವಾಗಿ ಬಂದು ನೆಲೆ ನಿಲ್ಲುವುದಾಗಲೀ ಅಂತಹುದಕ್ಕೆ ವಿರೋಧವಿದೆ ಎಂಬ ಕಾರಣಕ್ಕೇ (ಕೊಟ್ಟ) ಮಾಡಿದ ನಡೆ ಎನಿಸುತ್ತದೆಯೇ ಹೊರತು ಅಂಥ ನಿರ್ಧಾರಗಳ ಹಿಂದೆ ನಿರ್ಮಲೆಯ ಪ್ರಜ್ಞಾಪೂರ್ವಕ ಸಿದ್ಧಾಂತ ಒಂದಿದೆ ಅನಿಸುವುದೇ ಇಲ್ಲ. ಇದ್ದಿದ್ದರೆ ಯಾಕೆ ಅವಳು ಅದೇ ಕ್ರಿಯೆಯನ್ನು ಗಣೇಶ ಹೆಗಡೆ ಸಾಯುವ ಮೊದಲೇ ಮಾಡುವುದಿಲ್ಲ ಎಂಬ ಪ್ರಶ್ನೆಯೂ

ಇದೆ. ಸರಳ ಉತ್ತರ ತಂದೆಯ ಕೈಯಲ್ಲಿದ್ದ ಬೆಣ್ಣೆ ಹೂವಿನ ಎಸಳು ಅವಳನ್ನು ಕ್ಷಮಿಸಿದ್ದರ ಪ್ರತೀಕವಾಗಿರುವುದರಿಂದ ಅವಳಿಗೆ ಆ ಧೈರ್ಯ ಬಂತು ಎಂಬುದಾದರೂ ಆಕೆ ಅತ್ತ ಸನಾತನಿಯೂ ಅಲ್ಲದ ಇತ್ತ ವೈಚಾರಿಕ ಸ್ಪರ್ಶವೂ ಇಲ್ಲದ ಪಾತ್ರವಾಗಿಯೆ ಉಳಿಯುತ್ತಾಳೆ. ಮುಂದೆಲ್ಲೋ ಅವಳ ಮತ್ತು ಅವಳ ತಂದೆಯ ಭ್ರಮೆಗಳು ಒಟ್ಟಿಗೇ ಹರಿದಂತೆ ಕಂಡರೂ ಅದಕ್ಕೂ ತಾರ್ಕಿಕ ನೆಲೆ ಇಲ್ಲ. ರಾಜೀವ ಗಾಯತೊಂಡೆಯಿಂದ ನಿರ್ಮಲೆಗೆ ಅದು ಬಂತೆ? ಗಣೇಶ ಹೆಗಡೆಗೆ ಎಲ್ಲಿಂದ ಬಂತು ಎನ್ನುವುದಕ್ಕೆ ಉತ್ತರವಿಲ್ಲ. ಈ ಎಲ್ಲ ಕಾರಣಗಳಿಂದ ಅವಳ ಇಡೀ ವ್ಯಕ್ತಿತ್ವವನ್ನು ಗ್ರಹಿಸಿದ ಬಳಿಕವಂತೂ ಅವಳ ಪ್ರೇಮ ಮತ್ತು ಅನಂತರದ ಎಲ್ಲ ನಡೆಗಳು ಕಾಣಸಬಹುದಾಗಿದ್ದ ಕ್ರಾಂತಿಕಾರಕತೆಯ ವಿಚಾರದಲ್ಲಿ ಸೋಲುತ್ತದೆ. ಹಾಕಿದ್ದೂ ಈ ಕಾದಂಬರಿ ಕೇವಲ ಒಂದು ಸಾಮಾಜಿಕ ಕ್ರಾಂತಿ ಅಥವಾ ಪರಿವರ್ತನೆಯ ದಾಖಲೆಯಾಗದೆ ತನ್ನ ಸಂದರ್ಭ ಮತ್ತು ಪರಿಸರದಲ್ಲಿ ಸಾಧ್ಯವಿರಬಹುದಾದ ಅನನ್ಯ ಸ್ವಾಭಾವಿಕತೆಯನ್ನು ಪಡೆದುಕೊಂಡು ಕಲಾಕೃತಿಯಾಗುವುದಕ್ಕೆ ಕಾರಣವಾದ ಸಂಗತಿಗಳು ಇಂಥವೇ ಆಗಿವೆ! ನಿರ್ಮಲೆಯ ನಡೆಯನ್ನು ನಮ್ಮ ನಿರೀಕ್ಷೆಗಳ ಮಾನದಂಡಗಳಿಂದ ನಿರ್ದೇಶಿಸದೆ ನೋಡಿದಾಗ ಇದು ನಮಗೆ ಗೋಚರವಾಗದಿರದು.

ಕಾದಂಬರಿಯಲ್ಲಿ ತುಂಬ ಇಷ್ಟವಾಗುವುದು ಖಾಸಿಂ ಸಾಬಿಯ ಕತೆ. ತೇಜಸ್ವಿಯವರ, ಕುವೆಂಪುರವರ ಕಾದಂಬರಿಯೊಂದರ ಪಾತ್ರ ಧುತ್ತನೆ ಇಲ್ಲಿ ಎದುರಾದಂತೆ ಅನಿಸಿದರೆ ಅಚ್ಚರಿಯಿಲ್ಲ. ಕಾದಂಬರಿಯ ಕತೆಗೆ ಒಂದು ಓಟ ಮತ್ತು ಲಾಲಿತ್ಯ ಒದಗುವುದೇ ಈ ಪಾತ್ರ ಬಂದ ನಂತರ. ಅಲ್ಲಿಯ ತನಕ ಕಾದಂಬರಿಯ ಕತೆ ತೊಡಗುವುದು ತೀರ ನಿಧಾನ ಅನಿಸುತ್ತಿರುತ್ತದೆ. ಊರಿನ ವಿವರಗಳು, ಜಾತ್ರೆಯ ನಡಾವಳಿಯ ವಿವರಗಳು, ಅಲ್ಲಿನ ಮಂದಿಯ ಕುರಿತಾದ ವಿವರಗಳು ಕತೆಯ ನಿರೀಕ್ಷೆಯಲ್ಲಿರುವ ಓದುಗರಿಗೆ ಕೊಂಚ ಭಾರ ಅನಿಸಿದರೆ ಅಚ್ಚರಿಯಿಲ್ಲ. ಯಾಕೆಂದರೆ ಕತೆಯ ಒಂದು ನಡೆ, ಗೊತ್ತು, ಗುರಿಗಳ ಹೊಳಹು ಕೂಡಾ ಅಲ್ಲಿಯ ತನಕ ಸಿಗುವುದಿಲ್ಲವಾಗಿ. ಅಷ್ಟು ಹೊತ್ತಿಗೆ ಓದುಗನನ್ನು ಮುಂದಿನ ಓದಿಗೆ ಹಿಡಿದಿಟ್ಟುಕೊಳ್ಳಲು ಬೇಕಾದ ಅಂಶಗಳ ಕೊರತೆ ಕಾಣಿಸುತ್ತದೆ. ಆದರೆ ಸಾಬಿಯ ಪ್ರವರಗಳೆಲ್ಲ ಕತೆಯ ಮೂಲ ಎಳೆಗೆ ಹೊರಗಿನವಾಗಿ ನಿಂತರೂ ಕಾದಂಬರಿಯನ್ನು ಆಪ್ತವಾಗಿಸಿಬಿಡುವ ಕಸು ಹೊಂದಿದೆ.

ರಾಮಾನಾಯ್ಕ ಊರ ಬ್ರಾಹ್ಮಣರಿಗೆ ಸೆಡ್ಡು ಹೊಡೆದು ನಿಲ್ಲುವ ನಿರ್ಧಾರಕ್ಕೆ ಬರಲು ಸಹ ರಾಜೀವ ಗಾಯತೊಂಡೆ, ಕ್ರೈಸ್ತ ಪಾದರಿಗಳ ಪರೋಕ್ಷ ಬೆಂಬಲವೇ ಕಾರಣವೆನಿಸಿದರೂ ಅಂಥ ಒಂದು ನಡೆಗೆ ಬೇಕಾದ ಎಲ್ಲ ಮೂಲದ್ರವ್ಯವೂ ರಾಮಾನಾಯ್ಕನಲ್ಲಿತ್ತು ಮತ್ತು ಅವನ ಪರಿಸರದಿಂದಲೇ ಅವನದನ್ನು ಪಡೆದುಕೊಂಡಿದ್ದ ಎಂಬುದನ್ನು ಕಾದಂಬರಿ ಅದ್ಭುತವಾಗಿ ಚಿತ್ರಿಸಿದೆ. ನಿಜವಾದ ಕತೆ ತೊಡಗುವುದು ಇಲ್ಲಿಂದಲೇ ಎನ್ನಬಹುದೇನೋ.

ಅಷ್ಟೇ ಗಮನ ಸೆಳೆಯುವ ಇನ್ನೊಂದು ಅಂಶವೂ ಈ ಕಾದಂಬರಿಯ ಹೆಚ್ಚುಗಾರಿಕೆ ಎನ್ನಬೇಕು. ಅದು ಅಶೋಕರು ಇಡೀ ಕಾದಂಬರಿಯಲ್ಲಿ ಕಾಲಮಾನವನ್ನು, ವಯೋಮಾನ ವನ್ನು (ಸ್ಥಳ, ಸನ್ನಿವೇಶ ಅಥವಾ ಪರಿಸರ) ಬಳಸಿಕೊಳ್ಳುವ ರೀತಿ. ಇಲ್ಲಿ ಕೆಲವೊಂದು

ಘಟನೆಗಳು ಇಬ್ಬನಿ ಮುಸುಕಿದ ಮುಂಜಾನೆಯ ಮಬ್ಬಿನಲ್ಲಿ ನಡೆಯುತ್ತವೆ ಇನ್ನು ಕೆಲವು ಬಿಸಿಲೇರಿದ ಪೂರ್ವಾಹ್ನ. ಮತ್ತೆ ಕೆಲವು ಮಟಮಟ ಮಧ್ಯಾಹ್ನದ ರಣರಣ ಬಿಸಿಲಿನಲ್ಲಿ, ಇಳಿಹೊತ್ತಿನಲ್ಲಿ ಮುಸ್ಸಂಜೆಗೂ ಮುನ್ನ ಕೆಲವು ನಡೆದರೆ ತೀರ ಮುಸ್ಸಂಜೆಯ ಚಿತ್ರಗಳು ಇನ್ನು ಕೆಲವು. ರಾತ್ರಿ ಕವಿಯುವ ಮುನ್ನ ಇನ್ನು ಕೆಲವು ನಡುರಾತ್ರಿಯಲ್ಲಿ ನಡೆಯುವ ಸಂಗತಿಗಳು ಉಳಿದ ಒಂದಷ್ಟು. ಅಷ್ಟೇ ಯಾಕೆ, ಅಶೋಕರು ದಿನದ ಯಾವ ಜಾವವನ್ನೂ ಬಿಡದಂತೆ ನಟ್ಟಿರುಳು ಕಾಡಿನ ಗಾಢಾಂಧಕಾರದಲ್ಲೂ ಕುಳ್ಳು ಗಡ್ಡದ ಭೂತಗಳನ್ನು ತಂದಿಡುತ್ತಾರೆ! ದಿನದ ವಿಭಿನ್ನ ವೇಳೆಗಳಲ್ಲಿ ಮನುಷ್ಯನ ಮನಸ್ಸು, ಭಾವನೆ ವಿಭಿನ್ನವಾಗಿರುವುದರ ಸೂಕ್ಷ್ಮದೊಂದಿಗೇ ಇಲ್ಲಿನ ಪಾತ್ರಗಳು, ಸನ್ನಿವೇಶ ನಮ್ಮ ಮನಸ್ಸಿನಲ್ಲಿ ಊರಿ ನಿಲ್ಲುತ್ತವೆ. ಈ ಸಣ್ಣಪುಟ್ಟ ವಿವರಗಳನ್ನೇ ನಮ್ಮ ಚಿತ್ತದಲ್ಲಿ ಉತ್ತರ ಕರ್ನಾಟಕದ ಹಳ್ಳಿಯೊಂದರ ಸಮಗ್ರ ಚಿತ್ರವನ್ನು ಅಶೋಕರು ಬಿಡಿಸುತ್ತಾರೆ, ನಿರುದ್ದಿಶ್ಯ ಎನಿಸುವಂತೆ!

ಇದರೊಂದಿಗೇ, ಇಲ್ಲಿ ಪುಟಾಣಿಗಳಿಂದ ಹಿಡಿದು ಮೃತ್ಯುಶಯ್ಯೆಯಲ್ಲಿರುವ ವೃದ್ಧರ ವರೆಗೆ ಎಲ್ಲರೂ ಒಳಗೊಂಡು ಕಥಾನಕವನ್ನು ಕೊಂಡೊಯ್ಯುವ ಪರಿ ಕೂಡ ಅನನ್ಯವಾಗಿ ಪಡಿಮೂಡಿದೆ. ಅದೇ ರೀತಿ, ಈ ಕಥಾನಕದ ವಿದ್ಯಮಾನಗಳು ನಡೆಯುವ ಸ್ಥಳ, ಸನ್ನಿವೇಶಗಳೂ ಅಷ್ಟೇ ವಿಶಿಷ್ಟ ಮತ್ತು ಸಮಗ್ರ. ಮನೆಯ ಅಡುಗೆ ಕೋಣೆ, ಮಲಗುವ ಕೋಣೆ, ಪಡಸಾಲೆ, ಉಪ್ಪರಿಗೆ, ದನದ ಕೊಟ್ಟಿಗೆ, ಅಂಗಳ, ದೊಡ್ಡ ದೊಡ್ಡ ಮರದ ಬೇರುಗಳು ಎದ್ದು ನಿಂತ ಕಾಲುದಾರಿ, ಗದ್ದೆ ಬಯಲು, ಕೆರೆಯ ದಂಡೆ, ತೋಟ, ಹಿತ್ತಿಲು, ಕಾಡಿನ ಸೆರಗು, ದಟ್ಟ ಕಾಡಿನ ಮರಗಳು, ಮಠದ ವಿವಿಧ ಪ್ರಾಂಗಣಗಳು, ಓಡುತ್ತಿರುವ ಕಾರು, ನಿಂತು ಬಿಟ್ಟ ಒಂದು ಜೀಪು ಎಲ್ಲವೂ ಇಲ್ಲಿನ ಕಥಾನಕದ ಅನಿವಾರ್ಯ ಮತ್ತು ಸನ್ನಿವೇಶದಿಂದ ಪ್ರತ್ಯೇಕಿಸಲಾರದ ಪಾತ್ರಗಳೇ ಆಗಿಬಿಡುವುದನ್ನು ಅದ್ಭುತ ಎನಿಸುವಂತೆ ಚಿತ್ರಿಸಿದ್ದಾರೆ. ಎಲ್ಲವೂ ಸಹಜ ಸ್ವಾಭಾವಿಕ ಸೌಂದರ್ಯದೊಂದಿಗೆ ಕಣ್ಮುಂದೆ ಬರುವಂತೆ ಸೂಕ್ಷ್ಮ ವಿವರಗಳಲ್ಲಿ ಕಟ್ಟಿಕೊಟ್ಟಿರುವುದು ಮನಸೆಳೆಯುತ್ತದೆ.

ಕೃತಿಕಾರನ ಪ್ರಜ್ಞಾಪೂರ್ವಕವಾದ ಈ ಸೂಕ್ಷ್ಮ ಸಂಯೋಜನೆ ಸಂತುಲಿತ ಕಥಾನಕಕ್ಕೆ ಪರೋಕ್ಷವಾಗಿ ನೀಡುವ ಕಾಣ್ಕೆಯ ಕುರಿತು ಯೋಚಿಸಬೇಕೆನಿಸುತ್ತದೆ. ಅಶೋಕರು ತಮ್ಮ ಕಾದಂಬರಿಯಲ್ಲಿ ಇಂಥ ಅನೇಕ ಪ್ರಯೋಗಗಳನ್ನು ಮಾಡುತ್ತಾರೆ. ಅದು ಮಂಜ ಮತ್ತು ದೀಕ್ಷಿತರ ಪ್ರಸಂಗ ಇರಬಹುದು, ಮಠದ ಜೀಪಿನ ವ್ಯವಹಾರ ಇರಬಹುದು, ಖಾಸಿಂ ಸಾಬಿಯ ಡಾಲರ್ ವ್ಯವಹಾರವೇ ಇರಬಹುದು ಎಲ್ಲವೂ ಒಂದರೊಳಗೊಂದು ಸೇರಿಕೊಂಡಂತಿದ್ದೂ ಮುಖ್ಯ ಕಥಾನಕದ ಪೋಷಣೆ ಮಾಡುವ ರೀತಿ ನಮ್ಮ ಸಾಹಿತ್ಯಾಭ್ಯಾಸಿಗಳು ಗಮನಿಸಬೇಕಾದ ಪ್ರಯೋಗ ಎಂಬುದಂತೂ ನಿಶ್ಚಯ.

ಅತ್ಯಂತ ನವಿರಾದ ನಿರೂಪಣೆಯಲ್ಲಿ ಆಪ್ತವಾಗುವ ಶ್ರೀಧರ ಕುಸುಮಾರ ಸಂಬಂಧ ಕಾದಂಬರಿಯ ಆಶಯದ ದೃಷ್ಟಿಯಿಂದ ಬಹಳ ಮುಖ್ಯವಾದ ವಿವರವಾಗಿ ನಿಲ್ಲುತ್ತದೆ. ಶ್ರೀಧರನಿಗೆ ಕಾಡಿನಲ್ಲಿ ರಾತ್ರಿ ಹೊತ್ತಿನಲ್ಲಿ ಕನಸೋ ಭ್ರಮೆಯೋ ತಿಳಿಯದ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವ ಬಿಳೀ ಗಡ್ಡದ ಕುಳ್ಳ ಭೂತಗಳು, ಅವು ಆಡಿಕೊಳ್ಳುವ ಮಾತುಗಳು ಅಶೋಕರ

ಕುಶಲ ತಂತ್ರಗಾರಿಕೆಯನ್ನು ಕಾಣಿಸುವುದರೊಂದಿಗೇ ಕಥನಗಾರಿಕೆಗೆ ಒಂದು ಮೆರುಗನ್ನು ತಂದಿವೆ. 'ಗ್ರಾಮಾಯಣ'ದ ಪಡದಯ್ಯನನ್ನು ನೆನಪಿಸುವ ಮಠದ ಸ್ವಾಮಿ, ಮತ್ತವನ ಪಟಾಲಂ, ವದಂತಿಗಳಿಂದ ದಂತಕತೆಯಾದಂತಿರುವ ಮಂಜ, ವಿಶಿಷ್ಟ ಸಂದರ್ಭದಲ್ಲಿ ಕಾಣಿಸಿಕೊಂಡು 'ಕೆಂಪು ನೀರು... ಭೋರ್ಗರೆತ...ಕೆಂಪು ನೀರು' ಎನ್ನುವ ಗಣೇಶ ಹೆಗಡೆ, ರೂಪಕದಂತಿರುವ ಕೋರ್ಟ್ ತಿಮ್ಮಪ್ಪ ಮತ್ತು ವಿಪರ್ಯಾಸದಂತಿರುವ ಅವನ ನ್ಯಾಯಾಲಯದ ನ್ಯಾಯದ ಕುರಿತ ನಿಷ್ಠೆ, ಪರೀಕ್ಷೆಯ ಭೀತಿಯ ಸುಬ್ರಾಯ ಹೆಗಡೆಯ ಮುದಿ ತಂದೆ, ಕಾದಂಬರಿಯ ಕೇಂದ್ರ ಬಿಂದುವೇ ಆಗಿರುವ ಅಶ್ವಮೇಧದ ಪರಿಕಲ್ಪನೆ, ಕಾದಂಬರಿಯ ಉದ್ದಕ್ಕೂ ಇಂಥ ಪ್ರತಿಮೆಗಳನ್ನು ಅತ್ಯಂತ ವಿವೇಚನಾಯುಕ್ತವಾಗಿ ಅಶೋಕ ಬಳಸುತ್ತಾರೆ. ಕಾದಂಬರಿಗೆ ತನ್ನ ಕೇಂದ್ರ ಕಾಳಜಿಯನ್ನು ಮೀರಿದ ವಿಭಿನ್ನ ಆಯಾಮಗಳನ್ನು ಇಂಥ ಸೂಕ್ಷ್ಮ ವಿವರಗಳು ಅಲ್ಲಲ್ಲಿ ದೊರಕಿಸಿಕೊಡುತ್ತ ಕಾದಂಬರಿ ತನ್ನ ಒಡಲಲ್ಲಿ ಹೊಸ ಒಳನೋಟಗಳನ್ನು ಒಳಗೊಳ್ಳುವುದು ಗಮನಾರ್ಹವಾಗಿದೆ. ಇದು ಇಡೀ ಕಾದಂಬರಿಗೆ ಒಂದು ಗುರುತ್ವವನ್ನೂ ಆಕರ್ಷಣೆಯನ್ನೂ ತಂದಿವೆ. ಹಾಗೆಯೇ ಅಮೂರರು ಹೇಳುವ ತನ್ನದೆ ಆದ ವಿಶ್ವಸನೀಯ ಜಗತ್ತನ್ನು ಸೃಷ್ಟಿಸುವ ಕೆಲಸಕ್ಕೂ ಇದೆಲ್ಲ ಪೂರಕವಾಗಿದೆ.

✤ ನರೇಂದ್ರ ಪೈ : 'ಬಿಂದಿಯಾ', ಸೀಕ್ವೆರಾ ಲೇನ್, ಮಾರಿಗುಡಿ ಕ್ರಾಸ್ ರೋಡ್
ಉರ್ವ ಮಾರ್ಕೆಟ್, ಮಂಗಳೂರು-೫೭೫ ೦೦೬

✤

'ಅಶ್ವಮೇಧ' : ಆಧುನಿಕತೆಯೊಂದಿಗೆ ಮುಖಾಮುಖಿ

ಶಿವರಾಮ ಕಾರಗಡಿ

ಸಮಾಜ, ಸಂಸ್ಕೃತಿಯಲ್ಲಿ ಉಂಟಾಗುವ ಮುಖ್ಯ ಬದಲಾವಣೆಯನ್ನು ಗುರುತಿಸುವ ಕಾರ್ಯದಲ್ಲಿ ಕಾದಂಬರಿ ಹುಟ್ಟುತ್ತದೆ. ವೈವಿಧ್ಯಮಯ ಜನಜೀವನ, ಧರ್ಮ ಮತ್ತು ರಾಜಕೀಯದ ಹದವಾದ ಬೆರೆತವನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನಾವು ಕಾಣುತ್ತ ಬಂದಿದ್ದೇವೆ. ನಮ್ಮ ಕಾದಂಬರಿ ಪರಂಪರೆಗೆ ದೀರ್ಘವಾದ ಇತಿಹಾಸವಿದ್ದು, ಚಲನಶೀಲತೆಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಸಾಹಿತ್ಯ ಇಂದಿಗೂ ಉಳಿದಿದೆ. ನಮ್ಮ ಸುತ್ತಣ ಪರಿಸರದ ಮರುವ್ಯಾಖ್ಯಾನ, ಎಚ್ಚರಿಸುವ ಹೊಸತನ ನಿರಂತರವಾಗಿ ನಡೆದಾಗಲೇ ಸಾಹಿತ್ಯದ ರುಚಿ ಹರಡಲು ಸಾಧ್ಯವಾಗುತ್ತದೆ. ವಾಸ್ತವವಾದಿ ಕಾದಂಬರಿ ಪ್ರಕಾರ ಮುಂಚೂಣಿಯಲ್ಲಿರುವ ಈ ಹೊತ್ತಿನಲ್ಲಿ ರಚಿತವಾಗುವ ಸಾಹಿತ್ಯವೂ ಹಾಗಿರಬೇಕೆಂದು ಬಯಸುತ್ತೇವೆ. ಪರಿಸರದ ಅಚ್ಚುಕಟ್ಟುತನದಿಂದ ಹುಟ್ಟುವ ಕಾದಂಬರಿ ಆ ವ್ಯವಸ್ಥೆಯನ್ನು ಮೀರಿ ತನ್ನನ್ನು ಗುರುತಿಸಿಕೊಳ್ಳುತ್ತದೆ. ಉದಾ : ಶಿವರಾಮ ಕಾರಂತರ 'ಚೋಮನ ದುಡಿ', ದೇವನೂರು ಮಹಾದೇವರ 'ಒಡಲಾಳ'. ಆದರೆ ಅಶೋಕ ಹೆಗಡೆಯವರ 'ಅಶ್ವಮೇಧ'ದಲ್ಲಿಯ ಚಿಂತನೆ ವ್ಯವಸ್ಥೆಯನ್ನು ಮೀರಿ ಬೆಳೆಯದೆ ಒಟ್ಟು ಸಾಮಾಜಿಕ ವ್ಯವಸ್ಥೆಯ ಆಳದಲ್ಲಿಯೇ ಸುತ್ತಾಡಿ ಅತಿರಂಜಕತೆಯಿಂದ ಕೊನೆಯಾಗುತ್ತದೆ.

‘ಒಂದು ತಗಡಿನ ಚೂರು’, ‘ಒಳ್ಳೆಯವನು’, ಕಥಾಸಂಕಲನದ ಮೂಲಕ ಹೊಸ ಕಥೆಗಳನ್ನು ಹೇಳಿದ ಅಶೋಕ ಹೆಗಡೆ ‘ಅಶ್ವಮೇಧ’ ಕಾದಂಬರಿ ಮೂಲಕ ನವೀನ ಹೆಜ್ಜೆಯೊಂದನ್ನು ಇರಿಸಿದ್ದಾರೆ. ಕಥೆಯ ಪರಿಸರವೇ ಮುಂದುವರಿದು ಕಾದಂಬರಿ ಆಗಿದೆಯೋ ಎಂಬುದಕ್ಕೆ ಅನೇಕ ನಿದರ್ಶನಗಳು ಸಿಗುತ್ತವೆ. ‘ಅಘನಾಶಿನಿ’ಯ ರೂಪಕ ಈ ಕಥಾನಕದ ಉದ್ದಕ್ಕೂ ತುಂಬಿಕೊಂಡು ಬಲವಾದ ಹೆಣಿಗೆಯನ್ನು ನಮಗೇ ಬೀಸಿದ ಅನುಭವವಾಗುತ್ತದೆ. ವಲ್ಲಿಗದ್ದೆ ಎಂಬ ಪುಟ್ಟ ಊರಿನ ‘ಅಘನಾಶಿನಿ’ ಯಾವುದೇ ಪರಿಸರದ ರೂಪಕವಾಗಿಯೂ ನೆಲೆನಿಲ್ಲುವ ಗುಣ ಹೊಂದಿದೆ. ಕಾದಂಬರಿಯ ವಿಶೇಷತೆಗಳೆಲ್ಲವೂ ಇಂತಹ ಪ್ರಕೃತಿ ಸಂಬಂಧಿಯಾಗಿಯೇ ಇರುವುದು ವಿಚಾರಾರ್ಹ. ಸರಳ ಸಾಧಾರಣವಾದ ‘ವಲ್ಲಿಗದ್ದೆ’ ಬೆಳೆದ ರೀತಿ ಸಮೃದ್ಧವಾಗಿದೆ. ಆದರೆ ಸಮೃದ್ಧತೆಯೂ ಕಾದಂಬರಿಕಾರನಿಗೆ ದಿಢೀರ್ ಬದಲಾವಣೆಗೆ ಕಾರಣವಾಗುತ್ತದೆ ಎನ್ನಬಹುದು. ಆಧುನಿಕತೆಯನ್ನು ಕಾಣದ ಊರಿಗೆ ‘ಮುಂದಿನ ಎಲ್ಲವೂ ಹೊಸತೆ’ ಎಂಬಷ್ಟು ವೈವಿಧ್ಯತೆ ಇಲ್ಲಿದೆ. ಹೀಗಾಗಿ ಉತ್ತರ ಕನ್ನಡದಿಂದ ಬಂದ ಬಹುತೇಕ ಲೇಖಕರು ಊರಿನ ಮೂಲಕ ಆಧುನಿಕತೆಯನ್ನು ಬರಮಾಡಿಕೊಂಡಿರುವುದನ್ನು ಕಾಣಬಹುದು. ಚಿತ್ತಾಲರ ‘ಹನೇಹಳ್ಳಿ’, ಜಯಂತ ಕಾಯ್ಕಿಣಿಯವರ ಗೋಕರ್ಣ, ಕುಮಟಾ ಇತ್ಯಾದಿ. ವಿಶೇಷವೆಂದರೆ ಅಶೋಕರಿಗೆ ‘ಊರು’ ಒಂದು ರೂಪಕ. ಕಥೆಯ ಆರಂಭವೇ ಅದನ್ನು ಸೂಚಿಸುತ್ತದೆ. “....ಬ್ರಿಟಿಷರು ಮಧ್ಯರಾತ್ರಿ ತಮ್ಮ ಹಡಗು ಹತ್ತಿ ಹಿಂದೆ ಹಾರುವ ಧ್ವಜವನ್ನು ಅದರಷ್ಟಕ್ಕೆ ಬಿಟ್ಟು ದೇಶವನ್ನು ಬಿಟ್ಟುಹೋದ ದಿನ ಯಾವ ಸ್ಥಿತಿಯಲ್ಲಿ ಇತ್ತೋ ಅದೇ ಸ್ಥಿತಿಯಲ್ಲಿ ಇಂದಿಗೂ ಇತ್ತು” (ಪು. ೧೭) ಈ ಮಾತು ಭಾರತದ ಯಾವ ಊರೂ ಆಗಬಹುದು. ಹೀಗಾಗಿ ಅಶೋಕರ ದೃಷ್ಟಿ ಸಂಪೂರ್ಣವಾಗಿ ಬದಲಾವಣೆಯ ಕಡೆಗಿದ್ದರೂ ‘ಆಧುನಿಕತೆಯನ್ನು ಬರಮಾಡಿಕೊಳ್ಳುವಷ್ಟು ಪಕ್ವವಾಗಿಲ್ಲ’ ಅನ್ನಿಸುತ್ತದೆ.

ರಾಜೀವ ಗಾಯತೊಂಡೆ ವಲ್ಲಿಗದ್ದೆಯಲ್ಲಿ ಜಮೀನು ಕೊಂಡುಕೊಳ್ಳುವುದರ ಮೂಲಕ ಆಗುವ ಬದಲಾವಣೆ, ಊರನ್ನು ಎಚ್ಚರಿಕೆಗೆ ದೂಡುತ್ತದೆ. ರಾಜೀವನ ನಿಗೂಢ ಜೀವನ, ಅವನ್ಯಾರು? ಇತ್ಯಾದಿ ವಿವರಣೆ ಕಾದಂಬರಿಯಲ್ಲಿ ಇಲ್ಲ. ಇಂತಹ ಸಂದರ್ಭದಲ್ಲಿಯೂ ಊರಿನ ಎಲ್ಲರೂ ಅವನ ಬಗ್ಗೆ ಕಾಣುವ ವಿಚಿತ್ರ ದೃಷ್ಟಿಗೆ ಆಕ್ಷೇಪಾರ್ಹತೆ ಏನೂ ಇಲ್ಲ. ಈ ನಡುವೆ ತೋಟದ ಬೇಲಿ ಹಾಕುವ ವಿಚಾರ, ಸುಬ್ರಾಯ ಹೆಗಡೆಯವರ ದರ್ಪ, ಭುವನೇಶ್ವರಿ ದೇವಾಲಯ, ಮೇಲ್ವರ್ಗದವರ ಮಠ, ಎಲ್ಲವೂ ರಾಜೀವನೊಂದಿಗೆ ಬೆಳೆಯುತ್ತವೆ. ಆದರೆ ರಾಜೀವ ಕಾದಂಬರಿಯುದ್ದಕ್ಕೂ ನಾಯಕನಾಗುವುದಿಲ್ಲ. ಒಮ್ಮೊಮ್ಮೆ ಉಡಾಳನಾಗಿ (ಸುಬ್ರಾಯ ಹೆಗಡೆಗೆ ಏಕಾಏಕಿ ಹೊಡೆದದ್ದು), ವಿಚಾರವಾದಿಯಾಗಿ (ಶಾಲೆ ಕಟ್ಟಿಸುವಾಗ) ಕಂಡರೂ ಅಂಜುಬುರುಕನಂತೆಯೇ ಇದ್ದುಬಿಡುತ್ತಾನೆ. ಸಮಾಜದೊಂದಿಗೆ ಬೆರೆಯದೇ ಬಾಳುವ ಆತನ ಮನಃಸ್ಥಿತಿ ವಾಸ್ತವಕ್ಕೆ ಭಿನ್ನವಾಗಿ ಕಂಡು, ವಿಚಾರ ಸರಣಿಗಳು ನವ್ಯ ಕಾದಂಬರಿಕಾರರ ಪರಿಭಾಷೆಯನ್ನು ಪರಿಚಯಿಸುತ್ತವೆ. ‘ಮುಂದೆ ಹೋಗದ ವ್ಯಾಕುಲತೆ’ ಅವನ ವ್ಯಕ್ತಿತ್ವದಲ್ಲಿದೆ.

ವಲ್ಲಿಗದ್ದೆ ಬ್ರಾಹ್ಮಣಕೇರಿಯ ಗಣೇಶ ಹೆಗಡೆ ಮತ್ತು ಅವರ ಮಗಳು ನಿರ್ಮಲ ಕಾದಂಬರಿಯ ಮುಖ್ಯ ಪಾತ್ರಗಳು. ಇವರ ಜೊತೆಗೆ ಮಠದ ವ್ಯವಸ್ಥೆ, ತೋಟದ ಪಾರುಪತ್ಯ,

ಹಾಗೂ ದೇವಿ, ಕೃಷ್ಣರ ಪಾತ್ರಗಳು ಹೆಚ್ಚು ವಿಚಾರಕ್ಕೆ ನಮ್ಮನ್ನು ದೂಡುತ್ತವೆ. ಇಲ್ಲಿನ ಯಾವ ಪಾತ್ರಗಳೂ ಹೆಚ್ಚು ಶಿಕ್ಷಣ ಪಡೆದವಲ್ಲ. ಬದುಕಿನ ನಾಗಾಲೋಟಕ್ಕೆ ಸೇರಿ ಹೋದವಲ್ಲ. 'ಅಘನಾಶಿನಿ'ಯಂತೆ ನಿತ್ಯ ಗಂಭೀರ. ಆದರೂ ನಿರ್ಮಲ-ಕೃಷ್ಣರಲ್ಲಿನ ಪ್ರೀತಿ 'ಮದುವೆ' ದಿನವೇ ಓಡಿಹೋಗಲು ಪ್ರಚೋದಿಸುತ್ತದೆ. ಅಲ್ಲಿಂದ ಬೆಂಗಳೂರಿನ ಜೆ.ಪಿ. ನಗರದ ಯಾವುದೋ ರೂಮಿನಲ್ಲಿ ಅವರು ಅನುಭವಿಸುವ ತಳಮಳ, ಅವಳ ನಗ್ನತೆ ಎಲ್ಲವೂ ಕಮರ್ಷಿಯಲ್ ಸಿನೆಮಾದ ಸರಕಿನಂತಿದೆ. ಮುಖ್ಯ ವಿಚಾರ– ಕೃಷ್ಣನ ಅಸಹಾಯಕತೆ "ಅಮ್ಮಾ ಅಮ್ಮಾ, ದಯವಿಟ್ಟು ನನ್ನ ಬಿಡಿ. ನಾನು ಹೇಳಬೇಕೆಂದರೆ ನಿಮ್ಮ ಪಾದದ ಧೂಳಿಗೂ ಸರಿ ಆದವನಲ್ಲ. ಯಾವ ಕೆಟ್ಟ ಗಳಿಗೆಯಲ್ಲಿ ಯಾವ ಬ್ರಹ್ಮರಾಕ್ಷಸ ಮರ ಇಳಿದು ನನ್ನ ಹೆಗಲುಗಳನ್ನು ಏರಿತೋ, ಯಾಕೆ ನಾನು ನಿಮ್ಮ ಹಿಂದೆ ನಡೆದೆನೋ... ಗೊತ್ತಿಲ್ಲ" (ಪು. ೪೯). ಕೃಷ್ಣನ ಪಾತ್ರಸೃಷ್ಟಿಯಲ್ಲಿ ಲೇಖಕರ ನಿಲುವು "ಕೃಷ್ಣ ಕೊನೆಯ ಬಾರಿ ಎನ್ನುವಂತೆ ನಿಂತು, ತಿರುಗಿ ಮನೆಯನ್ನು ನೋಡಿ ಮುಂದೆ ಅಡಿ ಇಟ್ಟ" (ಪು. ೫೦) ಎನ್ನುವ ಮೂಲಕ ಮತ್ತೊಂದೂ ಆತನನ್ನು ನೆನಪಿಸುವ ಪ್ರಯತ್ನ ಮಾಡಿಲ್ಲ. ನಿರ್ಮಲ ಮುಖ್ಯ ಪಾತ್ರವಾಗಿ ಬೆಳೆಯುತ್ತಾಳೆ. ಊರಿಗೆ ಮರಳಿ, ಹುಚ್ಚು ತಂದೆಯಿಂದ ದೂರವಾಗಿ ದೇವಿಯ ಮನೆಯಲ್ಲಿ 'ಬೆಳ್ಳಿ'ಯಾಗುತ್ತಾಳೆ. ರಾಜೀವನ ಮನೆಯಲ್ಲಿ ಕೆಲಸ ಮಾಡಿ ಬದುಕುತ್ತಾಳೆ. ದೇವಸ್ಥಾನದ ಉತ್ಸವ ಹಣ ಸಂಗ್ರಹಣೆ, ರಾಜೀವರ ವಿರೋಧ, ಮಠದ ವ್ಯವಸ್ಥೆ ಹೊಸದೇನನ್ನೂ ಹೇಳುವುದಿಲ್ಲ. ಈ ಸಂದರ್ಭದಲ್ಲಿ ರಾಮನಾಯ್ಕ (ಈಡಿಗ) ಬೆಳೆವ ರೀತಿಯನ್ನು ಹಾಗೂ ವ್ಯವಸ್ಥೆಯಲ್ಲಿ ಉಂಟಾಗುವ ಬದಲಾವಣೆಯನ್ನು ಸಮರ್ಥವಾಗಿ ಚಿತ್ರಿಸಿರುವುದನ್ನು ನೋಡಬಹುದು. ಅಲ್ಪ ಸ್ವಲ್ಪ ತೋಟ-ಗದ್ದೆ ಇದ್ದ ರಾಮನಾಯ್ಕ ಯಾರ ಮನೆಗೂ ಕೆಲಸದ ಆಳಾಗದೇ ಸ್ವಂತಿಕೆಯನ್ನು ಕಾಪಾಡಿಕೊಂಡಿದ್ದ. ಇದು ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾಗಿದ್ದರೂ ಆತನ ಎದುರು ಮೆತ್ತಗಿದ್ದರು. ರಾಜೀವರ ಜೊತೆ ಸೇರಿ 'ಇಂಗ್ಲಿಷ್' ಶಾಲೆ ಆರಂಭಿಸುವ ಯೋಜನೆ ಮೂಲಕ 'ಆಧುನಿಕತೆ'ಯ ಮೊದಲ ಸ್ಪರ್ಶ ಊರಿಗಾಗುತ್ತದೆ. ಕ್ರೈಸ್ತರ ಆಗಮನ ಊರಿಗೆ ಭಿನ್ನತೆಯನ್ನು ಉಂಟುಮಾಡಿ, ಕನ್ನಡ ಶಾಲೆಗಳಿಗಿಂತ ಇಂಗ್ಲಿಷ್ ಕಲಿತ ನಮ್ಮ ಮಕ್ಕಳು ಪಾದ್ರಿಗಳಂತೆ ಇಂಗ್ಲಿಷ್ ಮಾತಾಡುವುದನ್ನು ಕೇಳುವ ಹುಮ್ಮಸ್ಸಿನ ರಾಮನಾಯ್ಕನ ಬೆಳವಣಿಗೆ ಅತಿವಾಸ್ತವ ಎನ್ನಿಸುತ್ತದೆ.

ದೇವರ ಉತ್ಸವ ಹಿಂದೆ ಸರಿದು ಶಾಲೆ ಪ್ರಾಮುಖ್ಯತೆ ಪಡೆದುಕೊಂಡದ್ದು, ಶ್ರೀಧರ ಉನ್ನತ ಶಿಕ್ಷಣಕ್ಕೆ ದೆಹಲಿಗೆ ಹೋದದ್ದು ತೌಲನಿಕವಾಗಿ ನೋಡಬೇಕಾಗಿದೆ. ಒಂದು ವರ್ಗ ದೂರದ ಊರಲ್ಲಿ ವಿದ್ಯಾಭ್ಯಾಸ ಮಾಡುವ ಶಕ್ತಿ ಪಡೆದಿರುವಾಗ, ಸಾಮಾನ್ಯ ಜಾತಿಯ ಮಕ್ಕಳು ಈಗ ಇಂಗ್ಲಿಷ್ ಶಿಕ್ಷಣ ಪಡೆಯುವುದು. ಇವತ್ತಿನ ಶಿಕ್ಷಣ ಮಾಧ್ಯಮ ಕುರಿತಾದ ಚರ್ಚೆಗೆ ಇಲ್ಲಿ ಅವಕಾಶವಿದೆ. ಹೊಸ ಜ್ಞಾನಸಂಪರ್ಕ ಸಾಮಾನ್ಯ ಮಕ್ಕಳಿಗೂ ಸಿಗುವ ಕುರುಹು ಕೂಡ ಆಗಿದೆ. ಇಂತಹ ಸ್ಥಿತಿಯಲ್ಲಿ ರಾಜಕೀಯ ಪ್ರವೇಶಿಸಿ ರಾಮನಾಯ್ಕನನ್ನು ಬೆಳೆಸುವ ರೀತಿ ಕ್ಷುದ್ರತೆಯನ್ನು ಹೇಳುತ್ತದೆ. ಅಂದರೆ ಜಾತಿರಾಜಕಾರಣದ ಇನ್ನೊಂದು ಮುಖ ಇಲ್ಲಿ ತೆರೆದುಕೊಂಡಿರುವುದನ್ನು ನೋಡಬಹುದು. ಇಂತಹ ಜಾತಿಕೇಂದ್ರಿತ ವ್ಯಕ್ತಿತ್ವ ಬೆಳೆವಂತೆಲ್ಲ ಇನ್ನೊಂದು ಜಾತಿಯ ಜನರು ತಮ್ಮ ನಿರುಪಾದಿಕ ಸ್ಥಿತಿಯನ್ನು ಹೇಗೆ ನಿವೇದಿಸಿಕೊಳ್ಳುತ್ತಾರೆ

ಎಂಬುದನ್ನು ಕಾದಂಬರಿಕಾರರು ವಿವರಿಸುವುದಿಲ್ಲ. ಹೆಗಡೆಯವರಲ್ಲಿ ಉಂಟಾಗುವ ಯಾವ ಪರಿವರ್ತನೆಯೂ ಗತಕಾಲದ ಜಾಡ್ಯವೊಂದರ ನಿವಾರಣೆಯಂತೆಯೇ ಕಾಣಸಿ, ನಾಯ್ಕ ಸಮುದಾಯವಲ್ಲಿ ಉಂಟಾಗುವ ಪರಿವರ್ತನೆ ಲಾಭದಾಯಕ ವ್ಯವಸ್ಥೆಯೊಂದರ ಸೃಷ್ಟಿಗೆ ಕಾರಣವಾಗುವಂತೆ ಭಾಸವಾಗುತ್ತದೆ. ಕೆಲ ಸೂಕ್ಷ್ಮತೆಗಳನನ್ನು ವಿವರಿಸುವಲ್ಲಿ ಅಶೋಕರಿಗೆ ಅಷ್ಟು ಆಸಕ್ತಿಯಿಲ್ಲ.

''ಅಕ್ಷರ ಕಲಿಯುವವರ ಮುಖಾಂತರವೇ ಯುದ್ಧ ಗೆಲ್ಲುವ ಸಾಧ್ಯತೆಯ ಬಗೆಗೆ'' (ಪು. ೧೫೫) ರಾಜೀವ ಗಾಯತೊಂಡೆ ನೀಡುವ ವಿವರಣೆ ಶೂದ್ರ ಸಮುದಾಯಕ್ಕೆ ಆಶಾಕಿರಣದಂತಿವೆ. ಆದರೆ ನಾರುತ್ತಿರುವ ಮಠದ ವ್ಯವಸ್ಥೆ ಕುರಿತು ರಾಜೀವ ಏಕೆ ಮೌನ ಮುರಿಯುವುದಿಲ್ಲ ಎಂಬುದು ಚರ್ಚಾರ್ಹ. ಒಂದು ವ್ಯವಸ್ಥೆಯನ್ನು ಹಾಗೇ ಇಟ್ಟು ಮತ್ತೊಂದು ಬದಲಾವಣೆ ಮಾಡುವುದು ಏಕೆ? ಬದಲಾವಣೆ ಒಟ್ಟು ಸಮಾಜದಲ್ಲಿಯೇ ಆಗಬೇಕಾದ ಕ್ರಿಯೆ. ಆಧುನಿಕ ಮಠಗಳು ದೇವಸ್ಥಾನಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ಸಮುದಾಯದ ಭಕ್ತಿಕೇಂದ್ರಗಳನ್ನು ಒಂದು ವರ್ಗದ ಭಕ್ತಿಕೇಂದ್ರವಾಗಿಸುವ ಪರಿಪಾಠ ಹಿಂದಿನಿಂದಲೂ ನಡೆದು ಬಂದಿದೆ. ಇಲ್ಲಿಯೂ ಕೂಡ ಮಠ ದೇವಸ್ಥಾನವನ್ನು ತನ್ನ ವಶಕ್ಕೆ ತೆಗೆದುಕೊಂಡು ಉತ್ಸವ ನಡೆಸುತ್ತದೆ. ಅನಂತರ ರಾಮಾನಾಯ್ಕನ ಬೆಳವಣಿಗೆಯನ್ನು ಸಹಿಸದಾದ 'ಮಠ', ಅಶ್ವಮೇಧಯಾಗಕ್ಕೆ ತೊಡಗುವುದು ರಂಜಕತೆಯನ್ನು ಉಂಟುಮಾಡುತ್ತದೆ. ದೇವರ, ಭಕ್ತಿಯ ಹೆಸರಿನಲ್ಲಿ ಶೂದ್ರ ಸಮುದಾಯವನ್ನು ಹದ್ದುಬಸ್ತಿನಲ್ಲಿಡುವ ಇನ್ನೊಂದು ಪ್ರಯತ್ನ ಇದು. 'ಕುದುರೆಯನ್ನು ಬಳಸಿಕೊಂಡು ಭಾರತ ಪ್ರವೇಶಿಸಿದ ಆರ್ಯರು ಮಾಡಿದ್ದು ಇದೇ ಕೆಲಸ.' (ಆರ್. ಎಸ್. ಶರ್ಮರ 'ಪ್ರಾಚೀನ ಭಾರತ'ದಲ್ಲಿ ಬರುವ ವಿವರಣೆ.) ಅಶ್ವಮೇಧ ಕೇವಲ ತನ್ನ ಪರಿಸರದಲ್ಲಿ ನಡೆದರೆ ಸಾಕು. ತುಮಕೂರಿನ ಸಿದ್ಧಗಂಗಾಮಠ, ಹಾಸನ, ಮಂಡ್ಯ, ಮೈಸೂರಿನ ಆದಿಚುಂಚನಗಿರಿಮಠ (ಪು. ೨೦೩)ದ ಪರಿಸರದಲ್ಲಿ ಕುದುರೆ ಓಡಬಾರದು. ಸಮಸ್ಯೆಯನ್ನು ವಾಮಮಾರ್ಗದಿಂದ ಪರಿಹರಿಸಿಕೊಳ್ಳುವ ಯಾವೆಲ್ಲ ಪ್ರಯತ್ನಗಳು ವಿಫಲವಾಗಿ ರಾಮಾನಾಯ್ಕನ ಒಂದು ಮಾತು ಮೇಲ್ವರ್ಗದವರ ಎಲ್ಲಾ ಸಂಚನ್ನು ನೂಕಿಬಿಡುತ್ತದೆ. ''ಹೆಗಡೆರೆ, ಕುದುರೆಗೆ ಪೂಜೆ ಮಾಡಿ ಕಪ್ಪ ಕಾಣಿಕೆ ಕೊಡಲು ನಾವು ಬಂದಿಲ್ಲ. ಕುದುರೆ ಕಟ್ಟಿಹಾಕಲು ನಾವು ಬಂದಿದ್ದೇವೆ.'' (ಪು. ೨೦೮) ಎಂಬುದು ಇನ್ನು ಮುಂದೆ ಇಲ್ಲಿ ನಾವೇ ಆಳುತ್ತೇವೆ ಎಂಬ ಸೂಚನೆಯನ್ನು ನೀಡಿದಂತೆ ಇದೆ.

ಈ ಕಾದಂಬರಿಯಲ್ಲಿ ಮೇಲ್ವರ್ಗದವರು ಆಡುವ ಮಾತು ಅಪ್ಪಟ ದೇಸೀಯತೆ ಪಡೆದುಕೊಂಡಿದ್ದರೆ, ನಾಯ್ಕ ಸಮುದಾಯದ ಭಾಷೆ ಸಲೀಸಾಗಿ ಬಂದಿಲ್ಲ. ಕೋರ್ಟ್ ತಿಮ್ಮಪ್ಪನ ಪಾತ್ರ, ಖಾಸಿಂ ಸಾಬಿಯ ಕಥೆ ಸರಿಯಾದ ಅಂತ್ಯ ಕಂಡಿಲ್ಲ. ಗಣೇಶ ಹೆಗಡೆ ಹುಚ್ಚನಂತೆ ಸತ್ತುಹೋಗುತ್ತಾನೆ. ಇಷ್ಟೆಲ್ಲ ಹೇಳಿದ ಮೇಲೆ ಕಾದಂಬರಿಕಾರರು ಅನೇಕ ಸೂಕ್ಷ್ಮತೆಯನ್ನು ರೂಪಕದ ಮೂಲಕವೇ ಹೇಳುವ ಪ್ರಯತ್ನ ಮಾಡಿದ್ದಾರೆ. ಮತ್ತೆ ಮತ್ತೆ ಬರುವ 'ಅಘನಾಶಿನಿ' ಕಾಣುವ ಬದಲಾವಣೆಯನ್ನು ಗಮನಿಸಿ ''ಅಘನಾಶಿನಿಯ ದೈತ್ಯ ಕಾಡುಗುಡ್ಡ'' (ಪು. ೧೪), ''ಅಘನಾಶಿನಿಗೆ ಬಿದ್ದ ಕಿಚ್ಚಿನಂತೆ'' (ಪು. ೫೦), ''ಎರಡನೆಯ

ರಭಾವದಲ್ಲಿ ಅಘನಾಶಿನಿ ತುಂಬಿದೆದೆಯ ಹೆಣ್ಣಾಗಿ" (ಪು. ೧೫೨), "ಅಘನಾಶಿನಿಯಲ್ಲಿ ಗುಂಡಿ ತೆಗೆದು ಜೀವಂತ ಹುಗಿದು ಬಿಡುತ್ತೇವೆ" (ಪು. ೯೧) ಇತ್ಯಾದಿ. ಅಶೋಕ ಹೆಗಡೆ ಪರಿಸರವನ್ನು ಕಂಡ ರೀತಿಯನ್ನು ವಿವರಿಸುತ್ತದೆ. ಜಿ. ಎಸ್. ಆಮೂರರು ಈ ಕಾದಂಬರಿಯನ್ನು 'ಭಾರತೀಪುರ', 'ಬೀಜ'ದ ಜೊತೆ ಇಟ್ಟು ನೋಡಿದ್ದಾರೆ (ಮುನ್ನುಡಿ). ಈ ಎರಡು ಕಾದಂಬರಿಯಂತೆ ಇಲ್ಲಿ ನಾಯಕನಿಲ್ಲ. ಆದರೆ 'ಅಘನಾಶಿನಿ'ಯೇ ಒಂದು ಮುಖ್ಯ ಪಾತ್ರವಾಗಿ ಬೆಳೆದಿದೆ. ನವ್ಯದ ಆಧುನಿಕ ಪ್ರಜ್ಞೆ ಇಲ್ಲಿ ಹೇಗೆ ಕೆಲಸ ಮಾಡಿದೆ ಎಂದರೆ 'ಗಾಯತೊಂಡೆ–ರಾಮಾನಾಯ್ಕರು ಸೇರಿ ಅಘನಾಶಿನಿಯ ನೀರನ್ನು 'ವಾಟರ್ ಬಾಟ್ಲಿಂಗ್' ಮಾಡಿ ಉದ್ದಿಮೆದಾರರಿಗೆ ಮಾರುವ ಮೂಲಕ ಊರು ಮುಂದೆ ತಾಳಲಿರುವ ರೂಪಾಂತರವನ್ನು ಹೇಳುತ್ತಾರೆ. ಆಧುನಿಕತೆ ಪ್ರವೇಶಿಸಿ ಅವರೊಂದಿಗೆ ಮುಖಾಮುಖಿಯಾಗುವುದು, ಹಾಗೂ ಬ್ರಿಟಿಷರು ಬಿಟ್ಟುಹೋದ ಹಳ್ಳಿಯೊಂದನ್ನು ನೆನಪಿಸಿ ಜಾಗತೀಕರಣದ ವಿಕೃತಿಯು ಸಂಚೊಂದು ಪ್ರವೇಶಿಸುವ ಬಗೆಯನ್ನು ಹೇಳುವ ಮೂಲಕ 'ಅಶ್ವಮೇಧ' ಮುಗಿಯುತ್ತದೆ.

✤ **ಶಿವರಾಮ ಕಾರಗಟಿ :** ಕನ್ನಡ ಉಪನ್ಯಾಸಕರು, ಮೌಂಟ್ ಕಾರ್ಮೆಲ್ ಪದವಿಪೂರ್ವ ಕಾಲೇಜು, ವಸಂತನಗರ, ಅರಮನೆ ರಸ್ತೆ, # ೩೮, ಬೆಂಗಳೂರು-೫೬೦ ೦೫೨ ✤

ಜಿನದತ್ತ ದೇಸಾಯಿಯವರ 'ಮಾಗಿ' — ಬಿ. ಎ. ಸನದಿ

ಜಿನದತ್ತ ದೇಸಾಯಿಯವರ 'ನೀಲಾಂಜನ' (೧೯೫೪) ಮತ್ತು 'ಮಧುಶಾಲಿನಿ' (೧೯೬೦) ಬಂದ ನಂತರ ಅವರ ಕಾವ್ಯ ಬತ್ತಿಯೇ ಹೋಯಿತೇನೋ ಎನ್ನುವಷ್ಟು ಸದ್ದಿಲ್ಲದಾಯಿತು. ಕನ್ನಡ ಸಾಹಿತ್ಯವಲಯದಲ್ಲಿ ಅವರ ಹೆಸರು ಕೂಡ ಕೇಳುವುದು ಅಪರೂಪವಾಯಿತು. ಡಾ. ವಿ. ಕೆ. ಗೋಕಾಕ ಅವರ ಗರಡಿಮನೆಯಲ್ಲಿ (ಕರ್ನಾಟಕ ಕಾಲೇಜಿನಲ್ಲಿ) ೧೯೫೦ ರ ದಶಕದಲ್ಲಿ ಪಳಗಿದ ಒಬ್ಬ ಕವಿ ಇದ್ದೂ ಇಲ್ಲದ ಹಾಗೆ ಓನ್ನೆಲೆಗೆ ಸರಿದು ಬಿಟ್ಟಾಗ ಅವರ ಲೇಖನಿಯಿಂದ ಬಹಳಷ್ಟು ನಿರೀಕ್ಷಿಸಿದ ಕವಿಮಿತ್ರರಿಗೆ ಸ್ವಲ್ಪ ಮಟ್ಟಿಗೆ ನಿರಾಸೆ, ಸ್ವಲ್ಪ ಮಟ್ಟಿಗೆ ಸಿಟ್ಟು ಹಾಗೂ ಸ್ವಲ್ಪ ಮಟ್ಟಿಗೆ ಬೇಸರವಾಗುವುದು ಸ್ವಾಭಾವಿಕ. ಅವರು ಕೆಲಸದಲ್ಲಿದ್ದ ನ್ಯಾಯಲೋಕದ ಪರಿಧಿಯಿಂದ ಹೊರಬಂದ ಬಳಿಕ ೧೯೯೪ ರ ಸುಮಾರಿಗೆ 'ಒಂದೊಂದು ನುಡಿಯನೊಂದೊಂದು ಬಾಣದೊಲು ಬಿಡುವ ಬಿಲ್ಲುಗಾರ' ತಾನೆಂಬ ಆತ್ಮವಿಶ್ವಾಸದೊಡನೆ ಪ್ರಕಟಿಸಿದ ಅವರ ಕವನಸಂಗ್ರಹ 'ಮತ್ತೆ ಬಂದಿದ್ದೇನೆ' ಕಂಡು ಬಹಳಷ್ಟು ರಸಿಕಮಿತ್ರರಿಗೆ ಸಮಾಧಾನವೆನಿಸಿತ್ತು. ಅದು ಅವರ ಕವಿತೆಯೇ ರಸಿಕಲೋಕಕ್ಕೆ ಹೇಳಿದ ಸಮಾಧಾನದ ಮಾತು. ಅವರ ಕವಿತೆ ಬತ್ತಿ ಹೋಗಿರಲಿಲ್ಲ. 'ನೂರು ಮಾತುಗಳನ್ನು ಹುಚ್ಚೆದ್ದು ಎಸೆಯುವುದಕಿಂತ ಮೊನೆಯುಳ್ಳ ಒಂದು ಮಾತನಾಡುವವರಲ್ಲಿ ಜಿನದತ್ತರಿಗೆ ಶ್ರದ್ಧೆಯಿದೆ' ಎಂದು 'ನೀಲಾಂಜನ'ದ ಮುನ್ನುಡಿಯಲ್ಲಿ ಗೋಕಾಕರಂಥ ದಿಗ್ಗಜರೇ ಎತ್ತಿ ಹಿಡಿದ ಅವರ ಕವಿತೆ ಬತ್ತಿ ಹೋದೀತೆ? ಆದರೆ, 'ಮತ್ತೆ ಬಂದಿದ್ದೇನೆ' ಬಂದ ನಂತರ ಮತ್ತೆ ಅವರ ಕವಿತೆ ಕೆಲಕಾಲ ತಣ್ಣಗಾಯಿತು. ಸುದೀರ್ಘ ಹತ್ತು ವರ್ಷಗಳ ವರೆಗೆ ಮೌನಾವೃತವಾಗಿ ಕುಳಿತಿತ್ತು. ಈಚೆಗೆ ೨೦೦೪ ರಲ್ಲಿ ಅವರ ಮಾಗಿದ ಮನಸ್ಸಿನಿಂದ ಮೂಡಿ ಬಂದ ೧೨೬ ಕವನಗಳ ಹೊಸ ಸಂಕಲನ 'ಮಾಗಿ' ಬೆಳಕಿಗೆ ಬಂದಿತು.

ಈಗ ಪಯಣ ಮುಗಿಯುವ ಹೊತ್ತು / ಹೊತ್ತೂ ಮುಳುಗುತ್ತಿದೆ

ತೆರಳಬೇಕು / ನೀವು ನಿಮ್ಮೂರಿಗೆ / ನಾವು ನಮ್ಮೂರಿಗೆ..... (ನೀವೆಲ್ಲ)

ಎಂಬಂಥ ಬದುಕಿನ ಹಂತದಲ್ಲಿ ಜಿನದತ್ತ ದೇಸಾಯಿಯವರು ತಮ್ಮ 'ಮಾಗಿ'ಯನ್ನು ಕನ್ನಡಿಗರ ಕೈಗೊಪ್ಪಿಸಿದ್ದಾರೆ. ಆದರೆ ಯಾವ ಕವಿಯ ಪಯಣವೂ ಅಷ್ಟು ಬೇಗ ಮುಗಿಯುವಂಥದ್ದಲ್ಲ. ಕವಿಯ ಮೌನವೆಂದರೆ ಮುಪ್ಪಲ್ಲ. ಯಾರಿಗಾದರೂ ಮುಪ್ಪು ಬಂದರೂ ತಪ್ಪಲ್ಲ. ಆದರೆ ಕವಿಗೆ ಮಾತ್ರ ಮುಪ್ಪೆಂಬುದೇ ಇಲ್ಲ. ಅವನ ಕವಿತೆಯಿರುವ ವರೆಗೂ ಪಯಣ ನಡೆದೇ ಇರುತ್ತದೆ. ಅಂತೆಯೇ ಈ ಕವಿ ತಮ್ಮ ಮೊದಲ ಕವನದಲ್ಲೇ ಹೇಳಿದಂತೆ–

ಪೋಟು ಮರ / ಚಿಗಿತಿತ್ತು / ಮೌನಕ್ಕೆ ಮುಗುಳೊಡೆದು ಮಾತಾಡಿತು

ಅವರ ಕವಿತೆಗೆ ಚಿಗುರೊಡೆಯುವುದೆಂದರೆ ತೋಟದೊಳಗಿನ ತರುರಾಜಿ ಬೆಳೆಯುವುದರ ಸಂಕೇತ. ಅವರ ಕವಿತೆಯ ಬೆಳವಣಿಗೆಯ ಗುರುತೂ ಹೌದು. ಈ ಚಿಗುರು ತನ್ನಷ್ಟಕ್ಕೆ ಸುಮ್ಮನಿರುತ್ತದೆಯೇ?

ರೆಂಬೆ ಕೊಂಬೆಗಳಲ್ಲಿ ಕೈಯೆತ್ತಿ / ಮುಗಿಲಿನೆಡೆಗೆ ಮೊಗವೆತ್ತಿ

ಕೈ ಮುಗಿಯುತಿದೆ ನಭಕೆ / ತಾ ಪಡೆದ ಭಾಗ್ಯಕ್ಕೆ..... (ಚಿಗುರು)

ಈ ಚಿಗುರು ಮುಗುಳಾಗಿ ಮುಗಿಲಿನೆಡೆಗೆ ಮೊಗವೆತ್ತಿ ನಮನ ಸಲ್ಲಿಸುತ್ತದೆ. ಆದರ್ಶದ ಆಕಾಶವನ್ನು ತಲುಪಲು ಹವಣಿಸುತ್ತದೆ. ಈ ಬೆಳವಣಿಗೆಯ ತುಡಿತದಿಂದ ಚಿಗುರಿದ ಜಿನದತ್ತರ ಕಾವ್ಯ ಯಾವುದೋ ಒಂದು ಹಂತದಲ್ಲಿ ನಿರಾಸೆಯಿಂದ ನಿಟ್ಟುಸಿರು ಬಿಟ್ಟದ್ದು ಆಶ್ಚರ್ಯದ ಸಂಗತಿಯಾಗಿದೆ. ಅವರ 'ಶಬ್ದಗಳು' ಕವಿತೆಯಲ್ಲಿ–

ಶಬ್ದಗಳು ಸೋಲುತ್ತಿವೆ / ಅವು ಭಾವಗಳೊಡನೆ ಬೆರೆಯುವುದಿಲ್ಲ

ಬೆಳೆಯುವುದಿಲ್ಲ..... / ರೆಕ್ಕೆ ಕಳಚಿದ ಹಕ್ಕಿಗಳಂತೆ

ಬಲ ಸಾಲದೆ / ನೆಲಕ್ಕುರುಳಿ ಬಿಕ್ಕುತ್ತವೆ.

ಎಂದದ್ದು ಯೋಚನೆಗೆ ತೊಡಗಿಸುವಂತಿದೆ. ಮೌನಕ್ಕೆ ಮುಗುಳೊಡೆದು ಮಾತಾಡುವ ಅವರ ಕವಿತೆ ರೆಕ್ಕೆ ಕಳಚಿದ ಹಕ್ಕಿಯಂತೆ ನೆಲಕ್ಕುರುಳುವ ಸೋಲುಭಾವವನ್ನು ಪ್ರಕಟಿಸುವುದಾದರೂ ಏಕೆ? ಅವರ 'ಸುಂದರ ಕನಸುಗಳು ಸೋತು ಕುಂಟುವುದಾದರೂ' ಏಕೆ? 'ತಲೆಯ ಹಾಳು ದೇಗುಲದಲ್ಲಿ ನೆನಪಿನ ಬಾವಲಿಗಳು ನೇತಾಡುವುದಾದರೂ ಏಕೆ?' ಈ ಎಲ್ಲ ವಿರೋಧಾಭಾಸಗಳ ನಡುವಿನಿಂದಲೇ ಅವರ ಇತ್ತೀಚಿನ ಕಾವ್ಯ ಬಹಳಷ್ಟು ಮಾಗಿ ನಿಂತಿರುವುದನ್ನು ಪ್ರಸ್ತುತ ಸಂಕಲನದಲ್ಲಿ ಗುರುತಿಸಬಹುದಾಗಿದೆ. ಇದು ಹೂವು ಅರಳುವ ಬಗೆ. ನಾಡದ್ದಿನ ಬೀಜದಲ್ಲಿ ತಾ ಮತ್ತೆ ಎದ್ದು ನಗುವ ಬಗೆ. ನಿನ್ನೆಯ ಮೊಗ್ಗು ನಾಡದ್ದಿನ ಕನಸು ಕಾಣುವ ಪ್ರಕ್ರಿಯೆಯಲ್ಲಿ, ನ್ಯಾಯಾಲಯದ ಭಾಷೆಯಲ್ಲೇ ಮುಳುಗಿಹೋದ ತಮ್ಮ ನೆನಪಿನ ಫೈಲುಗಳಲ್ಲಿದ್ದ ಶಬ್ದಗಳು ಸಾಲದೇ ಹೋಗುವ ಅಸಮಾಧಾನ ಕವಿಗೆ ಮೂಡಲೂ ಬಹುದು. ಒಮ್ಮೆ ಅವರು ತಮ್ಮ ಕವಿತೆಯನ್ನು 'ದಿನ ದಿನಕೆ ಆಳಕ್ಕೆ ಹೂಳುತ್ತಿದ್ದೇನೆ' ಎನ್ನುವಷ್ಟು ರೊಚ್ಚಿಗೆದ್ದಂತೆ ಕಾಣುತ್ತದೆ. ಆದರೆ ಅದು ಕ್ಷಣಿಕ ಅಸಮಾಧಾನ. ಮತ್ತೆ ಅವರ ಮೌನಕ್ಕೆ ಮಾತಿನ ಪ್ರಸ್ಥಾನ.

ಮಧ್ಯಾಹ್ನಕ್ಕೆ / ಕಣ್ಣೆತ್ತಿ ನೋಡಲಾಗದ / ಕಾದ ಬೆಳ್ಳಿಯ ತಗಡು /

ರವಿಯೊಡನೆ ಬಿಸಿ ಬಿಸಿ ಮುನಿಸು. (ಬಣ್ಣ ಬದಲಿಸುವ ಬಾನು)

ಈ ತರದ ಸಮರ್ಥ ಶಬ್ದಚಿತ್ರಗಳನ್ನು ಕೊಡುವ ಲೇಖನಿಗೆ ಶಬ್ದಗಳು ಸೋಲುತ್ತಿವೆ ಎನಿಸುವುದು ಸೋಜಿಗದ ಸಂಗತಿಯಲ್ಲದಿನ್ನೇನು? ಮನುಷ್ಯನ ಸೋಗಲಾಡಿತನವನ್ನೇ ಪ್ರಶ್ನಿಸುವಂತೆ ಈ ಕವಿ ಅದೇ ಪದ್ಯದಲ್ಲಿ ಕೇಳುವುದು : 'ಬಾನೂ ಬಣ್ಣ ಬದಲಿಸುತ್ತಿದೆಯೇ, ನಮ್ಮ ನಿಮ್ಮಂತೆ?' ಇಂಥ ಪ್ರಶ್ನೆ ಕವಿಯ ಸಾಮಾಜಿಕ ಕಳಕಳಿಯನ್ನೇ ಪ್ರಾಕೃತಿಕ ಸನ್ನಿವೇಶಕ್ಕೆ ಸಮೀಕರಿಸಿ ಹೇಳುವ ಕುಶಲತೆಯನ್ನೂ ತೋರಿಸುತ್ತದೆ. ಅವರ ಶಬ್ದಸಂಚಯದಲ್ಲಿ ಮೊದಲಿನ ರಮ್ಯ ಸಂಪ್ರದಾಯದ ಬೆಳ್ಗಿರಣಗಳೇ ಹೆಚ್ಚಾಗಿ ಕಾಣಸುತ್ತಿವೆಯಾದರೂ ಅವರ ಹೊಸ ಕವಿತೆಗಳಲ್ಲಿಯ ಶಬ್ದಗಳಿಗೆ ನವ್ಯ ಕವಿಗಳ ವಾಸನೆಯೂ ಹೊಡೆದಿರುವುದನ್ನು ನಾವು ಕಾಣಬಹುದು. ಉದಾ : ಅವರ 'ಮೊದಲ ದಿನ' ಎಂಬ ಕವಿತೆಯನ್ನು ಗಮನಿಸಬಹುದು : ಹೊಸ ಶತಮಾನದ ಮೊದಲ ದಿನ ಬರೆದ ಈ ಕವಿತೆಯಲ್ಲಿ–

ಅದೇ ನಿನ್ನಿನ ಸೂರ್ಯ / ಇಂದೂ ಮೂಡಿದ್ದಾನೆ
ನಿನ್ನೆಯಿರುಳೆಲ್ಲ ಸೋರೆಯಾದ / 'ಬೀರು' 'ವಿಸ್ಕಿ'ಯ ವಾಸನೆ
ಈ ನಸುಕಿನ ತಣ್ಣಗಿನ / ಗಾಳಿಯನು ಕೊಂಚ ಬಿಸಿ ಮಾಡಿ
ಗಾಳಿಯೂ ಆಗೀಗ ಜೋಲಿ ಹೊಡೆಯುತ್ತಿದೆ.

ಎಂದು ಅವರು ಹೊಸ ದಿನದ ಬೆಳಗನ್ನು ಬಣ್ಣಿಸುತ್ತಾರೆ. ಇದು ಅವರ ಹೊಸ ಕವಿತೆಯ ಹೊರಳುದಾರಿಯ ದಿಕ್ಕನ್ನೂ ಸೂಚಿಸುತ್ತದೆ. 'ಬೆಳಕೇ ಕೈ ಚಾಚಿ ಬಾಚಿ ಬಾ' 'ಎನುವಾಗ ಕೈ ಕೊಸರದಿರು' ಎಂದು, ಹೊಸ ಬೆಳಕಿನತ್ತ ಎಲ್ಲರೊಂದಾಗಿ ಮುನ್ನಡೆಯುವ ಸಂಕಲ್ಪದ ಧ್ವನಿ ಇವರ ಶಬ್ದಗಳಲ್ಲಿದೆ. ಈ ಬದುಕಿಗೆ ಅವರು 'ಜ್ಯೋತಿರ್ಯಾನ' ಎಂದು ಕರೆದದ್ದು ತುಂಬ ಅರ್ಥಪೂರ್ಣವಾಗಿದೆ.

ಸದಾ ಸೂರ್ಯನ ಬೆಳಕಿನ ಬಗ್ಗೆ ಕನವರಿಸುತ್ತ, ನಿನ್ನೆಯ ಮೊಗ್ಗು ಅರಳಿ ಹೂವಾಗುವ ವಿಕಾಸಕ್ರಮವನ್ನು ಸಾಕಾರಗೊಳಿಸಬೇಕೆಂದು ಹಾರೈಸುತ್ತ ತನ್ನ ದಾರಿಯನ್ನು ತಾನೇ ಕಂಡುಕೊಂಡ ಕವಿ. ನನ್ನ ದಾರಿ ನನಗೆ / ನನ್ನೋದಯದ ನನ್ನ ಹಾಡು / ಬಂದಾಯ ಗಿಂದಾಯ

ಅದೇನೇ ಇದ್ದರೂ / ಅದು ಅವರವರ ದಾರಿ / ನನಗೆ ನನ್ನದೇ ದಾರಿ

ಎಂದು ಪ್ರಾಮಾಣಿಕವಾಗಿ ಸಾರಿ ಹೇಳಿ ತಮ್ಮ ಕವಿತೆಗಳನ್ನು ವಾಚಕರ ಕೈಯಲ್ಲಿಟ್ಟಿದ್ದಾರೆ. ಇವು ಕವಿ ಮತ್ತು ವಾಚಕರ ನಡುವೆ ಯಾವ ಮಧ್ಯಸ್ಥಿಕೆಯಿಲ್ಲದೆ ನೇರವಾಗಿ ಮಾತಾಡಬಲ್ಲ ಕವಿತೆಗಳು; ರಸಿಕರೊಡನೆ ಮೈಚಳಿ ಬಿಟ್ಟು ಸರಸ ಸಲ್ಲಾಪವಾಡುವ ಕವಿತೆಗಳು. ನಮ್ಮ ಹಿಂದಿನ ವಚನಕಾರರನ್ನೂ, ಶಿಶುನಾಳ ಶರೀಫ, ಬೇಂದ್ರೆ, ಕಾವ್ಯಾನಂದ, ಅಡಿಗರಂಥ ಹಿರಿಯ ಕವಿಗಳನ್ನೂ ನೆನಪಿಸಿ ಕೊಡುವ ಸಾಲುಗಳನ್ನು ಸಹಜವಾಗಿ ತಮ್ಮ ಒಡಲಲ್ಲಿರಿಸಿಕೊಂಡು ಮೂಡಿ ಬಂದ ಕವಿತೆಗಳು. ತಮ್ಮ ಜಾನಪದ ಶೈಲಿಯಿಂದ ವಾಚಕರ ಹೃದಯಗಳನ್ನು ಹತ್ತಿರ ಸೆಳೆದುಕೊಳ್ಳಬಲ್ಲ ಕವಿತೆಗಳು. ಇಲ್ಲಿಯ ಕೆಲವು ಕವಿತೆಗಳಲ್ಲಿ ಕವಿಯ ತಾತ್ವಿಕ ಚಿಂತನೆಯ ಲಹರಿ ಕಂಡುಬಂದರೆ, ಮತ್ತೆ ಕೆಲವು ಕವಿತೆಗಳಲ್ಲಿ ಸಾಮಾಜಿಕ ಶೋಷಣೆಯ ವಿರುದ್ಧ ಬಂಡಾಯದ ಧ್ವನಿಯೂ ಕೇಳಿಬರುತ್ತವೆ. ಬಹುತೇಕ ಕವನಗಳು 'ತಮಸೋ ಮಾ

ಜ್ಯೋತಿರ್ಗಮಯ' ಎಂಬ ಆಶಯದೊಡನೆ ಹೊಸ ದಾರಿ ಹುಡುಕುವ ಸನ್ನಾಹದಲ್ಲಿದ್ದಂತೆ ಕಾಣುತ್ತವೆ. ಇವರ ಕವಿತೆಗಳಿಗೆ ಸೂರ್ಯ, ಬೆಳಕು, ಗಾಳಿ, ಮೊಗ್ಗು, ಹೂವು, ಹಕ್ಕಿ, ಕನಸು, ದಾರಿ, ಮೋಡ, ಕೋಳಿ ಇತ್ಯಾದಿ ಪ್ರತಿಮೆಗಳೆಂದರೆ ತುಂಬ ಪ್ರೀತಿ. ಅಂತೆಯೇ ಅವು ಪದೇ ಪದೇ ಕಾಣಿಸಿಕೊಳ್ಳುತ್ತವೆ.

ಮೂಲಭೂತ ಹಕ್ಕು, ಸ್ವಾತಂತ್ರ್ಯ, ಹೆಗ್ಗಣಗಳು, ಬದುಕು ಬಲೆ– ಮುಂತಾದ ಕವಿತೆಗಳಲ್ಲಿ ಅವರ ನ್ಯಾಯಾಲಯದ ನೆನಪುಗಳೂ ಸುಳಿದಾಡಿವೆ. ನರಳುತಿದೆ ಬೆಳಕು, ಸದ್ದಿಲ್ಲದೆ ಬಿದ್ದ ಬುದ್ಧ, ಬಸವಣ್ಣ, ಮುಗಿಲ ಮೇಲಿನವರಿಗೆ, ಮೊದಲ ದಿನ, ಕೌದಿ, ಬನ್ನಿ ಕೋತಿಗಳೇ, ಗಾಂಧೀನಗರ, ಅಲ್ಲೊಂದು ಇಲ್ಲೊಂದು, ಕೋಳಿ ಕೂಗುತಿದೆ ಕೇಳಿದಿರಾ?, ಪುಢಾರಿಯಾಗು, ಹಣ ಬೇಕು, ಐವತ್ತರ ಕೂಸು, ದಿಲ್ಲಿಯಲಿ ಈರುಳ್ಳಿ ಮಾಯ, ಗೋಧ್ರಾ ರೈಲಿನ ಹಸ್ರು ನಿಶಾನೆ– ಇಂಥ ಕೆಲವು ಕವಿತೆಗಳಲ್ಲಿ ಮೂಡಿ ನಿಂತ ವ್ಯಂಗ್ಯ ತುಂಬ ಮೊನಚಾಗಿದೆ. ಜಿನದತ್ತರ ಮನಸ್ಸು ಕದಡಿದ ಹೊತ್ತಿನಲ್ಲಿ ಇಂಥ ಚುರುಕು ಮುಟ್ಟಿಸುವ ಪದ್ಯಗಳು ಹುಟ್ಟಿದ್ದೂ ಸ್ವಾಭಾವಿಕವೇ. ಇವರ ಕವನಗಳು ಅವರ 'ಸನ್ಮತಿ'ಯ ಚಿಂತನೆಯ ಅಭಿವ್ಯಕ್ತಿಯಾಗಿ, ಅವರ ಬದುಕಿನುದ್ದಕ್ಕೂ ಪಡೆದ ಅನುಭವದ ಪರಿಪಾಕವಾಗಿ ಬೆಳಕು ಕಂಡ ಪರಿ ತುಂಬ ಪರಿಣಾಮಕಾರಿಯಾಗಿದೆ. ಈ ಸಂಕಲನದ ಕೊನೆಯ ಭಾಗದಲ್ಲಿರುವ ಅನೇಕ ಸಣ್ಣ ಪದ್ಯಗಳು ಇವರ 'ಮಾಗಿ'ಗೆ ಜೋಡಿಸಿದ ಹನಿಮುತ್ತುಗಳಂತೆ ಶೋಭಿಸುತ್ತವೆ. ಮಾದರಿಗಾಗಿ ಒಂದು ಉದಾಹರಣೆ ನೋಡಬಹುದು :

ರವಿ / ಕತ್ತಲೆಯನ್ನು / ನೋಡುವುದೇ ಇಲ್ಲ /
ಅವನ ಅನುಭವ / ಸಂಪೂರ್ಣವಲ್ಲ / ಕವಿ ಹಾಗಲ್ಲ..... (ರವಿ - ಕವಿ)

❖ ಡಾ. ಬಿ. ಎ. ಸನದಿ : ಮಿಲನ, ಸಾ ಮಿಲ್ ಎದುರು, ಹೆರವಟ್ಟಾ, ಕುಮಟಾ-೫೮೧ ೩೩೨ ❖

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೩೨

ನನ್ನ ಅಪ್ಪ ನನ್ನ ಅಮ್ಮ — ರೇಖಾ ಬನ್ನಾಡಿ

'ನಾವು ಬದ್ಕಿದ್ದಂದ್ರೆ ಹ್ಯಾಂಗ್ಯಾ ಒಳ್ಳೆ ರಾಜ್ರ ಹಾಂಗೆ. ಈಗ ರಾವುತ್ರ ತರ ಕಾಲ ತಳ್ಳುವುದಾಯ್ತು' ಎನ್ನುತ್ತಾ ತನ್ನ ಗತಕಾಲದ ವೈಭವವನ್ನು ನೆನಪಿಸಿಕೊಂಡು ಕಾಲ ತಳ್ಳುತ್ತಿದ್ದ ಅಪ್ಪನ ಬದುಕು ಉಳಿದವರಿಗೊಂದು ಪಾಠ. ಶ್ರೀಮಂತ ಜಮೀನ್ದಾರಿ ಮನೆತನದ ಸೌಕೂರು ಲಕ್ಷ್ಮಣ್ ಶೆಟ್ರಿಗೆ ಐದನೆಯವರಾಗಿ ಹುಟ್ಟಿದವರೇ ನನ್ನಪ್ಪ ಶಂಕರ ಶೆಟ್ಟಿ. ಸಾಕಷ್ಟು ಆಸ್ತಿಯೊಂದಿಗೆ ದೊಡ್ಡ ರೈಸ್ ಮಿಲ್ಲು ಇಟ್ಟುಕೊಂಡು ಅಕ್ಕಿ ಬತ್ತ ವ್ಯಾಪಾರ ನಡೆಸುತ್ತಿದ್ದ ಅಜ್ಜನಿಗೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅಪಾರ ಕಾಳಜಿ. ಹಳ್ಳಿಯಲ್ಲಿ ದೂರದ ಶಾಲೆಗೆ ನಡೆದುಕೊಂಡು ಹೋಗಿ ಕಷ್ಟಪಡುವುದು ಬೇಡವೆಂದು ಕುಂದಾಪುರ, ಮಂಗಳೂರುಗಳಲ್ಲಿರುವ ಬಂಟರ ಹಾಸ್ಟೆಲುಗಳಿಗೆ ಮಕ್ಕಳನ್ನು ಸೇರಿಸಿದ್ದರು. ಅವರಲ್ಲಿ ನನ್ನಪ್ಪ ಮತ್ತು ಅವರಣ್ಣ ಶಿವರಾಮ ಶೆಟ್ಟಿ ಕುಂದಾಪುರದ ಹಾಸ್ಟೆಲಿನಲ್ಲಿದ್ದು ಶಾಲೆ ಕಲಿತವರು. ದೊಡ್ಡಪ್ಪ ಹೈಸ್ಕೂಲು ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಹೊರಗೆ ಹೋಗುವ ವರೆಗೆ ನನ್ನಪ್ಪ ಅಣ್ಣನ

ಹೆದರಿಕೆಯಿಂದಾಗಿ ಚೆನ್ನಾಗಿಯೇ ಓದುತ್ತಿದ್ದರಂತೆ. ಆದರೆ ಯಾವಾಗ ಅವರ ಶಿವಣ್ಣ ದೂರ ಹೋದರೋ ಆವತ್ತೇ ನಮ್ಮಪ್ಪನ ಕಲಿಯುವ ಮೂಡು ಹೊರಟು ಹೋಗಿತ್ತಂತೆ.

ಅದೇ ಸಮಯದಲ್ಲಿ ಸ್ವಾತಂತ್ರ್ಯ ಚಳವಳಿಯ ಕಾವು ಎಲ್ಲೆಡೆ ಪಸರಿಸಿ ಕುಂದಾಪುರದಲ್ಲೂ ಸಭೆ, ಸಮಾರಂಭಗಳು ನಡೆಯುತ್ತಿತ್ತಂತೆ. ಶಾಲಾ ವಿದ್ಯಾರ್ಥಿಯಾದ ನಮ್ಮಪ್ಪ ಅಂತಹ ಸಮಾರಂಭಗಳಲ್ಲಿ ಉತ್ಸಾಹದಿಂದ ಭಾಗವಹಿಸುವುದಲ್ಲದೆ ಒಮ್ಮೆ ಕರಪತ್ರ ವಿತರಣೆಯಲ್ಲಿ ಸ್ನೇಹಿತರೊಂದಿಗೆ ಪಾಲ್ಗೊಂಡಾಗ ಪೊಲೀಸರು ಅಟ್ಟಿಸಿಕೊಂಡು ಬಂದಿದ್ದು, ಯಾರ್ಯಾರದೊ ಮನೆ ಕಂಪೌಂಡ್ ಹಾರಿ ಓಡಿ ಹೋದದ್ದು ಇದನ್ನೆಲ್ಲ ಆಗಾಗ ನೆನಪಿಸಿಕೊಳ್ಳುತ್ತಿದ್ದುದುಂಟು. ಓದುವುದನ್ನು ಬಿಟ್ಟು ಬೇರೆಲ್ಲದರಲ್ಲೂ ಮುಂದೆ ಇದ್ದ ನಮ್ಮಪ್ಪ ಪುನಃ ಪುನಃ ಡುಮ್ಕಿ ಹೊಡೆದಾಗ ಮನೆಯಲ್ಲಿ ತರಾಟೆಗೆ ತಗೊಂಡರಂತೆ. ಬೇಜಾರು ಬಂದ ಅಪ್ಪ ಊರು ಬಿಟ್ಟು ಹುಬ್ಬಳ್ಳಿಗೆ ಓಡಿಹೋದರು. ಸಂಜೆಯಾಗುವಾಗ ಯಾವುದೋ ಒಂದು ಹೋಟೆಲಿಗೆ ಹೋಗಿ 'ಏನಾದರೂ ಕೆಲಸ ಕೊಡಿ' ಎಂದು ಕೇಳಿಕೊಂಡರಂತೆ. ಕೆಂಪುಕೆಂಪಗೆ ದುಂಡಗೆ ಚೆಂದಾಗಿರುವ ಈ ಹುಡುಗನನ್ನು ನೋಡಿಯೇ ಅನುಮಾನಗೊಂಡ ಹೋಟೆಲ್ ಮಾಲಕರು ಜೋರಾಗಿ ತನಿಖೆ ಮಾಡಿದಾಗ ಅಪ್ಪ ಬಾಯಿ ಬಿಟ್ಟರಂತೆ. ಸುದ್ದಿ ಮನೆಗೆ ಮುಟ್ಟಲು, ಅಜ್ಜನೇ ಖುದ್ದು ಹೋಗಿ ಮಗನನ್ನು ಕರೆತಂದರಂತೆ. ಅಂತೂ ಮರಳಿ ಶಾಲೆಗೆ ಹೊರಟರೂ ಲೆಕ್ಕ ಮಾತ್ರ ಅಪ್ಪನ ತಲೆಗೆ ಹತ್ತಲೇ ಇಲ್ಲ. ಅಂತೂ ಎಸ್.ಎಸ್.ಎಲ್.ಸಿ. ಮುಗಿಯುವಾಗ 'ಓದು ಸಾಕಪ್ಪಾ' ಎಂದು ಕೈ ಎತ್ತಿದರಂತೆ.

ಇನ್ನೇನು ಮನೆಗೆ ಬಂದು. "ನಾನು ಬ್ಯಾಂಕಿಗೆ ಸೇರುತ್ತೇನೆ"ಂದಾಗ ಅಜ್ಜ ಹೆದರಿ, "ಅಯ್ಯೋ ಮಾರಾಯ, ನೀನು ಖರ್ಚಿಗೆ ಸಾಕಾಗದೆ ಬ್ಯಾಂಕ್ ಹಣಕ್ಕೆ ಕೈ ಇಟ್ಟರೆ ಮತ್ತೆ ಕಂಬಿ ಎಣಿಸಬೇಕಾದೀತು. ಖರ್ಚಿಗೆ ಸಾಕಾಗದ ಅಂತಹ ಕೆಲಸ ನಿನಗೆ ಬೇಡ, ಮನೆಯಲ್ಲೇ ಇರು." ಎಂದರಂತೆ.

ಮನೆಯಲ್ಲಿ ಕೂತು ಬೇಜಾರಾದ ಅಪ್ಪನಿಗೆ ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಕನಾಗುವ ಹಂಬಲ. ತಕ್ಷಣ ಒಂದಿಷ್ಟು ಹೊಸ ಬಟ್ಟೆಗಳನ್ನು ಹೊಲಿಸಿ ರೆಡಿಯಾಗಿ ಸೂಟ್‌ಕೇಸಿನೊಂದಿಗೆ ದೋಣಿ ಹತ್ತುವರೆ ಇದಿರೇ ಶಿವಣ್ಣ ಪ್ರತ್ಯಕ್ಷ! "ಪಿ. ಟಿ. ಕೆಲ್ಸವಾ ನಿಂಗೆ? ನಿನ್ನ್ ಖರ್ಚಿಗ್ ಆ ಸಂಬ್ಳ ನಾಲ್ಕ್ ದಿನ ಸಾಕಾಗ್ಲಿಕ್ಕಿಲ್ಲ, ನಡಿ ಮನಿಗೆ. ಬೇಸಾಯವೋ ವ್ಯಾಪಾರವೋ ಏನಾರೂ ಮಾಡ್" ಎಂದು ಗದರಿಸಿ ಹಿಂದಕ್ಕೆ ಕರೆತಂದರಂತೆ. ಆಗಿನ ಕಾಲದಲ್ಲಿ ಮೇಸ್ತ್ರ ಕೆಲಸ ಎಂದರೆ ಭಾರಿ ತಾತ್ಸಾರವಂತೆ. ಸ್ವತಃ ನಮ್ಮಪ್ಪನೇ ಹಲವು ಬಾರಿ ತನ್ನನ್ನು ತಾನೇ 'ಬಜ್ಜಿ ಮಾಸ್ತ್ರು' ಎಂದು ಸ್ವವಿಡಂಬನೆ ಮಾಡಿಕೊಳ್ಳುತ್ತಿದ್ದುದುಂಟು. ಮುಂದೆ ನಮ್ಮಪ್ಪ ಯಾರಿಗೂ ಹೇಳದೆ ಸೀದಾ ಹೋಗಿ ಟೀಚರ್ ಟ್ರೈನಿಂಗ್‌ಗೆ ಸೇರಿಕೊಂಡರಂತೆ. ಹಾಗೆಯೇ ಅಧ್ಯಾಪಕ ವೃತ್ತಿಯೂ ದೊರೆಯಿತು.

ನಮ್ಮಮ್ಮನ ಊರು ಗುಲ್ವಾಡಿಯಾದರೂ ಓದಿದ್ದು, ಬೆಳೆದದ್ದು ಎಲ್ಲ ಉಡುಪಿ ಸಮೀಪದ ಕುತ್ಪಾಡಿಯಲ್ಲಿ. ಅಪ್ಪನಷ್ಟು ಶ್ರೀಮಂತ ಮನೆತನ ಅವರದ್ದಲ್ಲವಾದರೂ ಅನುಕೂಲಸ್ಥ ಮನೆಯವರೇ. ಅಮ್ಮನ ತಂದೆಗೂ ಸಾಕಷ್ಟು ಜಮೀನಿತ್ತು. ಜೊತೆಗೆ ತನ್ನದೇ ಅನುದಾನಿತ ಶಾಲೆಯಲ್ಲಿ ಮೇಸ್ತ್ರು ಆಗಿದ್ದರು. ಆದರೆ ಅವರದ್ದು ಅವಿಭಕ್ತ ಕುಟುಂಬ. ತುಂಬಿದ ಮನೆಯಲ್ಲಿ

ಬೇಕೆಂದಾಗ ಬೇಕಾದ್ದನ್ನು ತಿನ್ನೋಕೆ ಸಾಧ್ಯವಾಗುತ್ತಿರಲಿಲ್ಲ. ಸಂಜೆ ಹೊತ್ತು 'ತೊಡು' ಆದಾಗ ಬೆಲ್ಲದ ಉಂಡೆ ತಿಂದು ಕೂತಿದ್ದೂ ಇದೆಯಂತೆ. ಅಮ್ಮ ಚಿಕ್ಕ ಪ್ರಾಯದಲ್ಲೆ ತಾಯಿಯನ್ನು ಕಳೆದುಕೊಂಡವಳು. ತುಂಬಿದ ಮನೆಯಲ್ಲಿ ಎಲ್ಲರ ಮಧ್ಯೆ ಕಷ್ಟ ಸುಖವನ್ನು ಸಮನಾಗಿ ಕಂಡು ಬೆಳೆದವಳು. ಒಡಹುಟ್ಟಿದ ಅಣ್ಣ ಪದವಿ ಮುಗಿಸಿ ಮುಂಬಯಿಯಲ್ಲಿ ಉದ್ಯೋಗ ಮಾಡುತ್ತಿದ್ದ. ಆಗ ತಮ್ಮ ಶಾಲಾ ಬಾಲಕನಷ್ಟೆ.

ಅಮ್ಮನನ್ನು ಮದುವೆ ಮಾಡಿಕೊಟ್ಟ ಅಜ್ಜ ನನ್ನಪ್ಪನ ಮನೆ ಹೆಬ್ಬಾಗಿಲಲ್ಲಿ ಕೂತು, "ನನ್ನ ಮಗಳು ದೊಡ್ಡ ಮನೆ ಸೇರಿದಳು. ಇನ್ನು ನಾನು ಸತ್ತರೂ ಸ್ವರ್ಗ" ಎಂದು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದರಂತೆ. ಹಾಗೆ ಹೇಳಿದ ಮಾರನೆಯ ವರ್ಷವೆ ಹೃದಯಾಘಾತದಿಂದ ನಿಧನರಾದರು.

ಒಂದೆರಡು ವರ್ಷಗಳಲ್ಲಿ ಈ ಅಜ್ಜನೂ ತೀರಿ ಹೋಗಿ ತಂದೆಯ ಮನೆಯಲ್ಲಿ ಪಾಲಾಯಿತು. ಅಪ್ಪನ ಪಾಲಿಗೆ ಬಂದ ಭೂಮಿಯಲ್ಲಿ 'ಹಾಲಕ್ಕಿ' ಎನ್ನುವ ಊರು ತುಂಬ ಕುತೂಹಲಕಾರಿಯಾದುದು. ಮೂರು ಕಡೆ ದಟ್ಟವಾದ ಕಾಡು, ಒಂದೆಡೆ ಹರಿಯುವ ಕುಬ್ಜಾ ನದಿಯಿಂದ ಆವೃತವಾದ ಆ ಊರಿಗೆ ಹೊರಸಂಪರ್ಕವೇ ಕಡಿಮೆ. ಕರೆಂಟು, ಫೋನು ಬಿಡಿ, ಒಂದು ರಸ್ತೆ ನೋಡಬೇಕಾದರೂ ಮೈಲು ದೂರ ನಡೆಯಬೇಕು. ಫಾರೆಸ್ಟ್ ಡಿಪಾರ್ಟ್‌ಮೆಂಟ್ ಜೀಪು ಓಡಾಡಬಹುದಾದ ಒಂದು ಒಡ್ಡೊಡ್ಡಾದ ರಸ್ತೆಯಿತ್ತು. ಅದನ್ನೆ ಸಮತಟ್ಟಾಗಿಸಿ ಅನುವು ಮಾಡಿಕೊಂಡೆವು. ಆಗ ಊರಲ್ಲಿದ್ದದ್ದು ಮೂರೇ ಮನೆ. ಒಂದು ಬ್ರಾಹ್ಮಣರದ್ದಾದರೆ ಇನ್ನೆರಡು ಬುಟ್ಟಿ ನೇಯುವ ದಲಿತ ವರ್ಗದ ಬೆಳಾರಿಯವರದ್ದು.

ಮೊದಲ ಬೇಸಾಯಕ್ಕೆ ಅಣಿಯಾದ ಅಪ್ಪ ಐದು ಎಚ್.ಪಿ. ಆಯಿಲ್ ಎಂಜಿನ್ ತಂದು ಹಾಕಿಸಿದರು. ಉಳಿಯೋದಕ್ಕೆ ಮನೆಯಾಗದ ಕಾರಣ ಚಿಕ್ಕ ಕೊಟ್ಟಿಗೆ ಕಟ್ಟಿ ಒಕ್ಕಲು ಗಂಡಸು ಮರ್ಲ್ಯಾನಿಗೆ ಪಾರುಪತ್ಯ ವಹಿಸಿಕೊಟ್ಟರು. ಒಂದೇ ವಾರದಲ್ಲಿ ವಾಪಾಸಾದ ಆತ, 'ಒಡಿಯಾ, ಅಲ್ ಕಾಲ ಕಳಿಯುದ್ ಕಷ್ಟ. ಹಗ್ಲ ಆಪತೀಗೇ ಬ್ರಹ್ಮರಾಕ್ಷಸ ಓಡಾಡತ್. ಮನಿಂದ ಹೊರ್ಗ್ ಹ್ಯಾಪ್ಕ್ ಎಡಿಯಾ' ಎಂದು ದಿಗಿಲಿನಲ್ಲಿ ವಿವರಿಸಿದ. ಅಪ್ಪ ವಿವರವಾಗಿ ಕೇಳಿದಾಗ ಆತ ಹೋದಲ್ಲೆಲ್ಲ ಬ್ರಹ್ಮರಾಕ್ಷಸ ಕೂಗ್ತಾ ಬರುವುದೆಂಬ ವಿಷಯ ತಿಳಿಯಿತು. ಅಪ್ಪ ತಮಾಷೆಯಾಗಿ, "ಮನುಷ್ಯರಿಗಿಂತ ದೊಡ್ಡ ರಾಕ್ಷಸ್ರು ಇಲ್ಲ ಮಾರಾಯ. ಯಾರೋ ನರ ಮನುಷ್ಯರೇ ಇರ್ಬೇಕ. ನಿನ್ನನ್ನ ಹೆದ್ರಸುದಕ್" ಎಂದರು. ಅಷ್ಟಕ್ಕೇ ಆತ ಸ್ವಲ್ಪ ಸೆಟೆದು ಕುಳಿತು, "ಹೌದ್ ಕಾಣೆ ನಂಗೂ ಅನ್‌ಮಾನ ಆಯ್ತ್. ಮನ್ಸರ್ ಸ್ವರದಾಂಗೆ ಇತ್ತ್ ಕಾಣೆ" ಎಂದ. ಈಗ ಅಪ್ಪನ ಕಿವಿಯೊಂದಿಗೆ ಕಾಲುಗಳೂ ಚುರುಕಾಗಿ ಹಾಲಕ್ಕಿಗೆ ನಡೆದೇಬಿಟ್ಟರು.

ಇಬ್ಬರೂ ಪರಸ್ಪರ ಮಾತಾಡಿಕೊಂಡರು. ಮರ್ಲ್ಯಾ ಗದ್ದೆ ಕಡೆ ಹೊರಟರೆ ಅಪ್ಪ ಗುಟ್ಟಾಗಿ ಪೊದೆಗಳ ಸಂದಲ್ಲೆ ಹಿಂಬಾಲಿಸುತ್ತಾ ಅವನನ್ನು ಅನುಕರಿಸಿದರು. ಎಂದಿನಂತೆ ಕರ್ಕಶ ಧ್ವನಿ ಕೇಳಿಬಂದಾಗ, ಇಬ್ಬರೂ ಗಕ್ಕನೆ ದನಿ ಬಂದೆಡೆ ಹಾರಿ ಓಡಿದು ನೋಡಿದರೆ ಪಾಣಿ ಪಂಚೆ ಮುಸುಕಿನೊಳಗೆ ಹಾಲಕ್ಕಿ ಅಡಿಗರು! ಹಲವು ವರ್ಷಗಳಿಂದ ಅನುಭವಿಸಿಕೊಂಡು ಬಂದ ಭೂಮಿಗೆ ನಿಜವಾದ ದಾತಾರರು ಬಂದುಬಿಟ್ಟರೆ ಭೂಮಿ ಕೈತಪ್ಪಿ ಹೋಗುವುದೆಂಬ ಭಯದಲ್ಲಿ ಅಡಿಗರು ಹೂಡಿದ ತಂತ್ರವದು. ಅಂತೂ ಅವರ ತಂತ್ರವೆಲ್ಲ ವಿಫಲವಾಗಿ ಅಪ್ಪನ ಎದುರು

ಹ್ಯಲಾಗಿ ಬಿಟ್ಟರು. ಅಪ್ಪ ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ 'ಊರ ಬ್ರಾಹ್ಮಣ ಅಲ್ವಾ, ದೇವರ ಕಲ್ಲಿಗೆ ನೀರೆರೆಯಲು ಬೇಕೆಂದು' ತಣ್ಣಗಾದರು.

ಇನ್ನು ತಡ ಮಾಡದೆ ತತ್ಕಾಲಕ್ಕೆಂದು ಮಣ್ಣಿನ ಗೋಡೆಯುಳ್ಳ ಬಿದಿರ ಮಾಡಿಗೆ ಹಂಚು ಹೊದಿಸಿ ಸಂಸಾರ ಸಮೇತ ಬಿಡಾರ ಹೂಡಿಬಿಟ್ಟರು. ಆಗ ನಮ್ಮಪ್ಪನಿಗೆ ನಾವು ಮೂರು ಮಂದಿ ಹೆಣ್ಣುಮಕ್ಕಳು ಮಾತ್ರ. ಇದ್ದಕ್ಕೆ ಮೂರು ಹೆಣ್ಣಾದರೂ ಆಪರೇಶನ್ ಮಾಡಿಸಿಕೊಳ್ಳದ ಅಮ್ಮ ಗಂಡುಮಗುವಿಗಾಗಿ ಕಾಯುತ್ತಿದ್ದಳು. ಹಾಲಕ್ಕಿಗೆ ಹೋಗುವಾಗ ವೀಣಾ ಚಿಕ್ಕವಳು. ನಡೆದಾಡಲು ಕಾಲು ಬಂದಿತ್ತಷ್ಟೇ. ಮೊದಲ ದಿನ ಸಂಜೆ ಹೊಳೆ ನೋಡುವುದಕ್ಕಾಗಿ ಅಮ್ಮ ನಮ್ಮನ್ನು ಕರಕೊಂಡು ಹೊರಟಳು. ತುಂಬಿ ಹರಿಯುವ ನೀರನ್ನು ನೋಡಿದ ನನ್ನ ಪುಟ್ಟ ತಂಗಿ ವೀಣಾ ಚಂಗನೆ ನದಿಗೆ ಹಾರಿದ್ದೇ. ಒಯಿಲಿನ ಸೆಳೆತಕ್ಕೆ ಮಗು ಕೊಚ್ಚಿಕೊಂಡು ಹೋಗುವಾಗ ಪಕ್ಕದಲ್ಲೇ ನಿಂತಿದ್ದ ಮರ್ಲ್ಲಾ ಕೂಗಿಕೊಂಡರೆ ಅಮ್ಮ ಧೈರ್ಯದಿಂದ ನೀರಿಗೆ ಧುಮುಕಿ ಮಗುವಿನ ಕಾಲ ಹೆಬ್ಬೆರಳನ್ನು ಹಿಡಿದು ಮೇಲೆ ತಂದಳು. ಮತ್ತೊಮ್ಮೆ ಮನೆ ಮಾಡಿನಲ್ಲಿ ಸರ್ಪ ಬಂದು ಸೇರಿಕೊಂಡರೆ ನಮ್ಮಪ್ಪ ಜೀವಭಯದಿಂದ ಮಕ್ಕಳ ಸಮೇತ ಅಡಿಗರ ಮನೆಗೆ ಹೋಗಿ ರಾತ್ರಿ ಮಲಗುತ್ತಿದ್ದರು. ಅಮ್ಮ ಒಂದು ದಿನ ಒಪ್ಪಿದಳು. ಎರಡನೆಯ ದಿನ ಬಿಲ್‌ಕುಲ್ ಅಡಿಗರ ಮನೆಗೆ ಬರಲೊಪ್ಪದೆ ಅಲ್ಲೆ ಮಲಗಿದಳು. ಸುಮಾರು ಐದಾರು ದಿನದ ಮೇಲೆ ಆ ಹಾವು ಗಳುವಿನ ಬದಿಯಲ್ಲಿ ಕಡು ಮಾಡ ಬದಿಗೆ ಹರಿದು ಬರುತ್ತಿರುವಾಗ ದೊಡ್ಡ ದೋಟೆ ಹಿಡಿದು ಎಳೆದು ಕೆಳಗೆ ಎಸೆದುಬಿಟ್ಟಳು. ಕೆಲಸದವರು ಹೆದರಿ "ದೇವ್ರ ಹಾವು ಅಮ್ಮ ಅದು" ಎಂದಾಗ, "ಮಕ್ಕಳು ಮರಿ ಇರುವ, ಗೌಲು ಮಾಡುವ ಮನೆಯಲ್ಲಿ ದಿನಗಟ್ಟಲೆ ಇರುವ ಹಾವು ಸಾಚಾ ಹೇಗೆ? ಅದ್ಯಾವುದೋ ಕಾಟು ಸರ್ಪ, ಇಲಿಗಾಗಿ ಬಂದಿದೆ" ಎಂದು ದಿಟ್ಟತನದಿಂದಲೇ ಉತ್ತರಿಸಿದ್ದಳು. ಅಮ್ಮ ತುಂಬ ಧೈರ್ಯವಂತೆ. ನೀರು, ಹಾವು, ಕಾಡುಪ್ರಾಣಿಗಳ ವಿಷಯದಲ್ಲಷ್ಟೇ ಅಲ್ಲ. ಬದುಕಿನ ಸಂದರ್ಭದಲ್ಲೂ ಎಂತೆಂತಹ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ಗಂಡ ಮಕ್ಕಳಿಗಾಗಿ ಜೀವ ತೇದಿದವಳು. ಇಲ್ಲವಾದರೆ ಆ ಕಾಡಿನ ಮಧ್ಯೆ ಬೆಳೆಯುತ್ತಿರುವ ಮೂರು ಹೆಣ್ಣುಮಕ್ಕಳು, ಪುಟ್ಟ ಎರಡು ಗಂಡುಮಕ್ಕಳೊಂದಿಗೆ ಕಾಲ ಕಳೆಯುವುದಾದರೂ ಹೇಗೆ?

ನಮ್ಮಮ್ಮ ಕಲಿಯುವಾಗಲೂ ತುಂಬ ಚುರುಕಂತೆ. ಅಕ್ಷರ ಮುತ್ತಿನಂತೆ, ಮಾತು ಹಕ್ಕಿಟ್ಟ ಹಾಗೆ. ಅದು ಅವಳ ಬರವಣಿಗೆಯಲ್ಲೂ ಕಾಣುತ್ತದೆ. ಮನೆ ಕೆಲಸದಲ್ಲೂ ಅಷ್ಟೇ ಚುರುಕು. ಕೂತು ಕಾಲಹರಣ ಮಾಡುವವಳಲ್ಲ. ಈಗಲೂ ಮಕ್ಕಳು ಮೊಮ್ಮಕ್ಕಳೆಂದು ಮನೆಗೆ ಬಂದು ಚಾವಡಿಯಲ್ಲಿ ಪಟ್ಟಾಂಗ ಹೊಡೆಯುತ್ತಾ ಊಟದ ಹೊತ್ತಿಗೆ 'ಅಡುಗೆ ಆಗ್ಬೇಕಲ್ಲ' ಎಂದು ಒಳಹೋದರೆ ಎಲ್ಲ ರೆಡಿಯಾಗಿರುತ್ತದೆ. ಅವಳ ಇಂತಹ ಸಜ್ಜನಿಕೆ ಮಕ್ಕಳ ವಿಷಯದಲ್ಲಿ ಮಾತ್ರವಲ್ಲ ಯಾರೇ ಮನೆಗೆ ಬಂದರೂ ಊಟದ ಹೊತ್ತಲ್ಲಿ ಊಟ, ಚಹದ ಹೊತ್ತಲ್ಲಿ ಚಹ ಇದ್ದೇ ಇದೆ.

ಇತ್ತ ನಮ್ಮಪ್ಪ ಹುರುಪಿನಿಂದ ಸಾಗುವಳಿ ಶುರು ಮಾಡಿದರು. ಆ ಪುಟ್ಟ ಊರಲ್ಲಿ ಸುಮಾರು ೧೫ ಎಕರೆ ಪಟ್ಟಾ ಭೂಮಿ, ೧೦ ಎಕರೆ ಕುಮ್ಕಿ ಜಾಗವಿತ್ತು. ವರ್ಷವಿಡೀ ಬೆಳ್ಳಾರಿ ಮನೆಯ ನಾಲ್ಕೈದು ಗಂಡಸರು ಅಷ್ಟೇ ಹೆಂಗಸರು ಕೆಲಸಕ್ಕೆ ಬರುತ್ತಿದ್ದರು. ಇನ್ನು ನಟ್ಟಿ

ಕೊಯಿಲಿನ ಸಮಯಕ್ಕೆ ವಾಲ್ತೂರು, ಕುಂಬಾರುಮಕ್ಕಿಗಳಿಂದ ಜನ ಬರುತ್ತಿದ್ದರು. ಆಯಿಲ್ ಇಂಜಿನ್‌ಅನ್ನು ಮೂಡಾಯಿ ಜಡ್ಡಿನ 'ಬ್ರಹ್ಮನ ಗುಂಡಿ'ಗೆ (ಬೇಸಿಗೆಯಲ್ಲೂ ತುಂಬ ನೀರಿರುವ ಆ ಗುಂಡಿಯ ಮೇಲ್ಗಡೆ ಬ್ರಹ್ಮನ ಮೂರ್ತಿಯಿರುವುದರಿಂದ ಈ ಹೆಸರು ಬಂದಿವೆ) ಇಟ್ಟಿದ್ದರು. ಗದ್ದೆ ಈ ತುದಿಯ ಪಡುವಾಯಿ ಜಡ್ಡಿನವರೆಗೆ ಇತ್ತು. ಪಂಪಿನ ನೀರು ತರಲು ಎತ್ತರದ ದಿಣ್ಣೆ ಮಾಡಿ ಅಲ್ಲಿಂದ ತೋಡನ್ನು ನಿರ್ಮಿಸಿದರು. ಕಾತಿ, ಸುಗ್ಗಿ, ಕೊಳ್ಕೆ ಎಂದು ಸಾಗುವಳಿ ಶುರುವಾಯಿತು. ಪ್ರತಿದಿನ ಸಂಜೆ ಅಪ್ಪನೇ ನಿಂತು ಪಂಪ್ ಸ್ಟಾರ್ಟ್ ಮಾಡುತ್ತಿದ್ದರು. ಆ ತುದಿಯಿಂದ ನೀರು ಈ ತುದಿಯ ವರೆಗೆ ತಲುಪಬೇಕಿತ್ತು. ಆದರೆ ದುರದೃಷ್ಟವಶಾತ್ ಅಲ್ಲಲ್ಲಿ ದೊಡ್ಡ ದೊಡ್ಡ 'ಪೊಳಾರ್' ಆಗಿ ಮಾರ್ಗಮಧ್ಯವೇ ನೀರೆಲ್ಲ ಸೋರಿ ಹೋಗುತ್ತಿತ್ತು. ನೀರಿನ ಹಾದಿ ಎಷ್ಟು ಬದಲಿಸಿದರೂ ಪರಿಸ್ಥಿತಿ ಅದೇ. ಅಪ್ಪ ಕೆಲವೊಮ್ಮೆ ರಾತ್ರಿ ೧೦-೧೨ ಗಂಟೆಯ ವರೆಗೆ ಒಬ್ಬರೇ ಕೂತು ನೀರು ಬಿಡುತ್ತಿದ್ದುದುಂಟು. ಅದನ್ನು ಗಮನಿಸಿದ ಕೆಲವರು "ಮಾಸ್ಟ್ರೇ, ರಾತ್ರಿಯೆಲ್ಲ ಒಬ್ರೆ ಅಲ್ಲಿರಬೇಡಿ, ಮೋಹಿನಿ ತಿರುಗ್ತಾಳೆ" ಎನ್ನುತ್ತಿದ್ದರೆ ಅಪ್ಪ, "ಅಯ್ಯೋ ನನಗೂ ಒಬ್ನೆ ಕೂತು ಬೇಜಾರು. ಮೋಹಿನಿಯೋ ಬೊಬ್ಬರ್ಯನೋ ಬಂದ್ರೆ ಕಳುಹಿಸಿಕೊಡಿ. ಕಂಪೆನಿಯಾಗುತ್ತೆ" ಎನ್ನುತ್ತಿದ್ದರು.

ಎಷ್ಟೆಲ್ಲ ಒದ್ದಾಡಿದರೂ ಬೇಸಾಯ ಗಿಟಲಿಲ್ಲ. ಸಾಗುವಳಿ ಕೈಗೆ ಹತ್ತುವುದಿಲ್ಲವೆಂದು ಹೊಳೆ ಬದಿ ಉದ್ದಾನುದ್ದಕ್ಕೂ ತೆಂಗಿನ ತೋಟ ಮಾಡಿದರು. ಮೇಲಿಂದ ಮೇಲೆ ಬರುತ್ತಿದ್ದ ನೆರೆಯಿಂದ ಗಿಡವೆಲ್ಲ ಕೊಳೆತು ತುಂಬಿದ ಹೊಯಿಗೆಯಿಂದ ಹೊಂಡ ಕೂಡಾ 'ಸಪಾಯಿ' ಆಯಿತು. ಎರಡನೆಯ ಇನ್ನಿಂಗ್ಸ್‌ನಲ್ಲಿ ತೆಂಕು ದಿಕ್ಕಿನ ಗುಡ್ಡದ ತುಂಬ ಸಸಿ ನೆಡುತ್ತಾ ಹೋದರು. ಎರಡು ಬೇಸಿಗೆ ಕಳೆಯುವಾಗ ನೀರು ಸಾಲದೆ ಬೇರು ಸಮೇತ ಕರಟಿ ಹೋಗಿ ಹೊಂಡ ಮಾತ್ರ ಉಳಿಯಿತು. ಅಮ್ಮ ಹೇಳಿದಂತೆ ದನ ಕರುಗಳು ಸತ್ತು ಹೋದಾಗ ಹೊಂಡ ತೋಡುವ ಪ್ರಮೇಯ ಬರಲಿಲ್ಲ. ಹಾಗೆ ದನ, ಕರು, ನಾಯಿ, ಬೆಕ್ಕು, ಕುದ್ರಾಳ, ಕಡಬಳ್ಕ ಎಂದು ಒಂದೊಂದು ಪ್ರಾಣಿ ಸತ್ತಾಗಲೂ ಹೊಂಡಗಳಿಗೆ ಮುಕ್ತಿ ದೊರೆಯುತ್ತಿತ್ತು.

ಅನಂತರ ಗೇಣಸು, ಮೆಣಸು, ಕಬ್ಬಿನ ಬೆಳೆ ಆರಂಭಿಸಿದರು. ಕಾಡುಪ್ರಾಣಿಗಳಿಂದ ಒಂದೇ ಸಮನೆ ಉಪಟಳ. ಅದರಲ್ಲೂ ಬೇಲಿಗೆ ಬಗ್ಗದ, ಶಿಕಾರಿಗೆ ಒಗ್ಗದ ಕಾಡುಕೋಣಗಳು ಹಿಂಡು ಹಿಂಡಾಗಿ ಬಂದು ತುಳಿದು ತಿಂದು ನಾಚಾರ ಮಾಡಿಬಿಡುತ್ತಿದ್ದವು. ನಮ್ಮಪ್ಪನ ದೂರದೃಷ್ಟಿಗೆ ತಕ್ಷಣ ಹೊಳೆದದ್ದು ಕಾಡಿಗೂ ನಮ್ಮ ಜಾಗಕ್ಕೂ ಮಧ್ಯೆ ಅಗಳು ತೋಡುವುದು. ಸಹಸ್ರಾರು ರೂಪಾಯಿ ವೆಚ್ಚದಲ್ಲಿ ಅದನ್ನೂ ಮಾಡಿ ಮುಗಿಸಿದರು. ಹೀಗೆ ಒಂದೊಂದೇ ಥರ ನೋಡುವುದರಲ್ಲಿ ಅಪ್ಪ ಸಂಪೂರ್ಣ ದಿವಾಳಿ. ಬ್ಯಾಂಕುಗಳಲ್ಲಿ ಸಾಲ ಎತ್ತಿದ್ದಲ್ಲದೆ ಅಮ್ಮನ ಚಿನ್ನವನ್ನೂ ಬ್ಯಾಂಕ್ ತಿಜೋರಿಗೆ ಹಾಕಿ ಬಂದರು. ಅಮ್ಮ ಮದುವೆಯಾಗುವಾಗ ಹೆಚ್ಚೇ ಎನಿಸುವಷ್ಟು ಅವಳಪ್ಪ, ಅಣ್ಣ ಚಿನ್ನ ಹಾಕಿದ್ದರಂತೆ. ಅದೆಲ್ಲ ಬ್ಯಾಂಕಿಗೆ ಹೋಗಿ ಉಳಿದದ್ದು ಮೈಮೇಲಿರುವ ಚಿನ್ನ ಮಾತ್ರ.

ಒಕ್ಕಲು ಮಸೂದೆ ಬರುವ ತನಕ ಬೇರೆ ಬೇರೆ ಕಡೆಯ ಭೂಮಿಯಿಂದ ಸಾಕಷ್ಟು ಗೇಣಿ ಬರುತ್ತಿತ್ತು. ಅನಂತರ ಕುಂದಾಪುರ, ಹಳ್ನಾಡಿನ ಗೇಣಿ ನಿಂತು ಹೋದರೆ ಗುಲ್ವಾಡಿಯ ಜೋಗ

ಪೂಜಾರಿ ಮಾತ್ರ ಅಪ್ಪನ ನಿಯತ್ತಿನ ಒಕ್ಕಲಾಗಿ ಕೊನೆಯ ವರೆಗೂ ಗೇಣಿ ಸಲ್ಲಿಸುತ್ತಿದ್ದ. ಮುಂದೆ ಅಪ್ಪನೇ ಅರೆವಾಸಿ ಭೂಮಿಯನ್ನು ಅವನಿಗೆ ಬರೆದುಕೊಟ್ಟಿದ್ದು ಬೇರೆ ಮಾತು.

ಆಶ್ಚರ್ಯವೆಂದರೆ ಹಣದ ಸಮಸ್ಯೆ ಕುತ್ತಿಗೆ ತನಕ ಬಂದರೂ ನಮ್ಮಪ್ಪ ಮಕ್ಕಳಿಗೆ ಯಾವುದಕ್ಕೂ ಕಡಿಮೆ ಮಾಡುತ್ತಿರಲಿಲ್ಲ. ದಿನನಿತ್ಯದ ಖರ್ಚಿಗೇ ಕೆಲವು ಹಣ ಬೇಕಾಗುತ್ತಿತ್ತು. ಇನ್ನು ಊಟ ಪಾಠ, ಬಟ್ಟೆ ಬರೆ ಎಲ್ಲವೂ ಉತ್ತಮ ಗುಣಮಟ್ಟದವುಗಳೇ. ಅಪ್ಪನಿಗೆ ಸ್ನಾನಕ್ಕೆ ಮೈಸೂರ್ ಸ್ಯಾಂಡಲ್ ಸೋಪು. ಹಲ್ಲಿಗೆ ಬಿನಾಕಾ (ಅನಂತರ ಸಿಬಾಕಾ ಆಯ್ತು) ಪೇಸ್ಟ್, ಉಡಲು ಉಜಾಲ ಜಾಹೀರಾತಿನಂತೆ ಶುಭ್ರ ಶ್ವೇತ ವರ್ಣದ ಮಡಿಬಟ್ಟೆಯೇ ಬೇಕು. ಹುಟ್ಟಿನಿಂದಲೇ ಬಂದ 'ದಿಲ್‌ದಾರ್' ಬದುಕನ್ನು ನಿಗ್ರಹಿಸಲೂ ಆಗದೆ ಪೋಷಿಸಲೂ ಸಾಧ್ಯವಾಗದೆ ಒದ್ದಾಡುತ್ತಿದ್ದರು. ಪ್ರತಿ ತಿಂಗಳೂ ಸಂಬಳ ಬಂದಾಕ್ಷಣ ಮಕ್ಕಳ ಬಸ್ ಚಾರ್ಜ್, ಫೀಸು, ವಗೈರಿಯೊಂದಿಗೆ ಕೆಲಸದವರ ಸಂಬಳ ಬಟವಾಡೆ ಮೊದಲು ಮಾಡಿ ಉಳಿದದ್ದನ್ನು ಮನೆವಾರ್ತೆಗೆ ನೀಡುತ್ತಿದ್ದರು. ಮತ್ತೆ ಪ್ರತಿದಿನ ಹಣದ ಪರದಾಟ ಇದ್ದದ್ದೇ. ಕೊಜೆ ಮಣ್ಣು(ಆವೆಮಣ್ಣು) ಮಾರಾಟ ಮಾಡಿದ್ದು, ಮರ ಮಾರಿದ್ದು, ಗುಲ್ವಾಡಿ ರಸ್ತೆ ಬದಿಯಲ್ಲಿರುವ ಜಾಗವನ್ನು ಕೊಟ್ಟಿದ್ದು, ಅದು ಇದು ಎಂದು ಎಷ್ಟೇ ಹಣ ಬಂದರೂ ಅಪ್ಪನ ಮಾತಿನಂತೆ 'ಅಘನಾಶಿನಿ ಗುಂಡಿಗೆ ಸುರಿದಂತೆ' ಎಲ್ಲವೂ ಬರಿದಾಗುತ್ತಿತ್ತು. ಆಶ್ಚರ್ಯವೆಂದರೆ ಅಷ್ಟು ಕಷ್ಟದ ಮಧ್ಯೆಯೂ ನಮ್ಮಪ್ಪ ಮಕ್ಕಳನ್ನು ಹೂವಿನ ಹಾಗೆ ನೋಡಿಕೊಂಡಿದ್ದು! ಹೊಟ್ಟೆಗೆ ಬಟ್ಟೆಗೆ ಎಲ್ಲಕ್ಕೂ ಯಥೇಷ್ಟ.

ಒಂದೇ ಒಂದು ಬಾರಿ ಆ ಬಿಸಿ ಅವರ ಕೈಮೀರಿ ನಮ್ಮ ಹೊಟ್ಟೆಗೆ ತಟ್ಟಿದ್ದಿದೆ. ಮೇಲೆ ಹೇಳಿದಂತೆ ಹೊಸ ಹೊಸ ಪ್ರಯೋಗದಿಂದ ಎಷ್ಟೇ ಪ್ರಯತ್ನಿಸಿದರೂ ಲಾಭ ಬಿಡಿ ಹಾಕಿದ ಹಣವೇ ದಕ್ಕುತ್ತಿರಲಿಲ್ಲ. ಬೆಳೆದದ್ದೆಲ್ಲ ಕೂಲಿಗೆ ಅಳೆಯುವುದರಲ್ಲೆ ಮುಗಿದು ಹೋಗುತ್ತಿತ್ತು. ಗೇಣಿ ಬರುತ್ತಿದ್ದಾಗ ಅದರ ಕಷ್ಟ ಗೊತ್ತಾಗಲಿಲ್ಲ. ಅದು ನಿಂತ ಮೇಲೆ ಫಜೀತಿ ಏನೆಂಬುದು ಊಟದ ತಟ್ಟೆಗೂ ತಟ್ಟಿತು. ಮಳೆಗಾಲದ ನಟ್ಟಿ ಮುಗಿಯುತ್ತಲೇ ಅಕ್ಕಿ ಪೂರ್ತಿ ಖಾಲಿ. ಅನಂತರದ ದಿನಗಳು ಅಮ್ಮ ಹೇಳಿದ ಹಾಗೆ 'ಅಂಗ್ಡಿ ಅಕ್ಕಿ ಬಂಗ್ಡಿ ಮೀನೇ' ಗತಿ. ಒಮ್ಮೆ ಅಪ್ಪನಲ್ಲಿ ಕ್ಯಾಶ್ ಕೊಟ್ಟು ತರಲು ಹಣವಿಲ್ಲದೆ ಸಾಲದಲ್ಲಿ ಒಂದಿಷ್ಟು ಅಕ್ಕಿ ತಂದಿದ್ದರು. ಆವತ್ತು ರಾತ್ರಿ ಮಕ್ಕಳಿಗೆಲ್ಲ ಊಟಕ್ಕೆ ಬಡಿಸಿದ ಅಮ್ಮ ಅನುಮಾನದಿಂದಲೇ ಕುಕ್ಕರಗಾಲಲ್ಲಿ ಕೂತು ದಿಟ್ಟಿಸುತ್ತಿದ್ದಳು. ಒಬ್ಬೊಬ್ಬರೂ ಕೈತುತ್ತು ಬಾಯಿಗಿಟ್ಟವರೆ ವಾಕರಿಕೆ ಬಂದಂತಾಗಿ ಎದ್ದುಬಿಟ್ಟೆವು. ಅನ್ನವನ್ನು ತಟ್ಟೆಯಲ್ಲಿ ಬಿಟ್ಟು ಖಾಲಿ ಹೊಟ್ಟೆಯಲ್ಲಿ ಮಲಗಿಕೊಂಡೆವು. ಪುನಃ ಅನ್ನ ಮಾಡಲು ಬೇರೆ ಅಕ್ಕಿಯೂ ಇರಲಿಲ್ಲ.. ಆ ಹೊತ್ತು ಅಮ್ಮ ಅಪ್ಪನ ಸಂಕಟ ನೋಡಬೇಕಿತ್ತು, ಏನೋ ಮಹಾ ಪಾಪ ಮಾಡಿದವರಂತೆ!

ಅಪ್ಪ ಹಾಲಕ್ಕಿಯಲ್ಲಿ ಸಾಗುವಳಿ ಶುರು ಮಾಡುವ ಮೊದಲು ಸರಿಯಾಗಿ ಕೂಲಿ ಇಲ್ಲದೆ "ಎಷ್ಟೋ ರಾತ್ರಿ ತಣ್ಣೀರು ಬಟ್ಟೆ ಹೊಟ್ಟೆ ಮೇಲೆ ಹಾಕ್ಕೊಂಡು ಮಲಗಿದ್ದಿದೆ" ಎಂದು ದಗ್ಗ ಹೇಳುತ್ತಿದ್ದ ಮಾತಿನ ಅರ್ಥ ಆವತ್ತು ರಾತ್ರಿ ನಮಗೇ ಚೆನ್ನಾಗಿ ಅರಿವಾಯ್ತು. ಬೇಯಿಸಿದ ಬತ್ತ ಮಿಲ್ಲಲ್ಲಿ ಸರಿಯಾಗಿ ಒಣಗದ ಕಾರಣ ಆ ಪಾಟಿ ಅನ್ನ ವಾಸನೆಯೆಂದು ಕೆಲಸದವಳು ಹೇಳಿದ ನೆನಪು.

ಕುಂದಾಪುರು ಸೊಸೈಟಿಯಿಂದ ಸಾಲ ತೆಗೆದ ಅಪ್ಪ ಅವಧಿ ಮುಗಿದರೂ ತೀರಿಸಿರಲಿಲ್ಲವಂತೆ. ಹಾಗಾಗಿ ಅಲ್ಲಿನ ನೌಕರರಿಬ್ಬರು ಮನೆಗೆ ಬಂದು ಅಮ್ಮನಿಗೆ ವಿಷಯ ತಿಳಿಸಿದರು. ಮೇಲಿನಿಂದ ವಸೂಲಾತಿಗೆ ಒತ್ತಡ ಬಂದಿರುವುದರಿಂದ ಅನಿವಾರ್ಯವಾಗಿ ಅವರು ಮನೆಗೆ ಬಂದಿದ್ದರು. ಹೇಳಲಾರದ, ಹೇಳದೆ ಇರಲಾಗದ ಸ್ಥಿತಿ ಅವರದ್ದು. ಕಾರಣ ಅವರಲ್ಲೊಬ್ಬರು ಹಿಂದೆ ನಮ್ಮಜ್ಜನ ಒಕ್ಕಲಾಗಿದ್ದವರು. ಇನ್ನೊಬ್ಬರಿಗೆ ನಮ್ಮಪ್ಪನೇ ಕೆಲಸ ಮಾಡಿಸಿಕೊಟ್ಟಿದ್ದು. ಹೀಗಾಗಿ ಅಪ್ಪನಲ್ಲಿ ನೇರವಾಗಿ ಹೇಳಲಾಗದೆ ಅಮ್ಮನಲ್ಲಿ ತಮ್ಮ ಅಸಹಾಯಕತೆಯನ್ನು ತೋಡಿಕೊಂಡರು. ಬೇರೆ ಯಾರಾದರೂ ಆಗಿದ್ದರೆ ಮನೆ ಜಪ್ತಿ ಮಾಡುವ ಸ್ಥಿತಿ. ಪರಿಸ್ಥಿತಿಯ ತೀವ್ರತೆಯನ್ನು ಅರ್ಥಮಾಡಿಕೊಂಡ ಅಮ್ಮ ಅಕ್ಕನ ಕುತ್ತಿಗೆಯಲ್ಲಿದ್ದ ಸರ, ಬಳೆ, ಬ್ಯಾಂಕಿನಲ್ಲಿಡದೆ ಉಳಿದಿರುವ ಅಲ್ಪ ಸ್ವಲ್ಪ ಚಿನ್ನವನ್ನೆಲ್ಲ ತೆಗೆದು ಅವರ ಕೈಗಿತ್ತು, "ನೀವೇ ಇದನ್ನು ಕುಂದಾಪುರು ವಿಜಯ ಬ್ಯಾಂಕಿನಲ್ಲಿಟ್ಟು ಸಾಲ ತೀರಿಸಿಬಿಡಿ. ಸಾಧ್ಯವಾದಾಗ ಚಿನ್ನ ಬಿಡಿಸಿಕೊಂಡರಾಯ್ತು" ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟಳು.

ಶ್ರೀಮಂತ ತಂದೆಯ ಮಗನಾಗಿ ಹುಟ್ಟಿಯೂ ತನ್ನ ಒಡಹುಟ್ಟಿದವರ ಸರಿಸಮನಾಗಿ ಬಾಳಲಾಗದೆ ದಿನನಿತ್ಯ ಹಣ...ಹಣ...ಹಣ ಎಂದು ಹಣಕ್ಕಾಗಿ ಒದ್ದಾಡಬೇಕಾದ ಅವಸ್ಥೆಯನ್ನು ತಂದುಕೊಂಡ ಅಪ್ಪನಿಗೆ ಬದುಕಿನ ಮಧ್ಯಕಾಲದಲ್ಲಿ ಬಾಲ್ಯದ ಬೇಜವಾಬ್ದಾರಿತನ ಅರಿವಾಗತೊಡಗಿತು. ಆ ಪಶ್ಚಾತ್ತಾಪ ಅವರ ಮುಖದಲ್ಲೂ ಆಗಾಗ ಮಿಂಚಿ ಮಾಯವಾಗುತ್ತಿತ್ತು. "ಗಳಿಸಿದ ಆಸ್ತಿ, ಸಂಪತ್ತು ಎಲ್ಲವೂ ಕಾಲನ ದವಡೆಯಲ್ಲಿ ಕರಗಿ ಹೋಗಬಹುದು. ಆದರೆ ಕಲಿತ ವಿದ್ಯೆ ಎಂದೂ ಕೈಬಿಟ್ಟು ಹೋಗದು" ಎಂದು ಆಗಾಗ ಉದ್ಗರಿಸುತ್ತಿದ್ದರು. ಆದ್ದರಿಂದಲೇ ನಮ್ಮಪ್ಪ ಹಣದ ತಾಪತ್ರಯ ಕುತ್ತಿಗೆಯ ವರೆಗೆ ಬಂದಾಗಲೂ ಮಕ್ಕಳಿಗೆ ವಿದ್ಯೆ ನಿಲ್ಲಿಸಲಿಲ್ಲ. ಕೆಲವರು ಅಪ್ಪನನ್ನು ಹಂಗಿಸಿದ್ದಿದೆ, 'ಹೆಣ್ಣ್ ಮಕ್ಕಳಿಗೆಲ್ಲ ಕಾಲೇಜ್ ಯಾಕ್ಯಾ? ನಾಳೆ ಏನ್ ಡೌರಿ ಕೊಡುದ್ ತಪ್ಪುತ್ತಾ? ಒಲಿ ಬೂದಿ ತೆಗೂದ್ ತಪ್ಪುತ್ತಾ?' ಎಂದು. ಅಂತಹ ಮಾತುಗಳಿಗೆ ಅವರು ಯಾವತ್ತೂ ಕಾಸಿನ ಬೆಲೆಯನ್ನೂ ಕೊಟ್ಟಿರಲಿಲ್ಲ. ಹಾಗೆಯೇ ಆ ಕಾಡಿನ ಮಧ್ಯದಿಂದ ಬೆಳಿಗ್ಗೆ ೭ ಗಂಟೆಗೆ ಹೊರಟು ಸುಮಾರು ಎರಡೂವರೆ ಮೈಲು ನಡೆದು ಅಂಪಾರಿನಲ್ಲಿ ಬಸ್ಸು ಹಿಡಿದು ಬಸ್ರೂರಿಗೆ ಹೋಗಿ ಒಳ್ಳೆಯ ಅಂಕಗಳೊಂದಿಗೆ ಪದವಿ ಮುಗಿಸಿದ ನಮ್ಮ ಧೈರ್ಯ, ಸಾಹಸವನ್ನು ನೋಡಿ ಅಚ್ಚರಿಗೊಂಡು ಮನಸಾರೆ ಕೊಂಡಾಡಿದವರೂ ಇದ್ದಾರೆನ್ನಿ. ಬೇರೆಯವರು ಬೆರಗಾಗುವುದಲ್ಲ, ಸ್ವತಃ ನನಗೇ ಇವತ್ತು ಆ ದಿನಗಳನ್ನು ನೆನಪಿಸಿಕೊಂಡಾಗ ರೋಮ ನಿಮಿರಿ ನಿಲ್ಲುತ್ತದೆ. ಕಾಡುಕೋಣ, ಕಾಡುಹಂದಿ, ಹುಲಿ, ಕುರ್ಕ, ಹಾವುಗಳ ಜೊತೆಜೊತೆಗೆಯೇ ನಾವು ಬದುಕಿದ್ದೆಂದರೆ ಅದು ಅತಿಶಯದ ಮಾತಲ್ಲ. ಎಷ್ಟೋ ರಾತ್ರಿ ಜೀವವನ್ನೆಲ್ಲ ಕೈಯಲ್ಲಿ ಹಿಡಿದುಕೊಂಡು ರಾತ್ರಿ ಕಳೆದದ್ದಿದೆ. ಅವುಗಳು ಮಾತ್ರ ಇದ್ಯಾವುದನ್ನೂ ಲೆಕ್ಕಿಸದೆ ಮನೆ ಮಾಡಲ್ಲೊ, ಮನೆಯಂಗಳದಲ್ಲೊ, ಹಿಂಗಡೆಯಲ್ಲೊ ತಮ್ಮ ಪಾಡಿಗೆ ತಾವಿದ್ದು ಬೆಳಗಾಗುವಾಗ ಕಣ್ಮರೆಯಾಗುತ್ತಿದ್ದವು. ಇದು ಕಾಡುಪ್ರಾಣಿಗಳ ವಿಷಜಂತುಗಳ ವಿಷಯ ವಾದರೆ ಮನುಷ್ಯರ ವರ್ತನೆ ಕೂಡಾ ಆಶ್ಚರ್ಯವೆನಿಸುವಷ್ಟು ಶುದ್ಧ, ನಿಷ್ಕಪಟವುಳ್ಳದ್ದು. ಇಲ್ಲವೆಂದಾದರೆ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳು ದಟ್ಟವಾದ ಆ ಕಾಡ ಹಾದಿಯಲ್ಲಿ ಪ್ರತಿನಿತ್ಯವೂ ಓಡಾಡುವುದೆಂದರೇನು? ಒಮ್ಮೆಯೂ ಆ ನಿಟ್ಟಿನಲ್ಲಿ ಕಿಂಚಿತ್ ಆತಂಕ ಕೂಡಾ ನಮಗಾಗಿರಲಿಲ್ಲವೆಂದರೆ ಆ ಪರಿಸರದ ಜನತೆ ರೂಢಿಸಿಕೊಂಡು ಬಂದ ಸದಾಚಾರ ವಲ್ಲದೆ ಮತ್ತಿನ್ನೇನು?

ಹುಲಿ, ಕುರ್ಕಗಳ ಭಯ ರಾತ್ರಿ ಹೊತ್ತಲ್ಲಿ ಮಾತ್ರ. ಆದರೆ ಈ ಕಾಡುಕೋಣಗಳಿಗೆ ಹೊತ್ತು ಗೊತ್ತೇ ಇರಲಿಲ್ಲ. ರಾಜಮಾರ್ಗದಿಂದ ಆಗಾಗ ಕಾಣಸುತ್ತಲೇ ಇರುತ್ತವೆ. ಅವುಗಳಲ್ಲೂ ಎರಡು ಜಾತಿಗಳಿವೆ. ಕುಂದಾಪುರ ಕನ್ನಡದಲ್ಲಿ ಹೇಳುವುದಾದರೆ ಹೋರಿ ದುಡ್ಡು ಮತ್ತು ಎತ್ತು ದುಡ್ಡು. ಹೋರಿ ದುಡ್ಡು ಒಂಟಿಯಾಗಿಯೂ ಗುಂಪುಗುಂಪಾಗಿಯೂ ಆಗಾಗ ತಿರುಗುತ್ತಿರುತ್ತವೆ. ಇವುಗಳಿಗೆ ಪೆಟ್ಟಾದಾಗ, ಮರಿಗಳಾದಾಗ ಮಾತ್ರ ರೋಷವಂತೆ. ಅಂತಹ ಸಂದರ್ಭಗಳಲ್ಲಿ ಇದಿರಾದ ಮನುಷ್ಯನ ಮೇಲೆ ಎರಗಿ ಜೀವಕ್ಕೆ ಅಪಾಯವನ್ನುಂಟು ಮಾಡುತ್ತಿದ್ದವು. ಇನ್ನು ಎತ್ತು ದುಡ್ಡು ತೀರಾ ಅಪರೂಪ. ಇದ್ದರೂ ಅವು ಗುಂಪಿನಲ್ಲೆ ಕಾಣಸಿಗುವುದು. ಓಡಾಡುವಾಗ ಅವುಗಳ ಹೆಜ್ಜೆ ದನಿಗೇ ಮೈ ಬೆವರಬೇಕು. ಮನುಷ್ಯರಲ್ಲಿ ಗುಂಪಿಗೊಬ್ಬ ಮುಖಂಡ ಇರುವಂತೆ ಅವುಗಳಲ್ಲೂ ಒಂದು 'ಲೀಡರ್' ಇರಬೇಕು. ಅದು ಸೆಟೆದು ನಿಂತು ನೋಡುವ ಸ್ಟೈಲೇ ಅದ್ಭುತ. ಅವುಗಳ ಕೋಡು ಕೂಡಾ ಅಷ್ಟೇ ಅಪೂರ್ವವಾದುದು. ಕಾಡುಕೋಣಗಳು ಕಪ್ಪಗಿದ್ದು ಸಾಕಿದ ಅಲೆಮನೆ ಹೋರಿಗಳಂತೆ ದಷ್ಟಪುಷ್ಟವಾಗಿದ್ದರೆ, ಎತ್ತು ದುಡ್ಡು ಸೊಗಸಾದ ಗಾಡಿ ಎತ್ತುಗಳಂತೆ ಆಕರ್ಷಕವಾಗಿರುತ್ತವೆ. ಅವುಗಳು ಓಡುವಾಗ ಕಾಡೇ ಅದುರಿದಂತಹ ಸದ್ದು. ಹಾಗಂತ ಒಂಟಿ ಕೋಣವೊಂದು ಬೇಸಿಗೆಯಲ್ಲಿ ಹೆಬ್ಬಲಸಿನ ಹಣ್ಣು ಬೀಳುವಾಗ ಪ್ರತಿದಿನವೆಂಬಂತೆ ನಮ್ಮ ಮನೆ ಓಂಗಡೆಯೇ, ತಿರುಗಾಡುತ್ತಿತ್ತು. ನಾವೆಲ್ಲ ಹೋಗಿ ನಿಂತು ನೋಡುತ್ತಿದ್ದರೂ ಮುಸುಡಿಯನ್ನು ಆಚೊಮ್ಮೆ ಈಚೊಮ್ಮೆ ತಿರುಗಿಸುತ್ತಾ ಕ್ಯಾರೇ ಇಲ್ಲದೆ ಸಂಜೆ ಪಡುವಣದ ಹೊಳೆ ಕಡೆಗೆ ಬೆಳಗ್ಗೆ ಮೂಡಣದ ಕಾಡಿನ ಕಡೆಗೆ ಸಾಗುತ್ತಿತ್ತು.

ನಾವು ಶಾಲಾ, ಕಾಲೇಜುಗಳಿಗೆ ಹೋಗುವಾಗ ಅನೇಕ ಬಾರಿ ಕಾಡುಕೋಣಗಳು ಇದಿರಾಗಿ ಹೆದರಿ ಓಡಿದ್ದುಂಟು. ಬೆಳಿಗ್ಗೆಯಾದರೆ ಮರಳಿ ಮನೆಗೆ ಬಂದು ಆಳುಗಳೊಂದಿಗೆ ಕಾಡು ದಾಟುತ್ತಿದ್ದೆವು. ಸಂಜೆ ಬರುವಾಗ ಅವು ಸಿಕ್ಕರೆ ವಾಪಾಸು ಅಂಪಾರು ಕಡೆಯೇ ಓಡಬೇಕಾದ ಅವಸ್ಥೆ. ಆಗ ರಸ್ತೆಯಲ್ಲಿ ಯಾರಾದರೂ ಸಿಕ್ಕಿ ಕೇಳಿದರೆ ವಿಷಯ ಹೇಳುತ್ತಿದ್ದೆವು. ಅವರುಗಳು ಎಷ್ಟೇ ಹೊತ್ತಾಗಲಿ, ಏನೇ ತರಾತುರಿಯಲ್ಲಿರಲಿ "ಅಯ್ಯೋ ಮಾಸ್ಟ್ರ ಮಕ್ಳನ್ನ ಬಿಡುಕಾತ್ತಾ. ಈ ಚೆಂಜ್ ಆಪಾತಿಗ್ ಕಾಡ್‌ಕ್ವಾಣಂದ್ ಉಪದ್ರ ಬೇರೆ" ಎನ್ನುತ್ತಾ ಕಾಡು ದಾಟಿಸಿ ಬಿಟ್ಟು ಹೋಗುತ್ತಿದ್ದರು. ಇದಕ್ಕೆ ಕಾರಣ ಆ ಪರಿಸರದ ಜನತೆಗೆ ನಮ್ಮಪ್ಪ ಅಮ್ಮನ ಬಗೆಗಿರುವ ಪ್ರೀತಿಗೌರವ. ಎಷ್ಟೋ ಮಂದಿ ನಮ್ಮಪ್ಪನ ಬಗ್ಗೆ "ಮಾಸ್ಟ್ರ ಗುಡ್ಡೆಯರ ಹಾಗಲ್ಲ, ಎಲ್ರಿಗೂ ಆಪಾರ್" (ಗುಡ್ಡೆಯರು ಅಂದ್ರೆ ನನ್ನ ತಂದೆಯ ಹಿರಿಯಣ್ಣ– ಗುಡ್ಡೆ ಮಂಜಯ್ಯ ಶೆಟ್ಟಿ ಕೆ. ಎಲ್. ಜಮೀನ್ದಾರರ ಜೋರು, ರಾಪು, ಎಲ್ಲ ಇದ್ದವರು) ಎಂದು ಹೇಳುತ್ತಿದ್ದುದುಂಟು. ನಮ್ಮಪ್ಪ ಸಾಧು ಸ್ವಭಾವದವರು. ಜಾತಿ, ಮತಗಳ ಭೇದವಿಲ್ಲದೆ ಮನುಷ್ಯ ಸಂಬಂಧಕ್ಕೆ ಒತ್ತು ಕೊಡುತ್ತಿದ್ದವರು. ಅದಕ್ಕೊಂದು ಪುಟ್ಟ ಉದಾಹರಣೆಯನ್ನು ಹೇಳುವುದಾದರೆ, ಒಮ್ಮೆ ವಿಧಾನಸಭೆಯ ಚುನಾವಣೆಯಂದು ಓಟಿಗೆಂದು ಹೊರಟು ನಿಂತ ಅಮ್ಮ 'ಯಾರಿಗೆ ಹಾಕಲಿ' ಎಂದು ಅಪ್ಪನಲ್ಲಿ ಕೇಳಿದಾಗ 'ನಾನು ಮಾಣಿ ಗೋಪಾಲರಿಗೆ ಹಾಕಿ ಬಂದಿದ್ದೆ. ನೀನು ಯಾರಿಗೆ ಬೇಕಾದ್ರೂ ಹಾಕಬಹುದು' ಎಂದರು. ಆ ಮಾತು ಕೇಳಿದ ಕ್ಷಣ ನಮಗೆಲ್ಲ ಆಶ್ಚರ್ಯವಾಯ್ತು. ಮಾಣಿ ಗೋಪಾಲರ ಪ್ರತಿಸ್ಪರ್ಧಿ ಅಭ್ಯರ್ಥಿ ನಮ್ಮಪ್ಪನ ಹತ್ತಿರದ

ಸಂಬಂಧಿ. ಹಾಗಿದ್ರೂ ಮೂರನೆಯ ವ್ಯಕ್ತಿಯಾದ ಅವರಿಗೆ ಯಾಕೆ ಓಟು ಹಾಕಿದ್ದು ಎಂದು ವಿಚಾರಿಸಿದೆವು. ಒಮ್ಮೆ ನಮ್ಮಪ್ಪನಿಗೆ ಸರ್ಕಾರಿ ಆಫೀಸಿನಲ್ಲಿ ಏನೋ ಕೆಲಸವಾಗಬೇಕಾದಾಗ ತಕ್ಷಣ ಮಾಡಿಸಿಕೊಟ್ಟವರು ಮಾಣ ಗೋಪಾಲರಂತೆ. ಅದನ್ನು ಅಪ್ಪ ಮರೆತಿಲ್ಲ. ಹಾಗೆಯೇ ಜಾತಿ, ಮತ, ಮೇಲು, ಕೀಳು ಎಂಬ ಭಾವ ಯಾವತ್ತೂ ಅವರನ್ನು ಭಾದಿಸಿಲ್ಲ. ಹುಟ್ಟಿದಾರಭ್ಯ ಅಂತಹ ವಾತಾವರಣ ನಮ್ಮ ಮನೆಯಲ್ಲಿದ್ದುದರಿಂದಲೇ ಇವತ್ತು ನಮ್ಮೆಲ್ಲರಲ್ಲೂ ಕೋಮು ಸಾಮರಸ್ಯವೆನ್ನುವುದು ಸಹಜವಾಗಿ ಬೆಳೆದುಬಂದಿದೆ.

ನಮ್ಮಪ್ಪನಿಗೆ ಓದುವ ಹುಚ್ಚು ತುಂಬ. ಹೈಸ್ಕೂಲಿನಲ್ಲಿರುವಾಗಲೇ ಕಾರಂತರ ಕೆಲವು ಕಾದಂಬರಿಗಳನ್ನು ಓದಿದ್ದರಂತೆ. ಈಗಲೂ ಕೈಗೆ ಸಿಕ್ಕಿದ ಪುಸ್ತಕಗಳನ್ನು ಓದದೆ ಕೆಳಗಿಡುವುದಿಲ್ಲ. ಹಾಗಾಗಿ ಜನರಲ್ ನಾಲೇಜ್ ಸಾಕಷ್ಟಿದೆ. ನಾವು ಶಾಲೆಗೆ ಹೋಗುತ್ತಿರುವಾಗ ಭಾಷಣ, ಪ್ರಬಂಧಗಳನ್ನು ಚೆನ್ನಾಗಿ ಹೇಳಿಕೊಡುತ್ತಿದ್ದರು. ಇಳಿವಯಸ್ಸಿನಲ್ಲೂ ಮೊಮ್ಮಕ್ಕಳಿಗೆ ಬಣ್ಣಬಣ್ಣದ ಕತೆ ಹೇಳುವುದು, ಸಮಕಾಲೀನ ಘಟನೆಗಳನ್ನು ವಿವರಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಉಮೇದು. ಯಾರೋ ಬರೆದ ಕತೆಗಳಿಗಿಂತ ಬದುಕಿನ ಅನುಭವಗಳನ್ನೆ ರಂಗುರಂಗಾಗಿಸಿ ಒಂದು ಕಲ್ಪನಾಲೋಕವನ್ನೇ ಸೃಷ್ಟಿಸುವ ಕಲೆಗಾರಿಕೆ ಅವರಲ್ಲಿತ್ತು. ಆದ್ದರಿಂದಲೇ ಮೊಮ್ಮಕ್ಕಳಿಗೆ ಅಜ್ಜ ಎಂದರೆ ಪ್ರಾಣ. ನನ್ನ ಕಿರಿಯ ಮಗ ಪಾಪು ಅಂತೂ ಅವರು ಸಾಯುವ ಎರಡು ತಿಂಗಳ ಮುಂಚೆ ಹಾಸಿಗೆ ಹಿಡಿಯುವ ವರೆಗೆ ಅಜ್ಜನ ತೊಡೆಯೇರಿ ಅವರು ಬಣ್ಣಿಸುತ್ತಿದ್ದ ವಿಸ್ಮಯ ಜಗತ್ತಿನಲ್ಲಿ ವಿಹರಿಸುತ್ತಿದ್ದ. ಅವರ ಮಾತು, ಉಚ್ಚಾರ ತುಂಬ ಸ್ಪಷ್ಟ ಮತ್ತು ಶುದ್ಧ. ನೆನಪಿನ ಶಕ್ತಿಯಂತೂ ಹಸಿ ಮಣ್ಣಿನ ಮೇಲೆ ಮೊಳೆ ಹೊಡೆದಂತೆ ಸ್ಥಿರ. ಇತಿಹಾಸದ ಬಗ್ಗೆ ಏನೇ ಸಂದೇಹ ಬಂದು ಅವರಲ್ಲಿ ವಿಚಾರಿಸಿದರೂ ತುದಿ ನಾಲಗೆಯಲ್ಲಿ ಉತ್ತರವಿರುತ್ತಿತ್ತು.

ಬೇರೆಲ್ಲಾ ವಿಷಯದಲ್ಲೂ ತುಂಬ ಉದಾರಿಯಾದ ನಮ್ಮಪ್ಪ ಓದಿನ ವಿಷಯದಲ್ಲಿ ಮಾತ್ರ ತುಂಬ ಸ್ಟ್ರಿಕ್ಟ್. ರಜಾದಿನಗಳಲ್ಲಿ ಅಪ್ಪ ಮನೆಯಲ್ಲಿದ್ದರೆಂದರೆ ನಮಗೆ ಸಜೆಯೇ. ಪುಸ್ತಕ ಹಿಡಿದು ಟೇಬಲ್ ಬಳಿ ಕೂತಿರಲೇಬೇಕು. ಅವರೂ ಯಾವುದಾದರೊಂದು ಪತ್ರಿಕೆಯನ್ನು ಹಿಡಿದು ಕೂರುತ್ತಿದ್ದರು. ಓದಲು ಮನಸ್ಸಿಲ್ಲದ ನನ್ನ ತಂಗಿ, ಹಿರಿಯ ತಮ್ಮ ರಾಜೇಂದ್ರ 'ಎರಡಕ್ಕೆ' ನೆವದಲ್ಲಿ ಆಗಾಗ ಗುಡ್ಡೆಗೆ (ಆಗ ಪಾಯಿಖಾನೆಗಳು ಇರಲಿಲ್ಲ) ಹೋಗಿ ಸಮಯ ತಳ್ಳುತ್ತಿದ್ದರು. ಇತ್ತ ನಮ್ಮಪ್ಪ ಪುಸ್ತಕದೊಳಗೆ ಮುಳುಗಿದರೆಂದರೆ ಬಾಹ್ಯ ಪ್ರಪಂಚದ ಅರಿವೇ ಇರುತ್ತಿರಲಿಲ್ಲ.

ಮಕ್ಕಳು ಚೆನ್ನಾಗಿ ಅಂಕ ಗಳಿಸಿದಾಗ, ಬಹುಮಾನ ಪಡೆದಾಗ ಅಪ್ಪ ಹೆಮ್ಮೆಯಿಂದ ಬೀಗುತ್ತಿದ್ದರು. ಇನ್ನು ನಮ್ಮ ಅರೆಬರೆ ಜ್ಞಾನ ನೋಡಿ ತಮಾಷೆ ಕೂಡಾ ಮಾಡುತ್ತಿದ್ದರು. ಇತ್ತೀಚಿನ ಉದಾಹರಣೆಯೊಂದನ್ನು ಹೇಳುವುದಾದರೆ, ನಾನೊಮ್ಮೆ ಗುಲ್ವಾಡಿಗೆ ಹೋದಾಗ ಮಕ್ಕಳೊಂದಿಗೆ ಇಂಗ್ಲೀಷಿನಲ್ಲಿ ಮಾತಾಡುತ್ತಿದ್ದೆ. ಅದನ್ನು ಗಮನಿಸಿದ ಅಪ್ಪ, "ರೇಖಾ, ನಿಂಗೆ ಇಂಗ್ಲೀಷಲ್ಲಿ ಮಾತಾಡ್ಬೇಕಂತಿದ್ರೆ ಮನೆಯಲ್ಲಿ ಮಾತಾಡ್ಕೊ ಪರ್ವಾಗಿಲ್ಲ. ಆದ್ರೆ ಯಾರಾದ್ರೂ ಇರುವಾಗ ಮಾತಾಡ್ಬೇಡ. ಬೇರೆಯವರು ಇಂಗ್ಲೀಷಲ್ಲಿ ಮಾತಾಡಿದ್ರೂ ನೀನ್ ಕನ್ನಡದಂಗೆ ಮಾತಾಡು. ಯಾಕೆಂದು ಕೇಳಿದ್ರೆ 'ನಾನ್ ಕನ್ನಡ ಎಮ್.ಎ., ಕನ್ನಡವಲ್ಲೆ

ಮಾತಾಡುದು' ಅಂದ್ಕಿಡು. ಎಲ್ಲೂ ನೀನ್ ಕನ್ನಡ ಪ್ರೇಮಿ ಅಂದ್ಕೋತಾರೆಯೇ ಹೊರತೂ ನಿನ್ ಗುಟ್ ಗೊತ್ತಾಗುದಿಲ್ಲ. ಜೊತೆಗೆ ನಿನ್ ಮರ್ಯಾದಿ ಕೂಡಾ ಉಳೀತದೆ" ಎಂದರು. ಆವತ್ತು ನನ್ನ ಇಂಗ್ಲಿಷ್ ನೋಡಿ ಅಪ್ಪ ಪ್ರತಿಕ್ರಿಯಿಸಿದ ರೀತಿ ಅದು. ಅಪ್ಪ ಬಹಳ ತಮಾಷೆಯ ಮನುಷ್ಯ. ತನ್ನನ್ನೂ ಸೇರಿಸಿಕೊಂಡು ಆರೋಗ್ಯಕರ ವಿಡಂಬನೆ ಮಾಡುವುದು ಅವರ ಸಹಜ ಗುಣ.

ಮೇಸ್ಟ್ರ ಆಗಿರುವ ನಮ್ಮಪ್ಪನಿಗೆ ವಿದ್ಯಾರ್ಥಿಗಳ ಬಗ್ಗೆ ತುಂಬ ಕಾಳಜಿ. ಅವರಲ್ಲೂ ಕಲಿಯುವ ಮನಸ್ಸಿರುವವರ ಬಗ್ಗೆ ವಿಶೇಷ ಮುತುವರ್ಜಿ. ವಿದ್ಯೆಯ ಮಹತ್ವ ಗೊತ್ತಿಲ್ಲದ ಎಷ್ಟೋ ಹೆತ್ತವರಿಗೆ ತಿಳಿಹೇಳಿ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ತೀರಾ ಬಡತನದಲ್ಲಿ ಅರ್ಧಕ್ಕೆ ಶಾಲೆ ನಿಲ್ಲಿಸುವ ಮಕ್ಕಳಲ್ಲಿ ಸ್ವಲ್ಪ ಜಾಣರಿದ್ದರೂ ಸ್ನೇಹಿತರಿಂದ ಹಣ ಕಲೆ ಹಾಕಿ, ತನ್ನದನ್ನೂ ಸ್ವಲ್ಪ ಸೇರಿಸಿ ಅವರ ಶಿಕ್ಷಣಕ್ಕೆ ನೆರವಾಗುತ್ತಿದ್ದರು. ನಮ್ಮಪ್ಪನ ಪ್ರೇರಣೆ ಹಾಗೂ ಬಲವಂತದಿಂದಲೇ ಓದಿ ಇಂದು ಒಳ್ಳೆಯ ನೌಕರಿ ಹಿಡಿದಿರುವ ಹಲವರು ಇಲ್ಲೆ ಸುತ್ತಮುತ್ತ ಇದ್ದಾರೆ.

ನಮ್ಮಪ್ಪ ಅಮ್ಮನ ಬದುಕಿನಲ್ಲಿ ದೊಡ್ಡ ಹೊಡೆತವೆಂದರೆ ಬೆಳೆದು ನಿಂತ ಹಿರಿಯ ಮಗ ರಾಜೇಂದ್ರ ಹೊಳೆಗೆ ಈಜಲು ಹೋಗಿ ಆಕಸ್ಮಿಕವಾಗಿ ಪ್ರಾಣ ಕಳೆದುಕೊಂಡಿದ್ದು. ಗಂಡು ಬೇಕು, ಗಂಡು ಬೇಕು ಎಂದು ಸಾಲಾಗಿ ಮೂರು ಹೆಣ್ಣಾದರೂ ಕಾದು ಪಡೆದ ಮಗ ಕೊನೆಗೂ ದಕ್ಕದೆ ಹೋದ. ಆತ ಒಳ್ಳೆಯ ಕ್ರೀಡಾಪಟು, ಎನ್.ಸಿ.ಸಿ.ಯಲ್ಲೂ ಕ್ರಿಯಾಶೀಲನಾಗಿ ಬಹು ಬೇಗ ಗುರುತಿಸಿಲ್ಪಟ್ಟವ. ಸ್ನೇಹಜೀವಿಯಾದ ಆತ ಸಹಪಾಠಿಗಳಿಗಷ್ಟೇ ಅಲ್ಲದೆ ಮೇಸ್ಟ್ರ ವರ್ಗಕ್ಕೂ ಪ್ರೀತಿಪಾತ್ರನಾಗಿದ್ದ.

ಹೀಗೆ ಬದುಕಿನುದ್ದಕ್ಕೂ ಹಲವು ಏಳು ಬೀಳುಗಳನ್ನು ಕಂಡ ನಮ್ಮಪ್ಪ ತನ್ನ ೭೧ ನೆಯ ವಯಸ್ಸಿಗೆ ಅಂದರೆ ಕಳೆದ ಆರು ವರ್ಷದ ಹಿಂದೆ ತೀರಿಕೊಂಡರು. ಇವತ್ತು ಮನೆಗೆ ಹೋದರೆ ಅಪ್ಪನ ಜಾಗವೆಲ್ಲ ಖಾಲಿ ಖಾಲಿ. ಅಲ್ಲಿ ಉಳಿದಿರುವುದು ನೆನಪುಗಳು ಮಾತ್ರ. ಆ ನೆನಪುಗಳು ಕೊರತೆಯಾಗಿ ನಮ್ಮನ್ನು ಬಾಧಿಸದಂತೆ, ಅಮ್ಮ ೭೨ ಈ ವಯಸ್ಸಲ್ಲೂ ತಾಯ್ತನದ ಕಾಳಜಿಯನ್ನು ಜತನದಿಂದ ನಿರ್ವಹಿಸುತ್ತಿದ್ದಾಳೆ. ಮಕ್ಕಳು, ಮೊಮ್ಮಕ್ಕಳು ಮನೆಗೆ ಬಂದರೆ ಹಕ್ಕಿಯಂತೆ ಸಂಭ್ರಮಿಸುತ್ತಾ ಅವರ ಬೇಕು ಬೇಡಗಳನ್ನು ನಿರಾಯಾಸವಾಗಿ ಪೂರೈಸುತ್ತಿರುವ ಅಮ್ಮನನ್ನು ಕಂಡಾಗ 'ಪ್ರತಿಯೊಬ್ಬ ತಾಯಿಯಲ್ಲೂ ದೇವರ ಅಂಶ ಇರುತ್ತದೆ' ಎಂಬ ಹಿರಿಯರ ಮಾತು ನೂರಕ್ಕೆ ನೂರು ಸತ್ಯ ಎಂದೆನಿಸುತ್ತದೆ. ಅವಕಾಶವಿದ್ದರೂ ಉನ್ನತ ಶಿಕ್ಷಣವನ್ನು ಪಡೆಯದ ತನ್ನ ಬೇಜವಾಬ್ದಾರಿತನ ತನ್ನ ಮಕ್ಕಳಲ್ಲಿ ಪ್ರತಿಫಲನವಾಗದಂತೆ ಬಹು ಎಚ್ಚರಿಕೆಯಿಂದ ಶಿಕ್ಷಣವನ್ನಿತ್ತು ನಮ್ಮ ನಾಲ್ವರಿಗೂ ನೆಲೆ ತೋರಿದ ಅಪ್ಪ, ರೆಕ್ಕೆ ಪುಕ್ಕ ಬಲಿತ ಮೇಲೂ ಕೈತುತ್ತಿನೊಂದಿಗೆ ಬೊಗಸೆ ತುಂಬ ವಾತ್ಸಲ್ಯವನ್ನು ಉಣಬಡಿಸುವ ಅಮ್ಮ– ಅವರನ್ನು ಪಡೆದ ನಾವೇ ಧನ್ಯರು.

❖ ರೇಖಾ ವಿ. ಬನ್ನಾಡಿ :
'ತಿಂಗಳ ಬೆಳಕು', ಜೆ.ಎಲ್.ಬಿ. ರಸ್ತೆ, ವಡೇರಹೋಬಳಿ, ಕುಂದಾಪುರ - ೫೭೬ ೨೦೧ ❖

ದ್ರಾವಿಡ ಸಂಬಂಧ -೯

— ಷ. ಶೆಟ್ಟರ್

ಶಂಗಂ ಸಾಹಿತ್ಯಕ್ಕೆ ಕನ್ನಡ ನಾಡಿನ ಕವಿಗಳ ಕೊಡುಗೆ

ಶಂಗಂ ಸಾಹಿತ್ಯ ಮತ್ತು ದ್ರಾವಿಡ ಸಂಬಂಧದ ಈ ಸಮೀಕ್ಷೆಯಿಂದ ಹೊರಹೊಮ್ಮುವ ಕೆಲವು ಪ್ರಮುಖ ಅಂಶಗಳನ್ನು ಸಂಗ್ರಹಿಸಿ ಇಲ್ಲಿ ಕೊಡಬಹುದು. ಇವುಗಳಲ್ಲಿ ಮೊದಲಿನದು ಶಂಗಂ ಕಾಲ ಮತ್ತು ಕೇಂದ್ರಕ್ಕೆ ಸಂಬಂಧಿಸಿದ್ದು.

ಶಂಗಂ ಕಾಲ:

ಶಂಗಂ ಸಾಹಿತ್ಯದ ಆರಾಧಕರು ಇದರ ಕಾಲವನ್ನು ಕ್ರಿ.ಪೂ. ೫ ರಿಂದ ಪ್ರಾರಂಭಿಸಿ ಕ್ರಿ.ಶ. ೫ ರ ವರೆಗೂ ವಿಸ್ತರಿಸಿರುವರು. ಅಂದರೆ ಇದರ ಪರಮಾವಧಿ ಸುಮಾರು ಒಂದು ಸಹಸ್ರ ವರ್ಷ. ಐತಿಹ್ಯವನ್ನು ಹೊರತುಪಡಿಸಿ, ಶಂಗಂ ಕಾಲದ ಆರಂಭವನ್ನು ಕ್ರಿ.ಪೂ. ೫ನೆಯ ಶತಮಾನಕ್ಕೆ ಕೊಂಡೊಯ್ಯಲು ಈ ಸಾಹಿತ್ಯದಲ್ಲಿ ಪುಷ್ಟಿ ದೊರೆಯುವುದಿಲ್ಲ. ಆಂತರಿಕ ಮಾಹಿತಿಯೊದಗಿಸುವ ಅತ್ಯಂತ ಪೂರ್ವಕಾಲದ ಐತಿಹಾಸಿಕ ಘಟನೆಗಳೆಂದರೆ ನಂದ ಮತ್ತು ಮೌರ್ಯರ ಉಲ್ಲೇಖಗಳು. ನಂದರ ಅಪಾರ ಸಂಪತ್ತಿನ ಆನುಷಂಗಿಕ ಉಲ್ಲೇಖ ಅವರನ್ನು ತಮಿಳಗಂನೊಡನೆ ನೇರವಾಗಿ ಪ್ರಸ್ತುತಗೊಳಿಸಲು ಸಹಕಾರಿಯಾಗುವುದಿಲ್ಲ; ಕಾಲಾನಂತರದ ಕವಿಯೊಬ್ಬ[೧] ಬಹುಕಾಲದ ಹಿಂದೆ ಸಂಭವಿಸಿತ್ತೆನ್ನಲಾದ ಒಂದು ಐತಿಹ್ಯವನ್ನು ಸ್ಮರಿಸಿಕೊಳ್ಳುವನು ಮಾತ್ರ. ಇದೇ ಕವಿ ಕೊಡುವ ಮೌರ್ಯರ ವಿವರಗಳನ್ನು ತಮಿಳಗಂನೊಡನೆ ಪ್ರಸ್ತುತಗೊಳಿಸಲು ಸ್ವಲ್ಪ ಮಟ್ಟಿಗೆ ಸಾಧ್ಯ, ಆದರೆ ಇಲ್ಲಿ ಕೂಡ ಕೆಲವು ತೊಡಕುಗಳಿವೆ.

ಶಂಗಂ ಸಾಹಿತ್ಯದಲ್ಲಿ ಮೌರ್ಯರನ್ನು 'ಮೊರಿಯ' ಮತ್ತು 'ವಂಬಮೊರಿಯ' ಎಂಬ ಎರಡು ಪದಗಳಿಂದ ಉಲ್ಲೇಖಿಸಲಾಗಿರುವುದನ್ನು ಮತ್ತು 'ವಂಬ' ಪದದ ವಿಶಿಷ್ಟ ಅರ್ಥವನ್ನು ಈಗಾಗಲೇ ಗಮನಿಸಲಾಗಿದೆ. ಮೌರ್ಯರು ದಕ್ಷಿಣದ ದಂಡಯಾತ್ರೆ ಕೈಕೊಂಡಾಗ ಅವರ ಸೇನೆಯ ಮುಂಚೂಣಿಯಲ್ಲಿ ನಿಂತು, ಸಹಾಯ ಮಾಡಿದ ವಡುಗರ ಮತ್ತು ಮೋಹೂರ್‌ರನ್ನು ಶರಣಾಗತಿಗೊಳಿಸಿಕೊಳ್ಳಲು ಕೋಶರರು ಮುನ್ನುಗ್ಗಿದಾಗ, ಕೋಶರರ ಸಹಾಯಕ್ಕೆ ಬಂದ ವಂಬಮೊರಿಯರ ಉಲ್ಲೇಖಗಳು ಇಲ್ಲಿ ಗಮನಾರ್ಹ.[೨] ಆದರೆ ಈ ಘಟನೆಗಳು ಸಂಭವಿಸಿದ ಕಾಲದ ಬಗ್ಗೆ ಅನಿಶ್ಚಿತತೆ ಇದೆ. ಕಳಿಂಗವನ್ನು ಅಶೋಕ ಗೆದ್ದುಕೊಂಡ ನಂತರ ಅವನು ಯುದ್ಧಯಾತ್ರೆಯನ್ನು ಮುಕ್ತಾಯ ಮಾಡಿದನೆಂಬುದರ ಹಿನ್ನೆಲೆಯಲ್ಲಿ ಇದನ್ನು ನೋಡಿದರೆ, ಇದು ಅಶೋಕನ ಕಾಲಾನಂತರ ನಡೆದಿರಬಹುದಾದ ಘಟನೆಯಾಗಿರಬಹುದೆನಿಸುವುದು. ಅಂದರೆ, ಕ್ರಿ.ಪೂ. ೨ನೆಯ ಶತಮಾನದಿಂದೀಚೆಗೆ ಮೌರ್ಯ ಹೆಸರನ್ನು ಉಳಿಸಿಕೊಂಡು ದಕ್ಷಿಣದಲ್ಲಿ ಆಳ್ವಿಕೆಯನ್ನು ಮುಂದುವರಿಸಿದ, 'ನವ ಮೌರ್ಯ'ರ ಕಾಲದ್ದೆಂದು ಬಗೆಯಬೇಕಾಗುವುದು. ಒಂದು ವೇಳೆ ಅಶೋಕ 'ಸುವರ್ಣಗಿರಿ'ಯಲ್ಲಿ ದಕ್ಷಿಣದ ರಾಜಧಾನಿಯನ್ನು ನಿರ್ಮಿಸಿ, ಆರ್ಯಪುತ್ರನನ್ನು ಅಧಿಕಾರಕ್ಕೆ ತಂದು, ತನ್ನ ಗಡಿಯನ್ನು ಭದ್ರಪಡಿಸಿಕೊಳ್ಳಲು 'ಇಸಿಲ'ದಲ್ಲಿ ಕೋಟೆಯೊಂದನ್ನು ಕಟ್ಟಿ, ಅಲ್ಲಿಂದ 'ತಮಿಳಗಂ'

ಗಡಿಯ ಮೇಲೆ ಕಣ್ಣಿಟ್ಟು, ತಮಿಳೇತರ ಶಕ್ತಿಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಪ್ರಯತ್ನಿಸಿದ್ದರೆ, ಇದರ ಕಾಲವನ್ನು ಕ್ರಿ.ಪೂ. ೩ನೆಯ ಶತಮಾನದ ಕೊನೆಗೆ ಕೊಂಡೊಯ್ಯಬಹುದೆನಿಸುವುದು. ಮೌರ್ಯರಿಗೆ ಸಂಬಂಧಿಸಿದ ಈ ಐತಿಹಾಸಿಕ ಘಟನೆಗಳ ಉಲ್ಲೇಖಗಳಷ್ಟೇ ಮಹತ್ವವಾದದ್ದು, ಇವನ್ನು ನೆನಪಿಸಿಕೊಡುವ ಕವಿಗಳ ಕಾಲ. ನಂದ ಮತ್ತು ಮೌರ್ಯರಿಗೆ ಸಂಬಂಧಿಸಿದ ಘಟನೆಗಳನ್ನು ಸ್ಮರಿಸಿರುವ ಮಾಮೂಲನಾರ್ ಕಾಲವನ್ನು ನಿರ್ಧರಿಸುವುದು ಕಷ್ಟ, ಆದರೆ ಆತನು ಕ್ರಿಸ್ತ ಶಕೆಯ ಆರಂಭದ ಶತಕಗಳಲ್ಲಿದ್ದನೆಂಬ ಅನುಮಾನವಿದೆ.

ಸಂಗಂ ಸಾಹಿತ್ಯ ಕೃಷಿಯು ಕ್ರಿ.ಶ. ೫ನೆಯ ಶತಮಾನದ ವರೆಗೆ ಮುಂದುವರಿಯಿತೆನ್ನಲೂ ನಿರ್ದಿಷ್ಟ ಆಧಾರಗಳು ದೊರಕುವುದಿಲ್ಲ. ಕ್ರಿ.ಶ. ೩ನೆಯ ಶತಮಾನದ ನಂತರ ಮೂವೇಂದಾರರ ಆಳ್ವಿಕೆ ಅಂತ್ಯಗೊಂಡು, ಕಳಭ್ರ ದಾಳಿ ಆರಂಭವಾಗಿ, ತಮಿಳಗಂ ಅಂಧಕಾರದಲ್ಲಿ ಬಿತ್ತೆಂಬ ಸಾರ್ವತ್ರಿಕ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಪರಾಮರ್ಶಿಸಿದರೆ, ೩ನೆಯ ಶತಮಾನದ ನಂತರ ಸಂಗಂ ಕವಿಗಳಿಗೆ ಪೋಷಣೆ ಒದಗಿಸುವ ಹಿರಿಕಿರಿಯ ರಾಜಮನೆತನಗಳೇ ಅಲ್ಲಿ ಉಳಿದಿರಲಿಲ್ಲವೆಂದು ತೀರ್ಮಾನಿಸಬೇಕಾಗುವುದು. ಆದರೆ ಈ ಬಗೆಯ ಪೋಷಣೆಯನ್ನು ಆಶ್ರಯಿಸದೆ ರಚನೆಯಾದ ತಮಿಳು ಮಹಾಕಾವ್ಯಗಳು ಮತ್ತು ಭಕ್ತಿಕಾವ್ಯಗಳು ಈ ಕಾಲಾನಂತರದಲ್ಲಿ ಬಂದ ಬಗ್ಗೆ ಅನುಮಾನವಿಲ್ಲ.

ಈ ಹಿನ್ನೆಲೆಯಲ್ಲಿ ಸಂಗಂ ಸಾಹಿತ್ಯದ ಉಚ್ಛ್ರಾಯ ಹಂತವನ್ನು ಕ್ರಿಸ್ತಶಕೆಯ ಹೊರಳಿನ ಒಂದೆರಡು ಶತಮಾನಗಳಿಗೆ (ಅಂದರೆ ಕ್ರಿ.ಪೂ. ೨ ರಿಂದ ಕ್ರಿ.ಶ. ೨(೩?)ಕ್ಕೆ ಸೀಮಿತಗೊಳಿಸುವುದು ಸಮಂಜಸವೆನಿಸುವುದು. ತಮಿಳುನಾಡಿನ ಇತ್ತೀಚಿನ ಸಂಶೋಧಕರು ಇದನ್ನು ಅಂಗೀಕರಿಸಲು ಒಲವು ತೋರಿರುವರು.

ಶಂಗಂ ಕೇಂದ್ರ:

ಇನ್ನು ವೈಗೈ ನದೀ ದಡದ ಪಾಂಡ್ಯ ರಾಜಧಾನಿಯಾದ ಮದುರೈ ಶಂಗಂ ಕೇಂದ್ರವಾಗಿತ್ತು ಮತ್ತು ಪಾಂಡ್ಯರಾಜನು ಈ ಸಾಹಿತ್ಯದ ಪ್ರಧಾನ ಪೋಷಕರಾಗಿದ್ದರು ಎಂಬುದರ ಬಗ್ಗೆ, ಸಂಗಂ ಸಾಹಿತ್ಯಕ್ಕೆ ಪಾಂಡ್ಯರ ಪೋಷಣೆ ದೊರಕಿದುದರಲ್ಲಿ ಅನುಮಾನವಿಲ್ಲ, ಆದರೆ ಅದೆಲ್ಲವೂ ಈ ಅರಸುಮನೆತನದ ಕಾಣಿಕೆ ಎನ್ನಲಾಗದು. ಪುರನಾನೂರಿನ ಕವನಗಳ ಅಂಕೆ-ಸಂಖ್ಯೆಗಳಿಂದ ಇದನ್ನು ಸಾಧಿಸಿ ತೋರಿಸಬಹುದು. ಈ ಸಂಕಲನದಲ್ಲಿ ಮೂವೇಂದಾರರನ್ನು ಶ್ಲಾಘಿಸಿ ರಚಿಸಿದ ಸುಮಾರು ೧೩೮ ಕವನಗಳಲ್ಲಿ ೩೯ ಕವಿಗಳು ೭೪ ಕವನಗಳನ್ನು ಚೋಳರನ್ನು ಕುರಿತು, ೨೨ ಕವಿಗಳು ೩೭ ಕವನಗಳನ್ನು ಪಾಂಡ್ಯರನ್ನು ಕುರಿತು, ೨೭ ಕವಿಗಳು ೨೭ ಕವನಗಳನ್ನು ಚೇರರನ್ನು ಕುರಿತು ರಚಿಸಿದವುಗಳಾಗಿವೆ. ಇದಕ್ಕೆ ಭಿನ್ನವಾಗಿ ಚಿತ್ರರಸರನ್ನು (ಸಾಮಂತ ನಾಯಕರನ್ನು) ಕುರಿತು ೪೪ ಕವಿಗಳು ರಚಿಸಿದ ಒಟ್ಟು ಕವಿತೆಗಳ ಸಂಖ್ಯೆ ೧೪೧.

ಅಂದರೆ ಸಂಗಂ ಸಾಹಿತ್ಯ ಬೆಳೆಯಲು ಪಾಂಡ್ಯ(ಅದರಂತೆ ಚೋಳ, ಚೇರ)ರಿಗಿಂತ ಹೆಚ್ಚು ಕಾರಣರಾದವರು ಸ್ವತಂತ್ರವಾಗಿ ಆಳುತ್ತಿದ್ದ ಚಿಕ್ಕಪುಟ್ಟ ಅರಸು ಮನೆತನಗಳು ಎಂದಂತಾಯಿತು. ಈ ಸ್ವತಂತ್ರ ಅಥವಾ ಸಾಮಂತ ರಾಜಮನೆತನಗಳು ತಮಿಳಗಂ ಒಳಗೂ ಮತ್ತು ಹೊರಗೂ ಹಂಚಿಕೊಂಡಿದ್ದವು. ಅಂಥ ಹೊರಗಿನ ಶಕ್ತಿಗಳೆಲ್ಲವೂ ತಮಿಳಗಂ ಉತ್ತರದಲ್ಲಿ ಕೇಂದ್ರೀಕೃತ

ವಾಗಿದ್ದು, ನೀಲಗಿರಿ ಬೆಟ್ಟಸಾಲಿನಿಂದೀಚೆಗೆ, ಅಂದರೆ ಪಶ್ಚಿಮ ಕರಾವಳಿಯಿಂದ ಆರಂಭಗೊಂಡು ವೇಂಕಟಾದ್ರಿ ಪರಿಸರದ ಪ್ರದೇಶವನ್ನು ತಲುಪಿದ್ದವು.

ಮೂರು ವಡುಗ ವಲಯಗಳು :

ತಮಿಳಗಂ ಉತ್ತರಕ್ಕಿದ್ದ ಎಲ್ಲ ಸ್ವತಂತ್ರ ಮತ್ತು ಸಾಮಂತ ರಾಜ್ಯಗಳ ಪಟ್ಟಿಯನ್ನು ಮಾಡುವುದು ಪ್ರಯಾಸದಾಯಕ, ಆದರೆ ಅವನ್ನು ಮೂರು ಸ್ಥೂಲ ಪ್ರಾದೇಶಿಕ ವರ್ಗಗಳಡಿ ತರಬಹುದೆನಿಸುವುದು. ಒಂದು, ವೇಂಕಟಾದ್ರಿಯ ಸುತ್ತಮುತ್ತಲಿನ ಆಂಧ್ರಪ್ರದೇಶ. ಇಲ್ಲಿಯ ಒಂದು ರಾಜ್ಯವನ್ನು ತೊಂಡೈಯರ್‌ದೆಂದು ಗುರುತಿಸಲಾಗಿದ್ದು, ಈ ಬೆಟ್ಟಸಾಲಿನಾಚೆಗಿದ್ದ ಪ್ರದೇಶವು ವಡುಗರದ್ದಾಗಿತ್ತೆಂದು ಸ್ಪಷ್ಟಪಡಿಸಲಾಗಿದೆ. ಕಳವರ ಅಧಿಪತಿಯಾದ ಪುಲ್ಲಿ ಎಂಬವನು ವೇಂಕಟದ ಅಧಿಪತಿಯಾಗಿದ್ದನು; ಹಾಡುಗಾರರಿಗೆ ಮತ್ತು ಹೊರನಾಡವರಿಗೆ ಇವನು ಕೊಟ್ಟ ಉದಾರ ಕೊಡುಗೆಗಳಿಂದ ಅವರ ಪ್ರೀತಿಗೆ ಪಾತ್ರನಾಗಿದ್ದನು.[೪] ಕವಿ ನಣ್ಣಾಕಣಾರ್ ವೇಂಕಟ ಪ್ರದೇಶದ ನಾಯಕರೂ ತನ್ನ ಪೋಷಕರೂ ಆದ ಓಯ್ಮಾನ್‌ನಲ್ಲಿಯಕ್ಕೋಟಣ್, ವಿಲ್ಲಿಯಾಣರ್ ಮತ್ತು ಕರುಂಪಣುರ್‌ಕ್ಕಿಳ್ಳಿಣರ್ ಎಂಬವರನ್ನು ಹೆಸರಿಸಿ, ಅವರ ಉದಾರ ಗುಣವನ್ನು ಮುಕ್ತ ಕಂಠದಿಂದ ಪ್ರಶಂಸಿರುವನು.[೫] ಇವನು ತಮಿಳಗಂ ಉತ್ತರಕ್ಕಿದ್ದ ಪ್ರದೇಶದಿಂದ ಬಂದವರ ವಂಶಜನಾಗಿದ್ದನೆಂಬುದು ಒಮ್ಮತದ ಅಭಿಪ್ರಾಯ.[೬] ವಣ್ಣಾಕಣಾರ್ ರಚಿಸಿದ ಒಂದು ಕವನವನ್ನು (ಪ.ಸಂ.೧). ಅಲ್ಲದೆ ವೇಂಗಡವನ್ನು ಮತ್ತು ಅದರ ಅಧಿಪತಿಯಾದ ಆಟಣುಂಕಣನನ್ನು ಪರಿಚಯಿಸುವ ಕಳ್ಳಿಲ್ ಅತ್ತಿರೈಯಣಾರ್‌ನ ಒಂದು ಕವನವನ್ನು (ಪ.ಸಂ.೨) ಇಲ್ಲಿ ನಿದರ್ಶಿಸಿರುವೆ. ಈ ಪ್ರದೇಶವು ಆಂಧ್ರಕ್ಕೆ ಹೆಚ್ಚು ಪ್ರಸ್ತುತವಾಗಿರುವುದರಿಂದ ಅದರ ಚರ್ಚೆಯನ್ನು ನಾನಿಲ್ಲಿ ವಿಸ್ತರಿಸಿಲ್ಲ.

ವೇಂಗಡ ವಲಯ ಮತ್ತು ಕನ್ನಡ ನಾಡಿನ ನಡುವೆ ಇದ್ದ ವಡುಗ ಪ್ರದೇಶವನ್ನು ಶಂಗಂಪೋತ್ತರ ಕಾಲದ ತಮಿಳು ಶಾಸನಗಳಲ್ಲಿ 'ಪೆರುಂಬಾಣಪಾಡಿ' ಎಂದೂ ಕರ್ನಾಟಕದ ತಾಳಗುಂದ ಶಾಸನದಲ್ಲಿ 'ಬೃಹದ್ಬಾಣ' ರಾಜ್ಯವೆಂದೂ ಗುರುತಿಸಲಾಗಿದೆ. ನಂತರ ಇದನ್ನು 'ವಟುಕವಟಿ-೧೨೦೦' ಮತ್ತು 'ವಟುಕವಟಿಮೇರ‍್ಕು' ಎಂದು ಕರೆಯಲಾಯಿತು. ಕವಿ ಮಾಮೂಲನಾರ್ ಈ ಪ್ರದೇಶವನ್ನು '*ತಮಿಳ್‌ಕೆಟು ಮೂವರ್‌ಕಾಕ್ಕಮ್ ಮೊಳಿಪೆಯರ್ ದೇಯಂ*' ಅಥವಾ 'ಮೂವರು ನಾಯಕರು ಆಳುವ ತಮಿಳು ಅಪಭ್ರಂಶ ಭಾಷಾವಲಯ'ವೆಂದು ಕರೆದಿರುವನು. ಮಹಬಲಿ ವಂಶದ ನಾಯಕರು ಕರ್ನಾಟಕದ ನಂದಿದುರ್ಗದವರೆಗೂ ಆಳುತ್ತಿದ್ದರೆಂದು ತಮಿಳು ಕೃತಿ '*ಯಾಪ್ಪರುಂಗಲಮ್*' ತಿಳಿಸುವುದು.[೭] ಬಾಣವಾಡಿಯೆಂದು ಹೆಸರು ಪಡೆದುಕೊಂಡ, ಆಂಧ್ರ-ಕರ್ನಾಟಕವನ್ನು ಬೆಸೆದ, ತಮಿಳಗಂ ಹೊರಗೆ ವಡುಗರ ವಶದಲ್ಲಿದ್ದ ಪ್ರದೇಶ ಇದಾಗಿತ್ತೆಂಬುದು ಇದರಿಂದ ಸ್ಪಷ್ಟಗೊಳ್ಳುವುದು. ವಡುಗ ಪೂರ್ವ ಪ್ರತ್ಯಯ ಹೆಸರಿನ ಕವಿಗಳಲ್ಲಿ ಕೆಲವರು ಈ ವಲಯದವರಾಗಿರಲು ಸಾಧ್ಯ.

ಇನ್ನು ಮೂರನೆಯ ವಲಯವೆಂದರೆ ಇಂದಿನ ದಕ್ಷಿಣ ಕರ್ನಾಟಕ. ಸ್ಥೂಲವಾಗಿ ಇದನ್ನು ನೀಲಗಿರಿಯ ಉತ್ತರಕ್ಕಿದ್ದ, ಪಶ್ಚಿಮ ಕಡಲ ತೀರದಿಂದ ಪೂರ್ವ ಮತ್ತು ಪೂರ್ವೋತ್ತರಕ್ಕೆ ಹಬ್ಬಿದ್ದ ಪ್ರದೇಶದೊಂದಿಗೆ ಗುರುತಿಸಬಹುದು. ಇದರ ಕೇಂದ್ರ, ಕಾವೇರೀ-ಕಬನೀ ಪ್ರದೇಶ. ಶಂಗಂ ಕಾಲದಲ್ಲಿ ಇದನ್ನು ಹಂಚಿಕೊಂಡು ಆಳಿದ ನಾಯಕರಲ್ಲಿ ಪ್ರಮುಖರು, ಎರುಮೈ ಊರವರು, ಪುನ್ನಾಟರು, ಕೋಶರರು, ಮೋಹೂರರು, ಕೊಂಕಾಣರು,

ತುಳುವರು, ಅಲ್ಲದೆ ಕದಂಬರು. ಇವರೆಲ್ಲರನ್ನು ಎರಡು ವರ್ಗಗಳಡಿ ತರಬಹುದು: ಒಂದು, ತಮಿಳಗಂನೊಡನೆ ಒಂದಲ್ಲೊಂದು ಬಗೆಯಲ್ಲಿ ಸಂಪರ್ಕವಿರಿಸಿಕೊಂಡು, ತಮಿಳು ಭಾಷೆಯಲ್ಲಿ ವ್ಯವಹರಿಸಿದ್ದಲ್ಲದೆ, ಸಂಗಂ ಸಾಹಿತ್ಯಕ್ಕೆ ತಮ್ಮ ಪ್ರದೇಶದ ಕವಿಗಳಿಂದ ಕಾಣಿಕೆ ಸಲ್ಲಿಸಿದವರದ್ದು; ಎರಡು, ಅಂದಿನ ತಮಿಳಗಂ ರಾಜ್ಯಗಳೊಡನೆ ಸದಾ ಹೋರಾಡುತ್ತಾ, ತಮಿಳು ಭಾಷೆಯನ್ನು ಬಳಸದೇ, ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡವರದ್ದು. ತಮಿಳರೊಡನೆ ಸ್ಪಂದಿಸಿದ ಮೊದಲ ವರ್ಗದ ಅರಸರು, ತಮಿಳಗಂ ಅಂಗವಾಗಿರಲಿಲ್ಲ, ಆದರೆ ತಮಿಳು 'ಮಿಲ್ಲೂ'ವಿನಲ್ಲಿ ಗುರುತಿಸಿಕೊಂಡವರಾಗಿದ್ದರೆನ್ನಬಹುದು. ಇಂಥವರಲ್ಲಿ ಎರುಮೈ ಊರವರು, ಕೊಂಕಾಣರು, ಕೋಶರರು ಪ್ರಮುಖರು. ತಮಿಳರ ವಿರುದ್ಧ ಸದಾ ಹೋರಾಡಿ ತಮಿಳು ಭಾಷಾ ಪ್ರಭಾವಕ್ಕೆ ಒಳಗಾಗದ ಎರಡನೆಯ ವರ್ಗದವರಲ್ಲಿ ಎದ್ದು ಕಾಣುವಂಥವರು, ಪುನ್ನಾಟರು, ಕದಂಬರು ಮತ್ತು ಮೋಹೂರರು.

ವಡುಗ ವಲಯದ ಕವಿಗಳು :

ಸಂಗಂ ಸಾಹಿತ್ಯಕ್ಕೆ ಕಾಣಿಕೆಯನ್ನಿತ್ತ ತಮಿಳಗಂ ಉತ್ತರ ವಲಯದ ಕವಿಗಳನ್ನೂ ನಾಲ್ಕು ವರ್ಗಗಳಡಿಯಲ್ಲಿ ತರಬಹುದೇನೋ. ಇವರಲ್ಲಿ ಮೊದಲನೆಯ ವರ್ಗದವರು, ಕಾಲಕಾಲಕ್ಕೆ ನೆಲೆನಿಂತ ಅಥವಾ ಕಾಲಕಾಲಕ್ಕೆ ಇವರನ್ನು ಪೋಷಿಸಿದ 'ರಾಜರು'ಗಳನ್ನು ಕುರಿತು ಬರೆದ ಕವಿಗಳು. ಎರಡನೆಯವರು, ತಮ್ಮ ಹೆಸರಿನಲ್ಲಿ ತಮ್ಮ (ವಂಶಜರ) ಪ್ರದೇಶವನ್ನು ಪ್ರಕಟಿಸಿದವರು. ಇವರಲ್ಲಿ 'ವಡುಗ' ('ವಟುಕ', 'ವಡವರ', ಮುಂತಾದ) ಪೂರ್ವಪ್ರತ್ಯಯ ಹೊಂದಿದವರು ಗಮನಾರ್ಹರು. ಮೂರನೆಯವರು, ವಡುಗನಾಡಿನ ವ್ಯಕ್ತಿಗಳನ್ನು (ಉದಾ. ನಣ್ಣನ್), ಅರಸು ಮನೆತನಗಳನ್ನು (ಉದಾ. ಕೋಶರ್, ಮೋಹೂರ್,) ಅಥವಾ ಪ್ರದೇಶವನ್ನು (ಉದಾ. ಕೊಂಕಾಣ, ಎರುಮೈಊರ್) ಉಲ್ಲೇಖಿಸುವ ಕವಿಗಳು. ನಾಲ್ಕನೆಯವರು, ಈ ಮೂರು ವರ್ಗಕ್ಕೆ ಸೇರದ, ಆದರೆ ತಮ್ಮ ಪೋಷಕರನ್ನು ಕೀರ್ತಿಸುವಾಗ ಆನುಷಂಗಿಕವಾಗಿ (ಉದಾ. ಕದಂಬ, ಪುನ್ನಾಟ, ಕಂಗ [ಗಂಗ] ಮೊದಲಾದ) ಉತ್ತರ ನಾಡಿನ ಶತ್ರುಶಕ್ತಿಗಳನ್ನು ಉಲ್ಲೇಖಿಸುವ ಕವಿಗಳು.

'ವಡುಗ' ಹೆಸರಿನ ಕವಿಗಳು ರಚಿಸಿರುವ ಒಂದು ಡಜನ್ ಕವನಗಳನ್ನಿಲ್ಲಿ ಪರಿಚಯಿಸಲು ಪ್ರಯತ್ನಿಸಿರುವೆ. ಇವುಗಳಲ್ಲಿ ವಡನೆಡುತತ್ತನಾರ್ (ಪ.ಸಂ.೩), ವಡಮುವಣ್ಣಕ್ಕನ್ (ಪ.ಸಂ.೪-೭), ವಡಮುವಣ್ಣಕ್ಕನ್‌ಪೇರಿಸಾತ್ತನಾರ್ (ಪ.ಸಂ.೮-೯), ವಡುಮಂತಾಮೋತರನ್ (ಪ.ಸಂ.೧೦) ಮತ್ತು ವಡಮೋತಂಕಿಳಾರ್ (ಪ.ಸಂ.೧೧-೧೨) ಎಂಬ ಐವರು ಕವಿಗಳು ಸೇರಿರುವರು. 'ವಡಮ' ಎಂಬ ಒಂದು ವರ್ಗ ಅಥವಾ ಕುಲವಿತ್ತೆಂಬ ವಾದವಿದ್ದು ಅದನ್ನು ತಳ್ಳಿಹಾಕುವಂತಿಲ್ಲ, ಆದರೆ ಈ ವರ್ಗದ ಮೂಲ ಉತ್ತರದಲ್ಲಿದ್ದ ಸಾಧ್ಯತೆಯನ್ನು ಅಲ್ಲಗಳೆಯುವಂತೆಯೂ ಇಲ್ಲ. ಈ ಕವಿಗಳ ಮೂಲ ನೆಲೆ 'ತಮಿಳಗಂ' ಉತ್ತರಕ್ಕಿತ್ತೆಂದು ಊಹಿಸಬಹುದಾದರೂ ಇಲ್ಲಿ ಸೂಚಿಸಿರುವ ಯಾವ ವಲಯಕ್ಕೆ ಅವರು ಸೇರಿದ್ದರೆಂಬುದನ್ನು ನಿರ್ಧರಿಸಿ ಹೇಳಲು ಸಾಧ್ಯವಾಗುತ್ತಿಲ್ಲ.

ಈ ಕವಿಗಳ ಕಾವ್ಯವನ್ನು ಬಡಗ ದೇಶವನ್ನಾಗಲೀ ಬಡಗನಾಯಕನನ್ನಾಗಲೀ ಒಳಗೊಂಡಿತ್ತೆಂದೇನೂ ಇಲ್ಲ. ಇವರಲ್ಲಿ ಬಹುತೇಕರು ಅಲೆಮಾರಿ ಹಾಡುಕವಿಗಳಾಗಿದ್ದುದರಿಂದ, ಪೋಷಕರನ್ನು ಅರಸಿ ಹೋಗುವುದು ಮತ್ತು ತಮಗೆ ಆಶ್ರಯ ಕೊಟ್ಟವರನ್ನು ಹಾಡಿ

ಹೊಗಳುವುದು ಅವರಿಗೆ ಸಹಜವೆನಿಸಿತ್ತು. ಅವರು ಒಬ್ಬ ಪೋಷಕನ ಆಶ್ರಯದಲ್ಲಿಯೇ ಜೀವಿತಾವಧಿಯನ್ನು ಕಳೆದರೆಂಬುದಕ್ಕೆ ಆಧಾರ ದೊರೆಯುವುದಿಲ್ಲ. 'ನೆಲಮುಖಿಯಾದ ಬಟ್ಟಲನ್ನು ಬಲಮುಖಿಯಾಗಿಸಬಲ್ಲವರನ್ನು' ಅರಸಿ ಬಂದ ವಡನೆಡುತತ್ತಣಾರ್ (ಪ.ಸಂ.೩), ಒಡಲೊಳಗೆ ಯಾಚನೆಯ ದಟ್ಟ ಇರಾದೆಯನ್ನು ಇಟ್ಟುಕೊಂಡು, ಕನಸಿನಲು ಕುಶಲದಿ ಅವನ ಪೋಷಕನನ್ನು ನೆನೆವ, ಪರದೇಶದ ಪಕ್ಷಿಯಂತೆ ಹನಿ ನೀರಿಗಾಗಿ ಹಂಬಲಿಸುವ. ಮತ್ತು ಅವನ ನೆರಳಿನಾಶ್ರಯ ಬೇಡುವ, ವಡಮವಣ್ಣಕ್ಕಣ್ (ಪ.ಸಂ.೪), ಪೋಷಕನ ಕೃಪೆ ಒದಗಿದೊಡನೆ 'ಸದಾ ಸಂಭ್ರಮಿಸಲಿ, ನಿನ್ನ ಕೊರಳಮಾಲೆ' ಎಂದು ವಿದಾಯ ಹೇಳಿ, ಅಲ್ಲಿಂದ ಮುಂದೆ ಸಾಗಿದ ಚಿತ್ರ ಇಲ್ಲಿದೆ. ಅಲ್ಲಿಂದ ಮಲ್ಲೆಯಣನೆಂಬ ನಾಯಕನ ಬಳಿ ಸಾಗಿದ ಈ ಕವಿ ಸ್ಪಷ್ಟವಾಗಿ ತಾನು ಬಂದುದು ತುಪ್ಪದಲ್ಲಿ ಬೇಯಿಸಿದ ರುಚಿಕಟ್ಟಾದ, ಹೆಂಗಳೆಯರು ಹಿಂಜಿದ ಅರಳೆಯ ಉಂಡಿಗಳಷ್ಟು ಮೃದುವಾದ ಮಾಂಸದ ತುಂಡುಗಳನ್ನು ತಿನ್ನುವುದು ಮತ್ತು ತುಂಬಿದ ಹಂಡೆಗಳಲ್ಲಿಯ ಹೆಂಡವನ್ನು ಮನಸಾರೆ ಹೊಟ್ಟೆಗಿಳಿಸುವುದು. ಎಂದು ತಿಳಿಸುವವನು (ಪ.ಸಂ.೫). ವಡಮೋತಂಕಿಟಾರ್‌ನ ಕವನದಲ್ಲಿ 'ಹಸಿದ ಒಡಲಿನ' ಆದರೆ 'ಬಿಗುಮಾನದ ಕಬ್ಬಿಗ'ನ (ಪ.ಸಂ.೧೧) ಚಿತ್ರವಿದೆ. ವಡುಗ ಕವಿಗಳು ಅಲೆಮಾರಿ ಹಾಡುಗಾರರು- ತಮಿಳಿನಲ್ಲಿ ಪಾಣರ್- ಆಗಿದ್ದರಲ್ಲದೆ ಆಸ್ಥಾನ ಕವಿಗಳಾಗಿರಲಿಲ್ಲ; ಅವರು ಶಂಗಂ ಕವಿ ಸಮುದಾಯಕ್ಕೆ (ಅಂಥ ಒಂದು ನಿಶ್ಚಿತ ಸಮುದಾಯ ವಿತ್ತೆಂಬ ಬಗ್ಗೆ ಒಂದು ದೊಡ್ಡ ಪ್ರಶ್ನೆ ಇದೆ!) ಸೇರಿದವರು ಅಥವಾ ಮೂವೆಂದಾರರಿಂದ ಪೋಷಣೆ ಪಡೆದವರು ಆಗಿರಲಿಲ್ಲ.

ಈ ವಡುಗ ಕವಿಗಳು ಏಕೆ ತಮ್ಮ ತಮ್ಮ ಭಾಷೆಗಳಲ್ಲಿ ಕಾವ್ಯ ರಚಿಸದೇ ತಮಿಳಿನಲ್ಲಿ ಹಾಡುಗಬ್ಬಗಳನ್ನು ರಚಿಸಿದರು ಎಂಬುದಕ್ಕೆ ಅವರು ಅರಸಿ ಹೋಗುತ್ತಿದ್ದ ಪೋಷಕ ವರ್ಗವನ್ನು ಗಮನದಲ್ಲಿರಿಸಿ ನೋಡಿದರೆ, ತಕ್ಕ ಉತ್ತರ ದೊರೆಯುವುದು. ಕರ್ನಾಟಕ ಇತಿಹಾಸ ಯುಗದ ಆರಂಭದ ಶತಕಗಳಲ್ಲಿ ಕರ್ನಾಟಕದಿಂದ ಆಳಿದ ಹಲವಾರು ರಾಜಮನೆತನಗಳ-ಪ್ರಮುಖವಾಗಿ ಕದಂಬ ಮತ್ತು ಗಂಗ, ಗಣನೀಯ ಪ್ರಮಾಣದಲ್ಲಿ ಬದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟ - ಶಾಸನ ಕವಿಗಳು ಪ್ರೌಢಾವಸ್ಥೆಯನ್ನು ತಲುಪುತ್ತಿದ್ದ ಕನ್ನಡಕ್ಕಿಂತ ಸಂಸ್ಕೃತಕ್ಕೆ ಮನ್ನಣೆ ಕೊಟ್ಟು ಬರೆದ ದಾಖಲೆಗಳಿಗಿಂತಲೂ ಶಂಗಂ ಕಾಲದ ವಡುಗ ಕವಿಗಳು ತಾವು ಅರಸಿಹೋಗುತ್ತಿದ್ದ ಪೋಷಕರ ಭಾಷೆಯಲ್ಲಿ ಹಾಡುಗಳನ್ನು ರಚಿಸಿದ್ದು ಹೆಚ್ಚು ಸ್ವಾಭಾವಿಕವೆನಿಸುವುದು. ಅಲ್ಲದೆ ಕಾವ್ಯ ಕಲೆ - ಅದರಲ್ಲೂ ಮೌಖಿಕ ಕಾವ್ಯಕಲೆ - ಶಂಗಂ ಕಾಲದಲ್ಲಿ ಒಂದು ಪ್ರೌಢ ಹಂತವನ್ನು ತಲುಪಿ, ಇದು ತಮಿಳಗಂ ಸಂಪರ್ಕದಲ್ಲಿರುವವರೆಲ್ಲರಿಗೂ ಮಾದರಿ ಒದಗಿಸಿ ಕೊಡುವಂತಹ ಮಟ್ಟ ಮುಟ್ಟಿತ್ತು. ಈ ಪ್ರಭಾವದಿಂದ ಬಿಡುಗಡೆ ಹೊಂದುವುದು ಉತ್ತರದ ಕವಿಗಳಿಗೂ ಸಾಧ್ಯವಿರಲಿಲ್ಲ; ಅದೊಂದು ವೇಳೆ ಸಾಧ್ಯವಾಗಿದ್ದರೂ ಪೋಷಕರನ್ನರಸುತ್ತಿದ್ದ ಕವಿಗಳ ದೃಷ್ಟಿಯಲ್ಲಿ ಅದು ಸಾರ್ಥಕತೆಯನ್ನು ಪಡೆದುಕೊಳ್ಳುತ್ತಿರಲಿಲ್ಲ.

ಇದು ಏನೇ ಇರಲಿ. ಈ ಬಗೆಯಲ್ಲಿ ಕಾವ್ಯ ರಚನೆಯಲ್ಲಿ ಪ್ರೌಢಿಮೆ ಹೊಂದಿದ ಕವಿಗಳು ತಮ್ಮ ತಮ್ಮ ನೆಲದ ನುಡಿಗಳಲ್ಲಿ - ಮುಖ್ಯವಾಗಿ ಕನ್ನಡ, ತುಳು, ಕೊಂಕಣ - ಹಾಡುಗಳನ್ನು ರಚಿಸಿರಲು ಸಾಧ್ಯವೇ ಎಂಬ ಪ್ರಶ್ನೆ ಬರುವುದು. ಕ್ರಿ.ಶ. ೫ನೆಯ ಶತಮಾನದ

ನಂತರದ ದಾಖಲಿತ ಕನ್ನಡ ಶಾಸನ ಸಾಹಿತ್ಯವನ್ನೂ, ಮಾರ್ಗಕಾರನು ಸೂಚಿಸಿರುವ ಅವನ ಕಾಲಕ್ಕಿಂತ ಮುಂಚಿನ ಕವಿಪರಂಪರೆಯನ್ನೂ, ಹಾಡುಗಬ್ಬ ವರ್ಗಕ್ಕೆ ಸೇರಿದ ಚತ್ತಾಣ ಮತ್ತು ಬೆದಂಡೆ ಪ್ರಭೇದಗಳ ಹಿರಿಮೆಯನ್ನೂ ಗಮನದಲ್ಲಿಟ್ಟುಕೊಂಡು ನೋಡಿದರೆ, 'ಯಾಕಿರಬಾರದು?' ಎಂಬ ಉತ್ತರ ಬರುವುದು. ತಮಿಳು ಶಂಗಂ ಕಾಲದ ಬಹುಪಾಲು ಸಾಹಿತ್ಯ ಉಳಿದು ಬಂದಿರುವುದರಿಂದ ಮತ್ತು ಆ ಕಾಲದ ಕನ್ನಡ ನಾಡಿನ ಹಾಡುಗಬ್ಬಗಳು ಉಳಿದುಕೊಂಡು ಬಾರದಿರುವುದರಿಂದ ಇಂತಹ ಸಮಸ್ಯೆಗಳು ಏಳುವುವು.

ಎರುಮೈನಾಡಿನ (ಮೈಸೂರು ಪ್ರದೇಶದ) ಕವಿಗಳು :

ವಡುಗರಿಗಿಂತಲೂ ನೇರವಾಗಿ ಕನ್ನಡ ನಾಡಿಗೆ ಪ್ರಸ್ತುತಗೊಳಿಸಿಕೊಂಡ ಕವಿಗಳು ಎರುಮೈ ಪೂರ್ವ ಪ್ರತ್ಯಯ ಹೆಸರಿನವರು. ಒಂದೇ ಮನೆತನದ ತಂದೆ ಮತ್ತು ಮಗ ರಚಿಸಿದ ಮೂರು ಕವನಗಳು ದೊರಕಿವೆ. ತಂದೆಯ ಹೆಸರು, ಎರುಮೈ ವೆಳಿಯನಾರ್; ಮಗನ ಹೆಸರು ಎರುಮೈ ವೆಳಿಯನಾರ್ ಮಕನಾರ್ ಕಟಲನಾರ್. ಇವರ ಮೂಲಸ್ಥಾನ ಇಂದಿನ ಮೈಸೂರು ಪ್ರದೇಶವಾಗಿತ್ತೆನ್ನುವುದರಲ್ಲಿ ಯಾರಿಗೂ ಅನುಮಾನವಿಲ್ಲ. ಹಿರಿಯನು ರಚಿಸಿದ ಮೂರು ಕವನಗಳು,[೬] ಕಿರಿಯನು ರಚಿಸಿದ ಒಂದು ಕವನ[೭] ಲಭ್ಯವಿವೆ. ಇವೆರಡೂ ವೀರಮರಣವನ್ನು ಕುರಿತ ಕವನಗಳಾಗಿವೆ. ಇವಲ್ಲದೆ ಇನ್ನೊಂದು ಕವನದಲ್ಲಿ ಪ್ರಸಿದ್ಧ ಪಟುಕಪ್ರಧಾನ ಎರುಮೈ ಎಂಬವನು ತುರುಗಳನ್ನು ಸೆರೆಹಿಡಿದು ಅಯಿರೀ ನದಿ ಸಮೀಪದ ತನ್ನ ಗ್ರಾಮದ ದೊಡ್ಡಿಯಲ್ಲಿ ಬಂಧಿಸಿಟ್ಟ ಸುಂದರ ವರ್ಣನೆ ಇದೆ.[೮] ಅವುಗಳಲ್ಲಿ ಪ್ರಾತಿನಿಧಿಕ ರೂಪದ ಎರಡು (ಪ.ಸಂ.೧೩-೧೪) ಕವನಗಳನ್ನು ಪರಿಚಯಿಸಿರುವೆ.

ಎರುಮೈಯೂರ ಅಧಿಪತಿಗಳ ಬಗ್ಗೆ ಈಗಾಗಲೇ ಚರ್ಚಿಸಿದ್ದು, ಅದರ ಹಿನ್ನೆಲೆಯಲ್ಲಿ ಈ ಕವನಗಳನ್ನು ಗಮನಿಸುವುದು ಉಚಿತ.

ಕೊಂಕಾಣ ಕವಿಗಳು :

ಕೊಂಕಾಣ, ಕೊಂಗಾಣ ಮತ್ತು ಕೊಂಗುನಾಡನ್ನು ಕುರಿತು ರಚಿಸಲಾದ ಕವಿಗಳಲ್ಲಿ ಯಾರೂ ಕೊಂಕಾಣ ಪೂರ್ವ ಪ್ರತ್ಯಯವನ್ನು ಇಟ್ಟುಕೊಂಡಂತೆ ಕಾಣುವುದಿಲ್ಲ. ಆದರೆ ಕೆಲವರು ನೇರವಾಗಿ ಕೊಂಕಾಣವನ್ನು ವರ್ಣಿಸಿರುವರು. ಮೋತಿಕೀರನಾರು (ಪ.ಸಂ.೧೫) ಕೊಂಕಾಣಗಿರಿಯ (ಹಸಿವನ್ನು ಹಿಂಗಿಸುವ) ಅಪಾರ ಸಂಪತ್ತನ್ನು ಅಲ್ಲದೆ ಅದಮ್ಯ ಕಾಡುಮೇಡುಗಳನ್ನು ಅಲ್ಲಿ ಅರಳುತ್ತಿದ್ದ ಸುವರ್ಣ ಬಣ್ಣದ ನೆರುಂಜಿ ಪುಷ್ಪಗಳನ್ನು (ಪ.ಸಂ.೧೬), ಶುಭ್ರ ಶ್ವೇತಾಂಬರ ಚೆಲ್ಲಿದಂತೆ ಒಟ್ಟಾಗಿ ದಟ್ಟಾಗಿ ಧುಮುಕುವ ಜಲಪಾತಗಳನ್ನು (ಪ.ಸಂ.೧೭) ವರ್ಣಿಸಿರುವನು. ಕೊಂಕರ 'ಹೊಳಪಿನ ಬಿಡ'ವನ್ನು ಕವಿ ಪರಣರ್ (ಪ.ಸಂ.೧೮) ಪರಿಚಯಿಸಿರುವನು. ಈ ಎಲ್ಲ ಕವನಗಳನ್ನು 'ಕೊಡಗು, ಕೊಂಕಣ ಮತ್ತು ತುಳುನಾಡವ'ರ ಬಗ್ಗೆ ಈಗಾಗಲೇ ಒದಗಿಸಲಾಗಿರುವ ವಿವರಗಳ ಹಿನ್ನೆಲೆಯಲ್ಲಿ ಗಮನಿಸುವುದು ಉಚಿತ.

ಕೊಂಕಣದ ಅಧಿಪತಿಯಾದ ನನ್ನಣಗೆ ಶಂಗಂ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಸುಂಟರಗಾಳಿಯಂತೆ ಬೀಸುತ್ತಾ ಒಂದೆಡೆ ಕನ್ನಡ ನಾಡಿನ ರಾಜಶಕ್ತಿಗಳಾದ ಪುನ್ನಾಟ ಮತ್ತು ಕೋಶರ ವಿರುದ್ಧವೂ ಇನ್ನೊಂದೆಡೆ ತಮಿಳಗಂ ಶಕ್ತಿಗಳಾದ ಚೋಳ ಮತ್ತು ಚೇರರ ವಿರುದ್ಧವೂ ಸೇನಾಚರಣೆ ನಡೆಸಿ, ತನ್ನ ಹಿರಿಮೆಯನ್ನು ಮೆರೆದ ಕೊಂಕಣಿಗನಿವನು. ಏಳಿಲ್ ಬೆಟ್ಟಸಾಲಿನಲ್ಲಿ ಒಂದಾದ ಪಾಳಿಯ ಮೇಲೆ ಇವನು ಭದ್ರಕೋಟೆಯೊಂದನ್ನು

ಕಟ್ಟಿದ್ದನು; ಅಲ್ಲಿಂದ ಪಾರಮ್, ಪಿರಂಬುವಿಗೆ ತನ್ನ ಅಧಿಕಾರ ವಿಸ್ತರಿಸಿಕೊಂಡಿದ್ದನು. ಹೋರಾಟದಲ್ಲಿ ಕಾಮುಕೋಣ; ಕೊಡುಗೆಯಲ್ಲಿ ಕರ್ಣ. ಕವಿ ಪರಣರ್ ಈ ದಯಾಳು ಕವಿಗಳಿಗೆ ಗಂಡು ಆನೆಗಳನ್ನು ದಾನಮಾಡಿದ್ದನ್ನು ಕಂಡರ, ಕವಿ ಮಾಮೂಲನಾರ್, ದಲಿತರಿಗೆ ಮತ್ತು ಕವಿಗಳಿಗೆ ಅವನು ಮುಕ್ತ ಹಸ್ತದಿಂದ ಇತ್ತ ಅಪಾರ ದಾನವನ್ನು ಕಂಡಿದ್ದನು.[೧೦] ಆದರೆ ಪುಜನಾನೂಱುವಿನ ಕವಿಗಳು ಇವನ ಶೂರತನವನ್ನು ಅಷ್ಟೊಂದು ಆವೇಶದಿಂದ ಗುರುತಿಸಿಲ್ಲ - ಇದಕ್ಕೆ ಕಾರಣ, ಅವನು ತಮಿಳಗಂ ಹೊರಗಿನವನಾಗಿದ್ದುದರಿಂದೇನೋ!

ನನ್ನಣ್ ಎಷ್ಟು ಶೂರನೋ ಎಷ್ಟು ಧಾರಾಳಿಯೋ ಅಷ್ಟೇ ಕೋಪಿಷ್ಟನೂ ಆಗಿದ್ದನು. ಅವನ ವಂಶವೃಕ್ಷವಾದ ಮಾವಿನ ಮರದಿಂದ ಕಳಚಿಬಿದ್ದ ಒಂದು ಕಾಯನ್ನು ಅಮಾಯಕ ಬಾಲೆಯೊಬ್ಬಳು ತಿಂದಾಗ, ಕೋಪಗೊಂಡ ನನ್ನಣ್ ಅವಳ ಶಿರಚ್ಛೇದನಕ್ಕೆ ಆಜ್ಞೆ ಮಾಡುವನು. ಇದೊಂದು ಆಕಸ್ಮಿಕವಾದ ತಪ್ಪು ಅದಕ್ಕೆ ಪರಿಹಾರವಾಗಿ ಐವತ್ತೊಂದು ಉತ್ತಮ ಆನೆಗಳನ್ನೂ ಮತ್ತು ಅವಳ ತೂಕದ ಸುವರ್ಣ ಗೊಂಬೆಯನ್ನು ಕೊಡುವುದಾಗಿ ಅವಳ ತಂದೆ ಕೇಳಿಕೊಂಡರೂ ನನ್ನಣ್ ಒಪ್ಪದೆ ತನ್ನ ಆಜ್ಞೆಯನ್ನು ಕಾರ್ಯಗತಗೊಳಿಸಿದ್ದು ಶಂಗಂ ಕಾಲದ ಮನೆಯ ಮಾತು. ಇದನ್ನು ಕವಿ ಪರಣರ್ (ಪ.ಸಂ.೨೨) ಒಂದು ಕವನದಲ್ಲಿ ವಿವರಿಸುವನು. ನನ್ನಣ್‌ನ ಏಟಿಲ್ ಬೆಟ್ಟವು ಬಂಗಾರದ ಕಣಜವಾಗಿತ್ತೆಂಬುದನ್ನು ಕವಿ ಪಾಲೈಪಾಡಿಯ ಪೆರುಂಕುಡುಂಗೋ (ಪ.ಸಂ.೨೧) ತಿಳಿಸಿರುವನು.

ಕೋಶರರನ್ನು ಉಲ್ಲೇಖಿಸುವ ಕವಿಗಳು :

ಕೊಂಕಣದ ಮೂಲ ಒಡೆಯರು ಕೋಶರರು. ಇವರನ್ನು ಹೊರಗಟ್ಟಿ ನನ್ನಣ್ ಈ ಪ್ರದೇಶವನ್ನು ತನ್ನದಾಗಿ ಮಾಡಿಕೊಂಡುದರಿಂದ ತುಳು - ಕೊಂಕಣ ದೇಶದವರೇ ಆದ ನನ್ನಣ್‌ಗೂ ಕೋಶರರಿಗೂ ವೈರತ್ವ ಬೆಳೆಯಿತು.

ಕೋಶರರಿಗೆ ಶಂಗಂ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವಿದೆ, ಏಕೆಂದರೆ ಅವರು ಕೊಟ್ಟ ಮಾತಿಗೆ ತಪ್ಪದ, ಸತ್ಯವನ್ನು ಸದಾ ಪರಿಪಾಲಿಸುವ ವೀರರಾಗಿದ್ದರು. ಮೌರ್ಯರೊಡನೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಈ ಸತ್ಯಸಂಧರೇ ಸತಿಯಪುತ್ರರಾಗಿರಲು ಸಾಧ್ಯವೆಂಬ ವಾದವೂ ಇದೆ. ತುಳುನಾಡಿನ ಇವರು, ವಂಬ ವಡುಗರ್ ಎಂದೂ ಗುರುತಿಸಲ್ಪಟ್ಟಿದ್ದರು.[೧೧] ನನ್ನಣ್‌ನಂತೆ ಇವರೂ ಛಲಗಾರರಾಗಿದ್ದರೆಂಬುದಕ್ಕೆ ಅವರು ಅಣ್ಣಿಮಿಸ್ಸಿಲಿಯ ತಂದೆಯ ಹಸು ಬೆಳೆದ ಫಸಲಿಗೆ ಬಾಯಿ ಹಾಕಿದುದಕ್ಕಾಗಿ ಅವನ ಕಣ್ಣು ಕಿತ್ತದ್ದು ನನ್ನಣ್ ತಲೆಕೊಂಡ ಬಾಲಕಿಯ ಘಟನೆಯಷ್ಟೇ ಶಂಗಂ ಸಾಹಿತ್ಯದಲ್ಲಿ ಪ್ರಸಿದ್ಧವಾದದ್ದು.[೧೨] ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿದ್ದರೆಂಬುದಕ್ಕೆ ನನ್ನಣ್‌ನಿಂದ ಅಹ್ದೈ ಎಂಬ ನಾಯಕನನ್ನು ಅವರು ರಕ್ಷಿಸಲು ಕೈಕೊಂಡ ಕ್ರಮ ಸಾಕ್ಷಿ.[೧೩]

ಕೋಶರರ ಎರಡು ಮನೆತನಗಳನ್ನು ಗುರುತಿಸಲಾಗಿದೆ- ಅದರಲ್ಲಿ ಒಂದು ಮುದು ಕೋಶರ್, ಮತ್ತೊಂದು ಇಳಂಕೋಶರ್.[೧೪] ಇಳಂಕೋಶರ್‌ರನ್ನು ಕೊಂಗುದೇಶದ ಒಡೆಯರೆಂದು *ಶಿಲಪ್ಪದಿಗಾರಂ*ನಲ್ಲಿ ಗುರುತಿಸಲಾಗಿದೆ.[೧೫] ಇದರಿಂದಾಗಿ ಮುದುಕೋಶರ್ ತುಳುದೇಶದ ಒಡೆಯರಾಗಿದ್ದರೆಂದು ವಾದಿಸಲಾಗಿದೆ. ಮುದುಕೋಶರ್‌ರು ಅಣ್ಣಿಯ ತಂದೆಯ ಕಣ್ಣು ಕಿತ್ತವರಾಗಿದ್ದರು.[೧೬] ಕೋಶರರು ಅದ್ಭುತ ರಥಗಳ ಒಡೆಯರಾಗಿದ್ದರು. ಶ್ರೀಮಂತಿಕೆಯಲ್ಲಿ ಮೆರೆಯುತ್ತಿದ್ದರು.

ಕೋಶರರನ್ನು ಉಲ್ಲೇಖಿಸುವ ನಾಲ್ಕು ಕವನಗಳನ್ನು ಇಲ್ಲಿ ನಿದರ್ಶಿಸಿರುವೆನು. ಕಲ್ಲಿಣಾರ್‌ನು 'ಜಯಕಾಗಿ ಸಂದಣಿಸಿದ ಕೋಶರರ'ನ್ನು (ಪ.ಸಂ.೨೩.), ಪರಣರ್ ನಣ್ಣನ್‌ನ ಅಮ್ರುವೃಕ್ಷವನ್ನು ತುಂಡರಿಸಲು ಅವರು ಮಾಡಿದ ಮಸಲತ್ತನ್ನು, (ಪ.ಸಂ.೨೪) ಕವಯಿತ್ರಿ ಅವ್ವೈಯಾರಳು ನಾಲ್ಕು ನೆಲೆಗಳ (ಪ್ರದೇಶಗಳ) ಕೋಶರನ್ನೂ ಮತ್ತು ಅವರ ಸತ್ಯ ಪರಿಪಾಲನೆಯನ್ನು (ನಲ್ನುಡಿಗಳನ್ನು) (ಪ.ಸಂ.೨೫) ಕಾಪಿರ ಪ್ಪೂಪಟ್ಟಿಣತ್ತುಕ್ ಶೂಲ ಯುದ್ಧದಲ್ಲಿ ತರಬೇತಿ ಪಡೆಯುತ್ತಿದ್ದ ಕೋಶರ ಯುವಕರನ್ನು (ಪ.ಸಂ.೨೬) ಪರಿಚಯಿಸಿರುವರು.

ಆಕರಟಿಪ್ಪಣಿ :

೧. ಅಹನಾ., ೨೬೫; ೨. ಅದೇ., ೨೮೧ ಮತ್ತು ೨೫೭
೩. ಅದೇ., ೩೬, ೬೧, ೭೬, ೨೦೯, ೩೧೧, ೩೫೯ ಮತ್ತು ೩೯೩
೪. ಪುಱನಾ., ೧೭೬, ೩೭೬, ೩೭೯, ೩೫೧ ಮತ್ತು ೩೮೯
೫. ಕೆ.ಜಿ. ಶೇಷಾದ್ರಿ, ಎ ಕನ್ಸೈಜ್ ಕಂಪೆಂಡಿಯಮ್ ಆಫ್ ಸಂಗಂ ಲಿಟರೇಚರ್, ಸಂ.೨, ಪು.೨೮೧
೬. ರಾಮಮೂರ್ತಿ, ಪಿ., ಹಿಸ್ಟರಿ ಆಫ್ ಕೊಂಗುನಾಡ್, (ಮದ್ರಾಸು, ೧೯೮೧), ಪು.೧೪೩, ಅ.ಟಿ. ೩೬
೭. ಅಹನಾ., ೨೩; ಪುಱನಾ. ೨೭೩, ೩೦೩; ೮. ಅಹನಾ., ೨೭
೯. ಅದೇ., ೨೫೩; ೧೦. ಅದೇ., ೧೫೨ ಮತ್ತು ೩೪೯
೧೧. ಅದೇ., ೧೫; ಪುಱನಾ. ೩೭೦, ೩೭೮; ೧೨. ಅಹನಾ., ೨೬೨
೧೩. ಅದೇ., ೧೧೩ ೧೪. ಅದೇ., ೨೬೨ ಮತ್ತು ೨೧೬
೧೫. ಶಿಲಪ್ಪದಿಕಾರಂ - ಇಂದಿರವಿಳವೂರೆಡುತ್ತ ಕಾದೈ. [illegible] ರಾಮಚಂದ್ರನ್, ಸಿ.ಇ., ಅಹನಾನೂರು ಇನ್ ಇಟ್ಸ್ ಹಿಸ್ಟಾರಿಕಲ್ ಸೆಟ್ಟಿಂಗ್, (ಮದ್ರಾಸು ೧೯೭೪) ಪು. ೫೨
೧೬. ಅಹನಾ., ೧೯೬ ಮತ್ತು ೨೬೨

I. ಉತ್ತರ(ವೆಂಗಡ)ದ ಕವಿಗಳು

ಕವಿ: ಪುಱತ್ತಿಣೈ ನಣ್ಣಕಣಾರ್ -
ಪುಱನಾ. ೩೭೬.
ಹಿನ್ನೆಲೆ: ಓೖಮಾಣ್ ನಲ್ಲಿಯಕ್ ಕೋಟಣ್ ಕುರಿತು ರಚಿಸಿದ್ದು. ಈತನು ಮಾವಿಲಂಕೈ ಅಧಿಪತಿಯಾಗಿದ್ದನೆಂದು (ಪುಱನಾ. ೧೭೬ ರಿಂದ) ತಿಳಿದುಬರುವುದು.

೧. ಆಕಾಶ ಸಾಗರ ದಾಟಿ
ಮುಸ್ಸಂಜೆ ಮಬ್ಬು ಬೆಳಕಿನಲಿ
ಬಂಗಾರವೆಳೆಗಳ ಒಳಪಡೆದ
ರಂಗುರಂಗಿನ ರವಿ ಕೆಳಬಾಗಿದ.
ಹದಗೊಳಿಸಿ ಬಿಗಿದ
ತೊಗಲ ಚಾಟಿಯ 'ತಟಾರಿ'
ಮದ್ದಳೆಯ ನುಡಿಸುತ
ಸಿರಿಸಂಪನ್ನರಮನೆಯ ಬಳಿ ಸಾರಿ
ಪಾಡುಕವಿಗಳು ಪೊರಕೊಳ್ಳುವ
ಅಸ್ಸಪಡುಗದ ಮುಂದೆ ನಿಂತೆ.
ಕಣ್ಣುಮಿಟಕಿಸುವ ಕ್ಷಣದಲ್ಲಿ
ಪೂರ್ವ ದಿಗಂತದ ಚಂದ್ರ ಮೇಲೇರಿ
ಕರಗಿಸಿದ ಕತ್ತಲೆಯ ಮೊತ್ತವನೆಲ್ಲ.
ಆಗ ನೋಡಿದವರಾರೂ
ನನ್ನ ಗುರುತಿಸದಾಗಿದ್ದರು.
ಸೊಂಟ ಬಳಸಿದ ತುಂಡೊಂದು
ಹಳೆಯ ತೂತನು
ಕೊಳೆತ ಎಳೆಯನು
ಬಯಲುಗೊಳಿಸುತಲಿತ್ತು.
ಇವನೆಲ್ಲ ಅವಲೋಕಿಸುತ

ಇಂತೆಂದನಾ ಅತಿಶಯನು:
'ಅಪೂರ್ವ ಅತಿಥಿಗೆ ಅಗತ್ಯ
ಅನುಕಂಪದಾದರಾತಿಥ್ಯ'.
ಕರದ ತಾಳಗಳ ಕಳಚಿ
ಹುರಿದ ಮಾಂಸವನಿಟ್ಟು,
ಸರ್ಪತೇಜದ ಕಳ್ಳನೂ ಕೊಟ್ಟು,
ಆಗ, ಅಲ್ಲಿ, ಆ ರಾತ್ರಿ,
ನರಕ ಸದೃಶ ದಾರಿದ್ರ್ಯವನು
ಮಾಡಿದನಾ ಪ್ರಭು ನನ್ನಿಂದ ದೂರ
ಕಡುಕಷ್ಟ ಸಾಗರದಿಂದಾಚೆ ದಡ ಕೆ
ಸಾಗಿಸುವ ನಾವೆಯಯ್ಯಾ, ಅವನು!

ಪರರ ಮನದಿಂಗಿತವನರಿವ
ಚತುರ ಭರವಸೆ ಇರುವ
ಎನಗಿನ್ನು ಬೇಡುವ
ಇರಾದೆ ಇರದು;
ತುಂಬಿ ತುಳುಕುವ ತಟಾಕದಿಂದಿಳಿದು
ಹರಿವ ಜಲಧಾರೆಯಲಿ
ಬಾಳುವೆನಿನ್ನು ಸುಖಸಂಭ್ರಮದಲಿ;
ಎಡೆಬಿಡದೆ ಕೊಡುವ
ದಾನಶೂರರ ಬಾಗಿಲೆಡೆ
ನಿಲ್ಲದಿಹೆ ನಾನಿಂದಿನಿಂದ;
ಹೊಗಳಿಕೆಯ ಮಾತಾಡಿ-ಹಾಡಿ
ಕಿರಿಯ 'ಕಿಣ್ಣೈ'ಯನು ಮೀಟೆ ಇನ್ನು ಮುಂದೆ

---

೨. ತಾಳೆಯ ತಂಪು ಬೀಜ ಬಾಡಿ
ಕಾಡುಬೇವಿನ ದೋರೆಗಾಯಿ ಸೀದು
ಕೆರೆಯ ನೀರು ಕೆಸರಾಗಿ
ಬೆಳ್ಳಿಚಿಕ್ಕಿ ತೆಂಕಲಿಗಿಳಿಯುವ
ಅನಿಷ್ಟ ಗಳಿಗೆಯ
ಬಿರುಬೇಸಿಗೆಯ
ದಿನ ಆತನಿಂತೆಂದನು-
'ಹರೆಯದ ವಾದ್ಯಗಾರರೇ,
ನಮ್ಮನ್ನೂ ಮರೆಯದಿರಿ.'
ತುಂಬಾ ಉದಾರಿಯಾಗಿದ್ದ
ಕೀರ್ತಿಪುರುಷನಿಂದಿಲ್ಲ,
ಕಾಣಲೂ ಕೇಳಲೂ
ಅವನ ಸಾಧ್ಯವಿಲ್ಲ.
ಬೆಟ್ಟವೆಲ್ಲವ ಬಳಸಿಹ ಈ ಪುರದ
ಮಾಟಮನೆಯಂಗಳಗಳಲಿ
ಸೆರೆಹಿಡಿದು ಕಟ್ಟಿಹರೋ
ಮರಿಯಾನೆಗಳ ಆ ಎಡೆಯಲಿ
ಅಮಾಯಕ ತಾಯಿ ನೆನೆನೆನೆದು
ಹಸುಳೆಗಳ ಗೋಗರಿಯುತಿಹಳೋ,
ಭೋರ್ಗರೆವ ಜಲಪಾತಗಳ
ವೇಂಕಟದ ಅಧಿಪತಿಯೆ
ಆಟಣುಂಕಣನು.

ಕವಿ: ಕಳ್ಳಿಲ್ ಆತ್ತಿರೈಯಣಾರ್-
ಪುಱನಾ. ೩೮೯.
ಹಿನ್ನೆಲೆ: ನಲ್ಲೇರ್ ಮುಡಿಯಣ್ ಕುರಿತು
ಬರೆದದ್ದು. ಈತನೊಬ್ಬ ಕಿರುಕುಳ ನಾಯಕನೂ
ಯುದ್ಧವೀರನೂ ಆಗಿದ್ದನೆಂದು
ತಿಳಿದುಬರುವುದು.

ನಿನ್ನ ನೀ ನಿಗ್ರಹಿಸಿಕೊಳ್ಳ
ಸೆಳೆದೊಯ್ವ ಬಯಕೆಗಳನೆಲ್ಲ ಗೆಲ್ವ
ನಲ್ಲೇರ್‌ಮಣಿಯಣನೆ, ನೀನು
ಇತ್ತು ಸುಪ್ಪಾಣಿ ರತುನಗಳನು
ಪರಿಹರಿಸು ಆಟಣುಂಕಣ ಬಗೆಯಲಿ
ಹಸಿದೆನ್ನ ಸಂಸಾರ ಬರಲನು.
ಓ ಅತಿಶಯನೇ-
ತುಂಬು ಕೋಮಲಾಂಗಗಳ
ನಿನ್ನ ಪ್ರೇಮಾಂಗನೆಯರು
ಹೊರಬಾಗಿಲ ಬಳಿ ಬಂದೆಂದೂ
ಮಸಣ ಮದ್ದಳೆ ಸದ್ದು ಕೇಳದಿರಲಿ.

II. ವಡಮ ಹೆಸರಿನ ಉತ್ತರದ ಕವಿಗಳು

ಕವಿ: ವಡನೆಡುತತ್ತನಾರ್- ಪುಙನಾ. ೧೭೯.
ಹಿನ್ನೆಲೆ: ನಾಲೈ ಕಿಟವಣ್ ನಕಣ್ ಎಂಬ ನಾಯಕ (ವೇಳಿರ್)ನನ್ನು ಕುರಿತು ಬರೆದದ್ದು. ಕಿಟಿನ್ ಮತ್ತು ಕಿಟವನ್ ಎಂಬ ಹೆಸರಿನವರು ಸಾಮಾನ್ಯವಾಗಿ ಗ್ರಾಮಾಧಿಪತಿಗಳಾಗಿದ್ದು ಗ್ರಾಮದ ಸಕಲ ಸ್ವತ್ತಿನ ಒಡೆಯರಾಗಿದ್ದರೆಂಬ ಅಭಿಮತವಿದೆ.

೩. 'ಈ ಲೋಕದ ಮಹಾದಾನಿಗಳೆಲ್ಲ
ನಶಿಸಿಹೋಗಿರುವುದರಿಂದ
ನೆಲಮುಖವಾದೆನ್ನ ಕೈಬಟ್ಟಲನು
ಬಲಮುಖವಾಗಿಸಬಲ್ಲವರಾರು?
ನನ್ನ ಬೇಡಿಕೆಗೆ ಬೆಲೆಯಿಲ್ಲ
ಕೊಡುವಾತನೊಬ್ಬನೂ ಉಳಿದಿಲ್ಲ'
ಎಂಬೆಲ್ಲ ನನ್ನ ಸೊಲ್ಲ ಕೇಳಿ -
ಅರಿ ರಾಜರ ಅಪಾರ ನೆಲವ
ಬಿಗಿದು ಬಲಪಡಿಸಿದ ನಗಾರಿಯ
ಜಯಸಿ ಶೋಭಿಸುತಲಿರುವ
ಪಾಂಡ್ಯರಾಜನ ಬಂಟ
'ನಾಲೈ' ಪತಿಯ ಹೆಸರು ಬಂತು.
ಆ ಮಹಾ ಪ್ರಭುವಿನ
ಸುಂದರಾಭರಣಗಳ ಕಂಡು
ಮತ್ಸರಿಸಿರಲು ಸಾಕು
ಸಿರಿಯು ಕೂಡಾ.
ಬೇಡಲು ಅರಸ ಪಡೆಗಳನು
ನಿಲ್ಲಿಸುವನವನು ಖಡ್ಗಧಾರಿಗಳನು
ಮಂತ್ರಬಯಸಲು, ಹೇಳುವನು,
ಯುಕ್ತಿನಿಯಮಗಳೆಲ್ಲವನು.
ಸದಾ ನೊಗಹೊತ್ತ ಎತ್ತಿನಂದದಿ
ಸತತ ಶ್ರಮಿಸುವವನ ಶೂಲವು
ಬಡಿಸುವುದು ಎಡೆಬಿಡದೆ
ರಣಹದ್ದುಗಳಿಗೆ ಶವದ ಕೂಳನು.
ಆ ನಾಕನ್ ಹೆಸರನೇ ಹೇಳುವರು
ಅವರಲ್ಲಿ ಬಹುತೇಕರು.

ಕವಿ: ವಡಮುವಣ್ಣಕ್ಕಣ್-
ಪುಙನಾ. ೧೯೮.
ಹಿನ್ನೆಲೆ: ಪಾಂಡ್ಯರಾಜನು ದಾನ ಮಾಡಲು ವಿಳಂಬಮಾಡಿದಾಗ ಹಾಡಿದ ಕವನ.

೪. 'ಆ ನಿನ್ನ ಸಕಲಾಭರಣ ಸುಂದರಿ ಹೆತ್ತ
ಕಿಂಕಿಣಿ ಕಾಲ್ಗೆಜ್ಜೆಯ, ಹವಳ ತುಟಿಗಳ,
ಮುದ್ದುಮಕ್ಕಳು ಬಾಳಲಿ ಬಹಳ ಕಾಲ.
ಅವಳ ಮೊಲೆಗಳಿಗಿಳಿದ
ಕೊರಳಮಾಲೆಯು
ಗಿರಿಶಿಖರದಿಂದ ಹರಿವ
ನೀರ ಝರಿಯು!
ಆ ದಿವ್ಯಚರಿತೆಯು
ಕಾದಿಹಳು ನಿನ್ನ ಬರವಿಗಾಗಿ,'
ಕೊಂಡಾಡಿ ಕೀರ್ತಿಸಿದೆ ಇಂತೆಂದು
ಆ ಮಹಾರಥಿಯ ಬಳಿ ನಿಂದು.
ಒಡಲೊಳಗಿನ ದಟ್ಟ ಇರಾದೆಯಲಿ
ಕನಸಿನಲು ನಾನವನ ನೆನೆನೆನೆವೆ ಕುಶಲದಿ.
ಹೇಳಲು ಬಂದಿರುವೆ ವಿದಾಯವನಿಂದು
'ಸದಾ ಸಂಭ್ರಮಿಸಲಿ
ನಿನ್ನ ಕೊರಳ ಮಾಲೆ.'
ಪ್ರಶಾಂತ ತಮಿಳು ನೆಲದಗಲದ
ಅರಿಯ ಶಿರಗಳನೆಲ್ಲ ಬಾಗಿಸಿರುವೆ
ಮತ್ತವರ ಸೊತ್ತನೆತ್ತಿ ಸಂಭ್ರಮಿಸುತಿರುವೆ.
ಈ ಕಡುಗಲಿಯ ತಡೆವವರು
ಇರುವರಾರು ಇಳೆಯ ಮೇಲೆ?
ನಿನ್ನ ಪುತ್ರರಾದರೋ ನಿನ್ನ ಪ್ರತೀಕಗಳೇ.
ಶತ್ರುಗಳ ತಲೆ ಕಡಿದು
ಸುಂದರಾಭರಣಗಳ ಪಡೆದು
ಕನಕ ಭಾರದಿ ಬಿರಿವ
ಈ ನಿನ್ನ ಪುರವನು

ಬಹುಭಾರಗೊಳಿಸಿವರು
ನಿನ್ನ ವಂಶಜರು.
ಅವರ ದಾನಗುಣಗಳನೂ
ಇವರು ಅನುಕರಿಸಲಿ.
ದಟ್ಟ ಅಲೆಗಳ ಸಾಗರಕಿಂತ
ಸಾಗರ ತಳದ ಮರಳಿಗಿಂತ
ಸುರಿವ ವರ್ಷದ ಹನಿಗಿಂತ
ಘನಮೇಘ ಮಾಲೆಗಿಂತ
ಮಿಗಿಲಾಗಿ ವೃದ್ಧಿಸಲಿ,
ನಿನ್ನ ದಿನಗಳೂ ವರ್ಷಗಳೂ.
ಬಹುಕಾಲ ನೀ
ಬಾಳುವಂತಾಗಲಿ;
ಪರಿಪೂರ್ಣ ಸತ್ಕೀರ್ತಿ
ಸುಖ ದೊರಕಲಿ;
ಕಾಣುವಂತಾಗಲಿ ಕಾಲಕಾಲಕೆ
ಮೊಮ್ಮಕ್ಕಳನು;
ಬಯಸಿದ ಸಿರಿ ದೊರೆಯಲಿ
ಅನವರತವೂ.
ಅತಿಶಯನೆ, ನಿನ್ನ ದಯೆಗಾಗಿ
ತುಡಿಯುತಿದೆ ಈ ದುಗುಡ ಮನವು.
ಪರದೇಶದ ಪಕ್ಷಿ ಹಂಬಲಿಸುತಲಿದೆ
ದಾಹ ನೀಗಿಸುವ ಹನಿ ನೀರಿಗಾಗಿ.
ಬಾಗಿರುವೆ ಬೇಡುತ್ತ ನಿನ್ನಡಿಗಳಿಗೆ
ಇಲ್ಲಿದ್ದರೇನಂತೆ ಇರುವೆ ನಿನ್ನ ನೆರಳಿನಲಿ.
ಮರೆಯದಿರೆನ್ನನು 'ಮಾರನೇ'
ಅದ್ಭುತ ಆರ್ಭಟದ ಅಶ್ವಭಟನೇ.

---

೫. ಪದರ ಪದರಾಗಿ ಲೇಪಿಸಿದ
ಬೆಣ್ಣೆ ಹನಿದು ನಿಗಿನಿಗಿಸುವ
ಕೆಂಡ ನಾಲಿಗೆಯ ಶಮನಗೊಳಿಸಿತು.
ಸುಟ್ಟ ರುಚಿಕಟ್ಟಾದ ಮಾಂಸದ
ರಸತುಂಡುಗಳು
ಹೆಂಗಳೆಯರು
ಹಿಂಜುವ ಅರಳೆಯ
ಚೆಂಡುಗಳಾದವು.
ಅವನುಂಡು
ತುಂಬಿದ ಹಂಡೆಗಳ ಹೆಂಡವನು
ಒಮ್ಮೆ ಮತ್ತೊಮ್ಮೆ ಮುಗುದೊಮ್ಮೆ
ಹೊಟ್ಟೆಗಿಳಿಸಲು ಬಂದಿರುವೆ
ನಾ ನಿನ್ನ ಬಳಿ, ಓ ನನ್ನ ಪ್ರಭುವೆ.
ಸೊಗ ಬಿಚ್ಚಿ ಬಿಟ್ಟ ಬಲವಂತ ಬಸವನು
ಹರಿಹಾಯ್ದು ಕಬಳಿಸುವ ಮೇವೆಲ್ಲವನು
ಅರಿಗಳ ಸೆರೆಗೊಳ್ವ, ಓ ಗಂಡುಗಲಿಯೇ
ನಿನ್ನ ಆ ಆನಂದಭವನದಲಿ
ಆರ್ಭಟಿಸಿ ನೀ ಹೀರುವ ಮದಿರೆಯು
ಆಗಲಿ ಅಪರೂಪದ ಅಮೃತವು.

ಕವಿ: ವಡಮವಣ್ಣಕ್ಕಣ್- *ಪುಱನಾ. ೧೨೫.* ಹಿನ್ನೆಲೆ: ಚೋಳನಿಗೂ ಚೇರನಿಗೂ ನಡೆದ ಯುದ್ಧದಲ್ಲಿ ನಾಯಕ ಮಲ್ಲೈಯಣ್ (ತೇರ್ವಣ್ ಮಲ್ಲೈಯಣ್ ಅಥವಾ ಮಲ್ಲೈಮಾಣ್ ತಿರುಮುಡಿಕ್ ಕಾರಿ) ಚೋಳರನ್ನು ಬೆಂಬಲಿಸಿದ್ದರಿಂದ ಅವರಿಗೆ ಜಯ ದೊರಕಿತು. ಇಲ್ಲಿ ಬರುವ 'ವಿಜಯೀ', ಚೋಳ; 'ಅಪಜಯೀ', ಚೇರ. ಇಬ್ಬರೂ ಮಲ್ಲೈಯಣ್ ಬಗ್ಗೆ ಹೆಮ್ಮೆಪಟ್ಟವರೇ.

ಆ ವಿಜಯಿಯೋ-
ನೆಲಕುರುಳಿದಾನೆಗಳನೆಲ್ಲ ಒಟ್ಟೊಟ್ಟಿ
ಹಲವಾರು ಬೆಟ್ಟಗಳನು ಕಟ್ಟಿ
ಇರಿದು ಮೆರೆಯುತ ಅವನು
ಮರೆಯದೆ ಸ್ಮರಿಸುತಲಿಹನು:
'ಅವನ ಕೊಡುಗೆಯಲ್ಲವೆ
ಈ ನನ್ನ ಜಯಕೆ ಕಾರಣವು?'
ಆ ಅಪಜಯಿಯೋ-
ಶಕ್ತಿಯುತ ತೊಲದ ಮಲ್ಲೈಯಣನು

ಬರದಿದ್ದರೆ ಧಾವಿಸಿ ರಣರಂಗಕೆ
ಅಂದದ ಕಾಲಿಗೆ ಚಂದದ ತೊಡರುಟ್ಟು
ಬದಲಿಸದಿದ್ದರೆ ಹೋರಾಟದ ನಿಟ್ಟು
ಸರಳವಿತ್ತೆಷ್ಟೆಮಗೆ ಕದನ ಜಯವು
ಚಿಂತಿಸಿಯೂ ಹೀಗೆಂದು
ಮೆಚ್ಚುವನು ನಿನ್ನನು:
'ಅವನಿಂದ ಮಾತ್ರವಲ್ಲವೆ
ಆದದ್ದು ನಮಗೆ ಸೋಲು'

ಪೂಜಿತ ಮುರುಗನ
ಹಿರಿಗಿರಿಯ ಶಿಬಿರದಲಿ
ಅಗಾಧ ಮನೆಮಾಡಿರುವ
ಮಳೆಮೋಡಗಳ ಬಗೆಯಲಿ
ಅರಸಿ ಬರುವವರೆಲ್ಲರಿಗು
ಒಂದೆ ಥರ ಒಂದೆ ಬಗೆ
ನೀನಿರುವೆ ಎಂದೆಂದಿಗೂ.

---

೬. ನೀನು ಹೇಳಿದ ಮಾತ ನಾ ತಿಳಿಸಲು,
ಒಪ್ಪಿ ಅದನವಳು ಸ್ವೀಕರಿಸಿದಳು.
ತಂಪು ಜ್ಞಾಜಲ್ ಗಿಡಗಳು
ಅಡಗಿಸಿದ ನವರೆಂಬೆಗಳ
ಒಡಲಿನೆಡೆಯೊಂದರಲಿ
ಕಳೆದುಕೊಂಡಳವಳು
ಕಿಶೋರಿ ಕೌಮಾರ್ಯವನು.
ಏಕಾಂಗಿಯಾಗಿಹಳು ಅವಳಿಂದು ಬಹಳ
ಅರಿತುಕೊಳ್ಳಲೆಬೇಕು ನೀನವಳ ಕಳವಳ
ನೋಡಲ್ಲಿ! ನಮ್ಮ ಚಂದುಳ್ಳ
ಚಿಕ್ಕ ಗ್ರಾಮವನು
ಬಾಗಿ ನೆಲಮುತ್ತಿಡುವ ತಾಳೆಗರಿಗಳನು,

ಕವಿ: ವಡುಮವಣ್ಣಕ್ಕಣ್ -
ಕುಱುಂತೊಕ್ಕೈ, ೮೧.
ಹಿನ್ನೆಲೆ: ಕರಾವಳಿ ಪರಿಸರದಲ್ಲಿ ಸಂಭವಿಸಿದ ಈ ಪ್ರೇಮಸಂಬಂಧದ ಬಗ್ಗೆ ನಾಯಿಕೆಯ ಗೆಳತಿ ನಾಯಕನಿಗೆ ಕೊಟ್ಟ ಸಂದೇಶ ಗರ್ಭಿಣಿಯಾದ ಅವಳನ್ನು ಕೂಡಲೇ ಕಾಣಲು ಸೂಚನೆ.

ಬೆಳದಿಂಗಳಂದವಲಿ ಬೆಳಗಿ ಬೀಗುವ
ಮತ್ಸ್ಯಗಂದಿಯ ಕಡಲ ಅಲೆಗಳನು
ಮತ್ತು ಕಿಟ್ಟಕಟ್ಟದ ಕಾಡತೋಪುಗಳನು.
ಹೋಗಿ ಸೇರು ನೀನವಳನು
ಆಯ್ದು ಈ ಪನವಿಲೊಂದನು.

---

೭. ಅವಳ ನಡು ಬಳಲುತಿದೆ
ಅದನು ಬಳಸಿದ ಪತ್ರಪಾವುಡದ
ಭಾರವನಾಗಲೀ,
ಉಬ್ಬಿದೆದೆಯನೆಲ್ಲ ತುಂಬಿದ
'ಶೆಪ್ಪು' ಪೂರ್ಣಕುಂಭದ
ರೇಖಿತ ತೋರ್ಕಲೆಗಳ
ಹೊರೆಯನಾಗಲೀ,
ಅದು ಭರಿಸದಾಗಿದೆ.
ಈ ಅಮಾಯಕ ಗ್ರಾಮವನು
ತುಂಬಿಹರು ಎಡಬಿಡಂಗಿ ಜನರು
ದುಗುಡು ಮನದಲಿ ಕೇಳಿಯಾರೆ?
ಅವರಲ್ಲಿ ಯಾರಾದರೂ
ಈ ಮಾಟದೋಲೆಯ ಪೋರಿಯ
ಕಾಡುತಿಹ ಇರಾದೆ ಯಾವುದೆಂದು?

ಕವಿ: ವಡುಮವಣ್ಣಕ್ಕಣ್ -
ಕುಱುಂತೊಕ್ಕೈ, ೧೫೯.
ಹಿನ್ನೆಲೆ: ಗೃಹಬಂಧಿಯಾಗಿದ್ದ ನಾಯಿಕೆಯ ಅಳಲನ್ನು ಅರುಹಲು ಮಾಡಿದ ಯತ್ನ. ಇಲ್ಲಿ ಬರುವ 'ಪತ್ರ' ಪದವು ಲತೆಗಳಿಂದ ಮಾಡಿದ ಅಥವಾ ಪತ್ರಚಿತ್ರಗಳಿಂದ ಬಿಡಿಸಿದ ಲಂಗವನ್ನು ಸೂಚಿಸಬಹುದು. 'ಶೆಪ್ಪು' ಎಂಬುದು ಪೂರ್ಣಕುಂಭ - ಅರ್ಥಪೂರ್ತ್ಯೆಕೆಗೆ ಎರಡೂ ಪದಗಳನ್ನಿಲ್ಲಿ ಬಳಸಲಾಗಿದೆ.

೮. ಕಡಲ ತಡಿಯ
ಅಂದದ ಹಟ್ಟಿಯ
ದಟ್ಟ ಪೊದೆಯ
'ತಲೈ' ಹೂಗಳು
ಬಿರಿದು ಮೆರಗುತಿವೆ
ಉದುರಿದ ಆನೆವಂತಗಳ
ಮುರಿದ ತುಂಡಿನಂತೆ
ತಲ್ಲಣಗೊಳಿಸುತಲಿವ!
ಪಡುವಣ ಪವನದ ಹೊಡತಕೆ
ಸಿಲುಕಿದ ಸೂಕ್ಷ್ಮ ಪುಷ್ಪ ಪರಾಗ
ಥಳಥಳ ಹೊಳೆಯುವ ಬಳೆಗಳ
ಬಾಲೆಯರ ಆಟದ ಮನೆಗಳ
ಮಾಡಗಳ ಮೇಲೆ ಸುರಿದಿದೆ.

ಕವಿ: ವಡುಮವಣ್ಣಕ್ಕಣ್ ಪೇರಿ
ಶಾತ್ತಣಾರ್-ನಟ್ರಿಣ್ಯೆ, ೨೯೯

ಬೀಸಿ ಬರುವ ಮಾರುತಕೆ ಸಿಲುಕಿ
ಎರಿಬೀಳುವ ತೊರೆಯ ಹನಿಗಳು
ಬಿಲ್ಲು ಬಡಿದ ಹಂಜಿಯ ಕಣಗಳು
ತೂರಿ ಬರುವ ತೆರದಲಿ
ಕಣ್ಣ ಕೊರೆಯುವ ತುಂತುರಾಗಿವೆ:
ಈ ಕಡಲತೀರದ ಪ್ರಿಯಕರನ
ಸುಖಸಖ್ಯವನು ತೊರೆದು
ಬಾಳಲಾರೆನು ನಾನೊಂದು ದಿನವು
ಕೆಂಗಣ್ಣನ್ನಾಡಿಸಲಿ ಬಿಡು, ಈ ಹಟ್ಟಿ
ನನ್ನ ಮೇಲೆ, ಧೃತಿಗೆಡೆನು ನಾನೆಷ್ಟೂ.

---

೯. ಓ ಗೆಳತಿ,
ರಾತ್ರಿ ವಿಸ್ತರಿಸಿ ಯಾತನೆಯ ನೂರ್ಮಡಿಸಿ
ನನ್ನ ನಿದ್ದೆಯ ಅಪಹರಿಸುತ್ತಲಿದೆ.
ಮಾಯದ ಹಳೆಯ ಗಾಯದಲಿ
ಮತ್ತೆ ಮತ್ತೆ ಮರುಕಳಿಸುತಲಿವೆ
ಲಯಬದ್ಧ ಅಲೆಗಳ ಇಂಪು ಧ್ವನಿಗಳು;
ರವಿಯಾದರೋ,
ಮರೆಯಿಂದ ಹೊರಬರಲು
ಹಿಂಜರಿಯುತಲೇ ಇರುವನು
ಉಸುಕಿನ ಏರುದಿನ್ನೆಯ ಮೇಲೆ
ನಾವು ಮಾಡಿದ ಮರಳ ಮನೆಗಳನು
ಅಂದೊಮ್ಮೆ ಕಂಡು ಕೆಡವಿದ್ದನವನು
ನಮ್ಮ ಪ್ರಿಯಕರನು
ಅನುರಾಗದಲಿ ಅದ್ದಿ ಬೆಲ್ಲದ ನುಡಿಯಾಡಿ
ಮರುಳು ಮಾಡಿದ್ದ ಕಿವಿಗಳನು.

ಕವಿ: ವಡುಮವಣ್ಣಕ್ಕಣ್‌ಪೇರಿ
ಶಾತ್ತಣಾರ್-ನಟ್ರಿಣ್ಯೆ, ೩೭೮

ಏನೂ ಅರಿಯದ ನಾವೆಲ್ಲ
ಬಾಲೆಯರು
ನಿಜವೆಂದು ಬಗೆದೆವವನ
ಸವಿ ಮಾತುಗಳನು.
ತಂಪು ಅಲೆಗಳ ಇಂಪು ರಾಗದ
ಕಡಲತೀರದ ದೊರೆಯೊಡನೆ
ಬಡಪಾಯಿ ಮಂಕರುಗಳು
ಅಂದು ಮಾಡಿದ ರಕ್ತಸಂಬಂಧ
ಆಗಿರುವುದಿಂದು
ನೆರೆಹೊರೆಯವರು ಹರಿಯಬಿಡುವ
ಹರಕು ನಾಲಿಗೆಯ ಪ್ರಸಂಗ.

೧೦. ಆ -
ಪುರದ ಗಂಡುಗುಬ್ಬಿ
ಗತ್ತಿನಲಿ ಕುಪ್ಪಳಿಸುತ-
ಜೇನುಕಬ್ಬಿನ
ಸಿಹಿದಂಟನ-
ಬಿಳಿ ಬಂಜೆ ಗೊಂಚಲಿನ
ಒಂದೊಂದೇ ಕಣವನು
ಹೆಕ್ಕಿ ತರುತಲಿದೆ,
ಗರ್ಭವತಿ ಮಡದಿ
ಹೆರುವ ತಮ್ಮ ಮಗುವಿಗೆ
ಮನೆಯೊಂದ ಮಾಡಲು
ಈ -
ಗ್ರಾಮದ ಮನುಷ್ಯನೋ
ಹಾಡುಗಾರರಿಗೆ ಬಲು ಮೆಚ್ಚು
ಸಾಟಿಯಿಲ್ಲದ ಪ್ರೇಮದ ಬೆಲ್ಲದಚ್ಚು.

ಕವಿ: ವಡುಮಂತಾಮೋತರಣ್ -
ಕುಱುಂತೊಕ್ಕೈ, ೮೫.
ಹಿನ್ನೆಲೆ: ಹೆಣ್ಣುಗುಬ್ಬಿ ಮತ್ತು
ನಾಯಿಕೆ ಇಬ್ಬರೂ ಗರ್ಭ ಧರಿಸಿರುವರು.
ತನ್ನ ಬರುವ ಮಗುವಿಗಾಗಿ ಕಳವಳಿಯಿಂದ
ಕಬ್ಬಿನ ಹೂವಿನ ಕಣಗಳನ್ನು ಆರಿಸಿ
ಮನೆಕಟ್ಟಲು ತೊಡಗಿರುವ
ಗಂಡುಗುಬ್ಬಿಯನ್ನು ಕವಿಗಳಿಂದ
ಹೊಗಳಿಕ ಸಂಪಾದಿಸಿಕೊಂಡ ಆದರೆ
ಗರ್ಭಿಣಿಯಾದವಳ ಬಗ್ಗೆ ಹೆಚ್ಚು ಚಿಂತಿಸದ
ತನ್ನ ಕಾರ್ಯದಲ್ಲಿ ಮಗ್ನನಾದ
ನಾಯಕನೊಡನೆ ಹೋಲಿಸಿ,
ಅವರಿಬ್ಬರ ಮನೋಪ್ರವೃತ್ತಿಯನ್ನು
ತೋರಿಸಲಾಗಿದೆ.

---

೧೧. ಧೀಮಂತರಾಗವನೊಂದ ನುಡಿಸಲು
ಮೀಟದೆ ನೀ ಯಾಳ ತಂತಿಗಳನು
ಹೊರಹೊಮ್ಮಿಸಿದವು ಅವು ದಾರುಣ ಧಾಟಿಯ
'ವಿಳರಿ' ಸ್ವರಗಳನು.
ಕ್ಷೀಣಿಸಿತು ನಿನ್ನ ಮನ; ತೊರೆದೆ ಆ ನೆಲ.
ಗರತಿಯೊಬ್ಬಳು ಬಿಚ್ಚಿ ಹರಡಿದ
ಹೆಡೆಯ ಅನುಭವ ಮನದಂದು
ಲವಣನೆಲದ ನೆರಳಿನಲಿರುವ
ನಾಯಿಕೊಡೆಯ ದೈವಕೆ
ನೀ ಬಿದ್ದೆ 'ಶರಣು' ಎಂದು.
ಕಬ್ಬಿಗನೆ, ಬಂದಿರುವೆ ಬಿಗುಮಾನದಿ
ಹಸಿದ ಒಡಲನು ಹೊತ್ತು,
ಕೂಡಿಸಿ ಕರಗಳನು ಮೇಲೆತ್ತಿ,
ಕೇಳುತಿಹೆ ಒಮ್ಮೆ-ಮತ್ತೊಮ್ಮೆ
ಅಲ್ಲದೇ, ಮಗುದೊಮ್ಮೆ
'ಅವನ ಕಾಣಲು ಸಾಧ್ಯವೇ' ಎಂದು.
ಕೇಳು - ನಾವಿರುವ ಬಾಳಬಗೆಯನ್ನು.
ಪಡೆ, ನೀನೊಪ್ಪಿ ಅವನಿತ್ತ ಪುರವುಗಳನು
ಮಾಡು ಮನಸಾರೆ ಭೂರಿಭೋಜನವನು;
ಇಲ್ಲವೇ ಪರಿತಪಿಸಿ ಹೊರಳಾಡು
ದೂಡುತ್ತಾ ಜಾಗರಣೆ ರಾತ್ರಿಗಳನು.
ಅತಿಸುಲಭ ಮಾಡುವುದು ಈ
ಎರಡರೊಳಗೊಂದ
ನಿರ್ಧರಿಸು ತಡಮಾಡದೆ ನೀ
ಇದರಲೊಂದ.

ಕವಿ: ವಡಮೋತಂಕಿಚಾರ್ -
ಪುಱನಾ. ೨೬೦.
ಹಿನ್ನೆಲೆ: ತುರುಗೋಳ್ ಕದನದಲ್ಲಿ ಮಡಿದ
ವೀರನೊಬ್ಬನ ಗೌರವಾರ್ಥ ನೆಟ್ಟ ಕಲ್ಲು
(ನಟುಕಲ್ಲು=ವೀರಗಲ್ಲು)ವಿನ ಪ್ರಸಂಗ.
ನೆಟ್ಟಕಲ್ಲಿನ ಮೇಲೆ ಹುತಾತ್ಮನ ಹೆಸರು
ಕೊರೆಯುವುದು, ಅದನ್ನು ನವಿಲುಗರಿಗಳಿಂದ
ಅಲಂಕರಿಸುವುದು, ಪಟ(ಬಟ್ಟೆಯ)ದ
ಹೊದಿಕೆಯ ಮಂಟಪ ಕಟ್ಟುವುದು, ಅಲ್ಲದೇ
ಆ ಕಲ್ಲನ್ನು ನೆಟ್ಟ ನೆಲವನ್ನು ಯಾರೂ
ಉಪಯೋಗಿಸಬಾರದೆಂಬ ನಿಯಮ
ಹಾಕುವುದು, ಇಲ್ಲಿ ಗಮನಾರ್ಹ. 'ಮರವರು'
ಆ ಕಾಲದ ಖ್ಯಾತ ತುರುಗಳ್ಳರಾಗಿದ್ದರು.
ಇಲ್ಲಿಯ 'ತುಟಿ' (ಕ. ದುಡಿ)
ಸಮರನಗಾರಿಯನ್ನು; 'ಪುರವು' ಕ್ಷೇತ್ರ
ಅಥವಾ ಭೂಮಿಯನ್ನು ಸೂಚಿಸುವುವು.

ತುರುಗಳ ಸೆರೆಗೊಂಡು ತಮ್ಮ ಪುರಕೊಯ್ಯುವ
ಅವಸರದಲಿದ್ದ ಆ ಭಟರುಗಳನೆದುರಿಸಿ
ಕಾದಾಡಿ ಕೋಟೆಬಳಿ ಕೆಡವಿದ ಆ ಕಲಿಯ
ಸಮರ 'ತುಟಿ'ಯನೊಡೆಯಲು
ಸುರಿಸಿದ ಸರಲು ಮಳೆಯನು
ದಾಟಿ ಸಂಹರಿಸಿದನವರನು.
ಭಕ್ಷಕ ಉರಗದ ಕರಗಸ ಕೋರೆಗಳ
ವಂಚಿಸಿ ಹೊರಬರುವ ಚಂದ್ರನ ತೆರದಲಿ
ಕರೆತಂದನು ಕವಿಲೆ ಮಂದೆಯನು
ಬಿಡಿಸಿ 'ಮರವರ' ಬಂಧನದಿಂದವನು.
ಪೊರೆಬಿಟ್ಟ ನಾಗನ ಬಗೆಯಲಿ
ನೆಲೆಸಿಹನವನೀಗ ದುರ್ಲಭ ಲೋಕದಲಿ.

ಬಿದ್ದಿರುವುದವನ ಹೆಣ ಸರಲುಸೆರೆಯಲಿ
ದುರ್ಗಮ ಕಾಡಿನ ಕಿರುತೊರೆಯ ಬದಿಯಲಿ
ಛಲದಿಂದ ನಿಂತ ಗುರಿಗಂಬವೊಂದು
ತೊಯ್ದಾಡಿ- ಹೊಯ್ದಾಡಿ ನೆಲಕೊರಗಿದಂತೆ.
ಯಾರೂ ತುಳಿಯದ ತುಸು ನೆಲಪಟ್ಟಿಯಲ್ಲಿ
'ಪಟ'ಸೂರಿನ ಶುಭಮಂಟಪದ ಮಧ್ಯದಲ್ಲಿ
ನೆಟ್ಟೊಂದು ಕಲ್ಲು, ಇಟ್ಟು ನವಿರು
ನವಿಲ್ಗರಿಗಳನು
ಕೊರೆದಿಹರು ಈ ಕಲಿಯ
ಸುವಿಖ್ಯಾತ ಹೆಸರನು.

---

೧೨. ಓ ಪ್ರಭುವೇ
ನಿನಗೆ ಮರುಳಾದವಳು
ತನ್ನಂದವನೆಲ್ಲವನು
ಕಳೆದುಕೊಂಡಿಹಳು.
ಮಣಿಕಟ್ಟು ಮುಚ್ಚಿರುವ
ವಳಯಗಳ ಪ್ರಿಯತಮೆಯ
ಹಡೆದವನ ಹಟ್ಟಿ
ನೀಳತಾಳೆಗಳ ನಡುವೆ
ಅಡಗಿಹುದು.
ಆಟಮೊಡನಾಡಿಗಳೊಡೆ
ಅಡಗಿರುವೆ ನಾನೊಂದು
ಕಾಣವೆಡೆ ಯಾರೂ ಅದನು.
'ಪುಣ್ಣೈ' ಗಿಡಗುಂಪಿನಲಿ

ಕವಿ: ವಡುಮವಣ್ಣಕ್ಕಣ್ -
ನಟ್ರಿಣೈ ೩೨೩

ಪುಷ್ಪಪರಾಗವನರಸುವ
ಮಧುಕರ ಜೋಡಿಗಳ
ದಟ್ಟ ಝೇಂಕಾರದಲಿ
ನಿನ್ನ ಉನ್ನತ ರಥಗಂಟೆಗಳ
ಕಿಂಕಿಣಿಸುವ ನಿನಾದವೂ
ಕೇಳಿಸದು ಅಲ್ಲಿ ಯಾರಿಗೂ
ಹಟ್ಟಿ ಮುಟ್ಟುವ ಕಿರುದಾರಿ
ನೋಡು, ಅಲ್ಲಿಯೇ ಇರುವುದು;
ಮರೆಯದೇ ನೀನಿಂದು ಅವನನು
ಹೋಗಿ ನೋಡುವುದು.

---

೧೩. ಶಂಖ ಕೊರೆದು ಮಾಡಿದ
ಶುಭ್ರ ಬಿಳಿ ಕಂಕಣಗಳು
ನನ್ನ ಮಣಿಕಟ್ಟಿನಿಂದ
ಕಳಚಿ ಬೀಳುತಲಿವೆ;
ಕಣ್ಣೀರು ಹರಿಸಿ ಇರುಳ ಸರಿಸಿ
ದಿನ ನೂಕುತಿರುವೆ, ಏಕಾಕಿಯಾಗಿ
ಓ ನನ್ನ ಹೃದಯವೇ !
ಏಳು. ಅವನಿರುವ ತಾಣ ತೋರಿಸು;
ಹೋಗಿ ಮುಕ್ತಿ ಪಡೆಯೋಣ.
ಈ ನಲಿವ ನೆಲದಿಂದಾಚೆ
ಹಲವು ಶೂಲ ಗಾವುದದ

ಕವಿ: ಮಾಮೂಲಣಾರ್ -
ಕುಱುಂತೊಕ್ಕೈ ೩೬೨.
ಹಿನ್ನೆಲೆ: ಇಲ್ಲಿ ಬರುವ ವಡುಗರ ಪ್ರಸ್ತಾಪ ಮತ್ತು ತಮಿಳರಿಗೆ ಅರ್ಥವಾಗದಿರುವ ಭಾಷೆಯಲ್ಲಿ ಅವರು ಮಾತನಾಡುತ್ತಿದ್ದುದು ಗಮನಾರ್ಹ. ತಮಿಳಗಂನ ಯೋಧರು ಸಂಪತ್ತನ್ನರಿಸಿ ಉತ್ತರಕ್ಕೆ (ವಡುಗ ನಾಡಿಗೆ ಅಥವಾ ಕನ್ನಡ-ಆಂಧ್ರಪ್ರದೇಶದಡೆಗ) ಬರುತ್ತಿದ್ದುದನ್ನು ಅನೇಕ ಶಂಗಂ ಕವನಗಳು ಬಹಿರಂಗಪಡಿಸಿರುವುವು.

'ಕಟ್ಟೀ' ರಾಜ್ಯದ ಗಡಿಯಾಚೆ,
ತುಳಸಿಮಾಲೆಯ ತೊಟ್ಟ
ವಡುಗರು ನಮಗೆ ತಿಳಿಯದ
ನುಡಿಯನಾಡುವರೋ,
ಅಲ್ಲಿ ಸೇರಿ,
ಅವನ ಬೆನ್ನ ಬೀಳೋಣ.

III. ಮೈಸೂರು ಪ್ರದೇಶದ (ಎರುಮೈನಾಡಿನ) ಕವಿಗಳು

ಕವಿ: ಎರುಮೈವೆಳಿಯಣಾರ್-
ಪುಅನಾ. ೩೦೩.
ಹಿನ್ನಲೆ: ಒಬ್ಬ ವೀರನ ವರ್ಣನೆ. ಆದರೆ ಅವನಾರೆಂಬುದು ಸ್ಪಷ್ಟಗೊಳ್ಳುತ್ತಿಲ್ಲ. ಕವಿಯ ಹೆಸರಿನ ಎರುಮೈ ಪೂರ್ವಪ್ರತ್ಯಯ ಗಮನಾರ್ಹ.

೧೪. ಧರೆಯನ್ನೆ ಒಳಗೆಳೆವ ಗತ್ತಿನ
ಗೊರಸುಗಳಿಂದದನು ಭೇದಿಸುವ
ವಾಯವೇಗದ ಆ ತುರಗವು
ನೋಡುಗರನೆಲ್ಲ ತಬ್ಬಿಬ್ಬುಗೊಳಿಸಿತು.
ಲಘುವಾಗಿ ಕಂಡವರನು
ಆದರ ಯುವ ಸವಾರನು
ಕಡಿದುಹಾಕಿದನು ಕಡುಕಾಡಿ
ದುಡುಕುವ ದೃಢ ದೀರ್ಘ
ಶೂಲದಿಂದವರ ಎದೆಯ ಸೀಳಿ
ಅವನು ಬರುವುದನು ನೀವೇ ನೋಡಿ.
ಇದ್ದಂಡೆಗಳ ತೊಳೆವ ಸಾಗರವನು
ಇಬ್ಭಾಗಿಸಿ ನುಗ್ಗುವ ನಾವೆಯ ತೆರದಲಿ
ಬಾಹುಬಲದಲಿ ಬದಿಗೊತ್ತಿ ಭಟರನು
ಮೆರೆದಿದ್ದನವನು ಮಹಾರಾಜರೆದುರು-
ನಿನ್ನೆಯಾವರೆಗೂ.
ಧವಳ ದಂತದ ಮದಕರಿಯನು
ಕೆಡವುದ ಕಂಡು ಕಣ್ಣಾರೆ
ಮಾಸವಾರದ ಹಸುಳೆಗಳು
ಸುರಿಸಿದವು ಕಣ್ಣೀರ ಕೋಡಿಯನು!

ಮೇಲೆ ಉಲ್ಲೇಖಿಸಿದ ಕವಿ -
ಪುಅನಾ. ೨೭೩

೧೫. ಅವನ ತುರಗ ಮರಳಿ
ಬರುವುದಿಲ್ಲ;
ಅವನ ತುರಗ ಮರಳಿ
ಬರುವುದಿಲ್ಲ
ಉಳಿದವರೆಲ್ಲರ ತುರಗಗಳು
ಮರಳಿ ಬಂದಾಯಿತು.
ಕಂದು ಕುದುರೆಯ
ಕೇಶರ ಚಂಡಿಕೆಯ
ಈ ಮನೆಮಗನ ಸಿರಿವಂತ ತಂದೆಯ
ತುರಗ ಬರಲಿಲ್ಲ,
ದೊಡ್ಡ ನದಿಗಳ ಸವಡಿನಲಿ
ಕೊಚ್ಚಿ ತೇಲುವ ಹೆಮ್ಮರದ ಬಗೆಯಲಿ
ಅವನೇರಿದ ತುರಗ ನೆಲಕೆ ಒರಗಿತೇ?

IV. ಕೊಂಕಣದ ಕವಿಗಳು

೧೬. ಎಲ್ಲಾ ಭೂಪತಿಗಳ ಅಂಕಿತವ
ಗಿರಿಗಳಿಗಿರುವುದು ಒಂದೇ ಗುಣ,
ಭವ್ಯಕೋಂಕಾಣಂಗಿರುವುವು, ಎರಡು:
ಹಸಿವ ಹಿಂಗಿಸಿಲು ಹಂಬಲಿಸಿ
ಧಾವಿಸುವವರ ಸ್ವಾಗತಿಸುವುದು,
ಒಂದು;
ಸೂರೆಗೊಳ್ಳಲು ಏರಿಬರುವ ದುಸ್ಸಾಹಸೀ
ಅರಸು ಪಡೆಗಳ ಪ್ರತಿರೋಧಿಸುವುದು,
ಮತ್ತೊಂದು.

> ಕವಿ: ಮೋಶಿಕೀರಣಾರ್-
> ಪುಅನಾ. ೧೫೬.
> ಹಿನ್ನೆಲೆ: ಕೂಂಕಾಣ(ಕೂಂಕಣ) ಗಿರಿಯ ಸಂಪತ್ತು ಮತ್ತು ದುರ್ಗಮತೆಯ ಪರಿಚಯವಿಲ್ಲಿದೆ. ಕೂಂಕಣದ ಭೂಮಿತಿಯನ್ನು ನಿರ್ಧರಿಸುವುದು ಕಷ್ಟ, ಆದರೆ ಅದು ಇಂದಿನ ಕರ್ನಾಟಕದ ಕರಾವಳಿ ಪ್ರದೇಶವನ್ನು ಹೊರತಾದುದಾಗಿರಲಿಲ್ಲ. ನಣ್ಣನ್ ಎಂಬ ಪ್ರಸಿದ್ಧ ನಾಯಕನು ಕೊಂಕಾಣದ (ತುಳುನಾಡಿನ/ ಪುನ್ನಾಟದ?) ಅಧಿಪತಿಯಾಗಿದ್ದನೆಂಬುದು ಇಲ್ಲಿ ಸೂಚಿತಗೊಂಡಿದೆ. ನೋ. ನಣ್ಣನ್.

---

೧೭. ಹಸಿದು ಒಡಮುಗ್ಗುಲ
ಕಳಚಿಕೊಂಡಂತಿರುವ
ಕವಿಯೆ, ನಿನ್ನ ಡೊಂಕು
ಯಾಳವನು ಸ್ವಲ್ಪ ಮೀಟು;
ಪದಗಳೆರಡನು ಆಯ್ದು
ಬವಣೆ ನೀಗುವ
ಕರುಣಾಳುಗಳೆಲ್ಲಿಂದು ಕೇಳು.
ಈಗ ನನ್ನ ಮಾತನೂ ಕೇಳು.
ಒಕ್ಕಲೆದ್ದ ಪುರದಲಿ
ಏರು ರವಿಯೆಡೆ ಮೋರೆ ಮಾಡಿ
ಅರಳುವ ನೆರುಂಜಗಿಡದ
ಬಂಗಾರ ಬಣ್ಣದ ಹೂಗಳಂತೆ,
ತಿರುಗಿಪವು ಬಡಕವಿಗಳ ಬಟ್ಟಲು

> ಕವಿ: ಮೋಶಿಕೀರಣಾರ್-
> ಪುಅನಾ. ೧೫೫.
> ಹಿನ್ನೆಲೆ: ಕೂಂಕಾಣಂಕೀಟಾನ್ ಎಂಬ ಕರಾವಳಿ ನಾಯಕನನ್ನು ಕುರಿತು ರಚಿಸಿದ್ದು. 'ಕೀಟಾನ್'ಗೆ ನೋ. ಮೇಲಿನ ಕವನದ ಟಿಪ್ಪಣಿಯನ್ನು.

ಕೊಂಕಾಣಗಿರಿಯ ಮಹಾಪ್ರಭುವಿನ
ಸರಮಾಲೆ ಶೋಭಿತ ಎದೆಯೆಡೆಗೆ.
ತುಂಬಿದನ್ನದ ತಾಟು
ನಗುತ ತುಳುಕಾಡುವುದು;
ಅವನ ಕೀರ್ತಿಪತಾಕೆ
ನೆಗೆದು ತೂರಾಡುವುದು.

---

೧೮. ಏರುವ ತೆರೆಗಳ ಸಾಗರ ತೀರಕೆ
ಬರುವ ಜನರು ಕೇಳಿಯಾರು ಬಲ್ಲವರ
'ಪಡೆಯಬಹುದೆಲ್ಲಿ
ದಾಹತೀರಿಸುವ ನೀರನು' ಎಂದು?
ಅಂತೆ, ಅರಸನ ಸಂಗದ ಕುಶಲಮತಿಗಳು
ಹುಡುಕಿಯಾರು ಪರಿಶುದ್ಧ
ದಾನಿಗಳನು ಬೇರೆಡೆಯಲ್ಲಿ,
ನಾನು ಪಡೆವ ರೂಪ ಉಡುಗೊರೆಯ
ನಿಜಮೌಲ್ಯವೇನೆಂದು ಕೇಳಲಾರೆ.

> ಕವಿ: ಮೋಶಿಕೀರಣಾರ್- ಪುಅನಾ. ೧೫೪.
> ಹಿನ್ನೆಲೆ: ಇಲ್ಲಿ ಬರುವ ಕೂಂಕಾಣ ಗಿರಿಯ ಜಲಪಾತಗಳ ಉಲ್ಲೇಖ ಗಮನಾರ್ಹ.

ನಾನಂತು ಬಡವ
ನಿನ್ನನೇ ನೆಚ್ಚಿ ಬಂದಿರುವೆ;
'ನನಗೆ ಕೊಡು' ಎಂದು ಕೇಳಲು
ಆಗುವುದು ಬಹಳ ಮುಜುಗರವು.

ನೀನು ಕೊಡು ಇಲ್ಲವೆ ಬಿಡು.
ಸುರಿವ ಸರಲುಗಳನೆದುರಿಸದೆ
ಕದನರಂಗವ ತೊರೆದೆಂದೂ ಕದಲದ
ನಿನ್ನ ಪುರುಷತ್ವವನು ಕೊಂಡಾಡದಿರೆನು;

ಶುಭ್ರ ಶ್ವೇತಾಂಬರ ಚೆಲ್ಲಿದಂದದಿ
ದಟ್ಟಾಗಿ ಒಟ್ಟಾಗಿ ಧುಮಿಕಿ ಬೀಳುವ
ನಿನ್ನ ಕೊಂಕಾಣಗಿರಿಯ ತುಂಬು ಜಲಪಾತದ
ಸೊಬಗನು ಹಾಡಿಹೊಗಳದಿರೆನು.

---

೧೯. ಆ ಮನುಷ್ಯ ಬಲವಾಗಿ ನಿನ್ನನು ಅಪ್ಪಿ
ನವಪುಷ್ಪಮಾಲೆಯ ಮುಡಿಸಿದನು.
ಈ ಘಟನೆಯೇನೂ
ಮರುಕಳಿಸಲಿಲ್ಲ ನಿಜ -
ಆದರೆ ಎದ್ದ ಗುಲ್ಲು!?
ಕೊಂಕರ ಹೊಳಪಿನ ಖಡ್ಗದ ಹೊಡೆತಕೆ
ಬಿಳಿರತ್ನಮಾಲೆಯ ಪಾಂಡ್ಯ ಸೇನಾನಿ
'ಅತಿಕಣ' ಬಿದ್ದಾಗ ತನ್ನಾನೆಯೊಡನೆ,
'ವಾಕೈಪ್ಪರಂತಲೆ' ರಣರಂಗದಲ್ಲಿ

ಕವಿ: ಪರಣರ್ -
ಕುಱುಂತೊಗೈ, ೩೯೩.
ಹಿನ್ನೆಲೆ: ಕೊಂಕರು (ಕೊಂಗರು, ಕೊಡಗಿನ ಮೂಲದ ಕಲಿಗಳು) ಪಾಂಡ್ಯರ ವಿರುದ್ಧ 'ವಾಕೈಪ್ಪರಂತಲೆ' ರಣರಂಗದಲ್ಲಿ ಹೋರಾಡಿ ಅತಿಕಣನನ್ನು ಸೋಲಿಸಿ ಹಾಕಿದ ಜಯಕಾರದ ಪ್ರಸ್ತಾಪ. ಶಂಗಂ ಕಾಲದ ಇತಿಹಾಸದ ಒಂದು ಪ್ರಮುಖ ಘಟನೆ.

ಕಾಡುಕೋಳಿಯ ಕೂಗನಡಗಿಸಿ
ಹಾಕಿದರು ಅಬ್ಬರದ ಜಯಕೇಕೆಯನವರು!

---

೨೦. ಕುಂತು ಅಲ್ಲಲ್ಲಿ ಗುಂಪುಗುಂಪಾಗಿ
ಇಟ್ಟು ಸುಟ್ಟುಂಬೆಯ ಮೂಗಂಚಿನಲಿ
ತಿರುಪುತ್ತ ಕಣ್ಣಾಲಿಗಳ ತುಂಬು
ತವಕದಲಿ
ಓರಿಕಿರಿಯ ಹಕ್ಕಿಪಿಂಗಳೆಯರೆಲ್ಲರು.
ಸ್ವಚ್ಛಂದವಾಗಿ ಹರಿಯಬಿಟ್ಟಿರುವರು
ತಮ್ಮ ಮುರುಕು ನಾಲಿಗೆಗಳನು.
ಸಿಡಿಮಿಡಿಗೊಂಡ ನನ್ನ ಪಡೆದವ್ವ
ಕೈ ಸೆಳವೆ ತಿರುಪುತ್ತ ಒದರಿದಳು
'ನಿರ್ಧರಿಪೆ ನಾ ನಿನ್ನನಟ್ಟಲು
ಕಡಲತೀರದ ಕಲಿ, ನಿನ್ನ ಆ
ಪ್ರಿಯಕರನ ಬಳಿಯುಲಿ'.

ಕವಿ: ಉಲೋಚ್ಚನಾರ್ - ನಟ್ರಿಣೈ ೧೪೯.
ಹಿನ್ನೆಲೆ: ಕಡಲತೀರದ ನಾಯಕ ಅಥವಾ ಕೊಂಕಾಣದವನ ಪ್ರೇಮಪ್ರಸಂಗ.

ಎತ್ತರದ ರಥವೇರಿ
ತೂಗುತ್ತಾ ಬೀಗುತ್ತಾ
ಬರುವನಿಲ್ಲಿಗೆ ಅವನು;
ಕಡಲತೀರದ ಬನದ
ಮಧು ಪುಷ್ಪಪಥವಲಿ
ಎಳೆಯು ತರುವುವು ಅವನು
ರಂಗುಕುಚ್ಚಿನ ಕುದುರೆಗಳು.
ಬಿಡು. ಹಳಿಹಳಿಯ ಓರಿಪಿಗ್ಗಲಿ
ಹಟ್ಟಿಯ ಗುಲ್ಲುಮಲ್ಲಿಯರೆಲ್ಲರು.

V. ನಣ್ಣನ್ ನೆನೆವ ಕವಿಗಳು

೨೧. ಓ ಗೆಳತಿ,
ಅವನಿನ್ನು ಪಯಣವನು
ಕೈ ಬಿಡುವನು.
ಚಿರತೆ ಬಣ್ಣದಲಿ ಚೆಲ್ಲಿರುವ
ನೆಳಲು ಬೆಳಕು ಮರ ಪೊದೆಗಳಲಿ,
ಹಬ್ಬಿರುವ ಹಸಿರು ಲತೆಗಳನು
ನೀಳ ಕರಿಕೋಡಿನ
ಅಪಾರ ಮಸ್ತಕವ
ಕಾಳಿಂದ ಕೋಣಗಳು
ಬಾಯಾಡಿಸಿ ಬೀಳಿಸಿದ
ತರಗೆಲೆಗಳನರಸಿ ಬರುವ
ಹೊಳೆವ ಬಳೆಗಳ ಬಾಲೆಯರ,
ನಣ್ಣಣ್ ವೇಳಿರನ ಕೊಂಕಾಣದ
ಕನಕ ಖನಿಜದ ಏಟಿಲ್‌ಗಿರಿಯನು
ಇತ್ತರೂ ಆ ಪ್ರಿಯಕರನಿಗೆ
ನಿನ್ನಿಂದ ಅವನು
ದೂರ ಸರಿಯನು.

> ಕವಿ: ಪಾಲೈಪಾಡಿಯ ಪೆರುಂಕುಡುಂಗೋ - ನಟ್ರಿಣೈ ೩೯೧.
> ಹಿನ್ನೆಲೆ: ನಾಯಿಕೆಯನ್ನು ಅವಳ ಗೆಳತಿ ಸಂತೈಸುತ್ತಾ ಪ್ರಯಾಣದಲ್ಲಿರುವ ನಾಯಕನು ಬೇಗನೇ ಮರಳಿ ಬರುವನು ಮಾತ್ರವಲ್ಲ ಕೊಂಕಾಣದ ಒಡೆಯನಾದ ನಣ್ಣನ್‌ನ ಬಂಗಾರದ ಗಣಿಯನ್ನು ಹುದುಗಿಸಿಕೊಂಡಿರುವ ಏಟಿಲ್ ಬೆಟ್ಟವನ್ನು ಕೊಟ್ಟರೂ ಆ ಆಮಿಷಕ್ಕೆ ಒಳಗಾಗದೆ ಕೂಡಲೇ ಮರಳಿ ಬಂದು ಅವಳ ಸಂತಾಪವನ್ನು ಪರಿಹರಿಸುವನೆಂಬ ಭರವಸೆಯನ್ನು ಕೊಡುವಳು. ಏಟಿಲ್ ಬೆಟ್ಟ ಬಂಗಾರದ ಗಣಿಯನ್ನು ಹೊಂದಿತ್ತೆಂಬುದನ್ನು ಇದು ಕೊಂಕಾಣದಲ್ಲಿತ್ತೆಂಬುದು ಅಲ್ಲದೆ ಇದರ ಅಧಿಪತಿ ನಣ್ಣನ್ ಆಗಿದ್ದನೆಂಬುದು ಇಲ್ಲಿ ಗಮನಾರ್ಹ.

ಒದ್ದೆ ಕುವಳೈ ಪುಷ್ಪಗಳ
ನಿನ್ನ ಬಟ್ಟಲು ಕಣ್ಣುಗಳ
ದೂಡಿ ದುಃಖಕೋಡಿಯಲಿ
ಇದ್ದಾನೆ ಅವನು ನೆಮ್ಮದಿಯಲಿ?

---

೨೨. ಅದೊಂದು ದಿನ-
ಅತಿಥಿಯಾಗಿ ಬಂದಿದ್ದ ಆ
ನಗುಮುಖದ ಚೆಲುವನನು
ಪತ್ತೆಮಾಡಿದಳು
ನನ್ನ ಹಡೆದವಳು.
ಅಂದಿನಿಂದ -
ಮುಚ್ಚಿಲ್ಲ ಅವಳೊಂದು ಕ್ಷಣ ಕಣ್ಣೆವೆಯ
ವೈರಿಪಡೆಗಳು ಸಾಲ್ಗೊಂಡು ನಿಂತಿರುವ
ಕದನರಂಗದ ಗಡಿಗ್ರಾಮ[ಣ]ಗಳಂತೆ.
ಈಜಲು ನೀರಿಗಿಳಿದ
ನವಿರು ನೊಸಲಿನ ಬಾಲೆಯು
ತೇಲಿ ಬರುತಿಹ ದೋರೆಗಾಯಿಯ
ಅರಿಯದೆ ಭೋಗಿಸಿದ ತುಸುತಪ್ಪಿಗಾಗಿ
ಉತ್ತಮ ಗಜ ತೊಂಬತ್ತೊಂದನು
ಸಮತೂಕದ ಬಂಗಾರ ಬೊಂಬೆಯನು
ತಿರಸ್ಕರಿಸಿ ಅವಳ ಶಿರಕೊಂಡ
[ಕಡುಕೋಪಿ] ನಣ್ಣಣನಂತೆ

> ಕವಿ: ಪರಣರ್ - ಕುಱುಂತೊಕೈ ೨೯೨.
> ಹಿನ್ನೆಲೆ: ಕೊಂಕಾಣದ ಅಧಿಪತಿಯಾದ ನಣ್ಣನ್ ಶೂರನಾದಷ್ಟೇ ಕಡುಕೋಪಿಯಾಗಿದ್ದನು. ಆಮ್ರವೃಕ್ಷ ಅವನ ವಂಶ ಚಿಹ್ನೆ. ಆ ವೃಕ್ಷದಿಂದ ನೀರಿಗೆ ಬಿದ್ದು ತೇಲುತ್ತಿದ್ದ ಮಾವಿನಕಾಯಿಯನ್ನು ಕೆರೆಯಲ್ಲಿದ್ದ ಒಬ್ಬ ಅಮಾಯಕ ಬಾಲೆ ತಿಂದುದನ್ನು ಕಂಡು, ಕೋಪದಿಂದ ಅವಳನ್ನು ಕೊಲ್ಲಲು ನಣ್ಣನ್ ಆಜ್ಞೆ ಮಾಡುವನು. ಅವಳ ತಂದೆ ಐವತ್ತೊಂದು ಆನೆಗಳನ್ನೂ, ಅವಳ ತೂಕದ ಬಂಗಾರದ ಪ್ರತಿಮೆಯನ್ನು ದಂಡ ಕೊಡುವುದಾಗಿ ಕೇಳಿಕೊಂಡರೂ ಅದಕ್ಕೊಪ್ಪದೆ ಅವಳನ್ನು ಕೊಂದ ಪ್ರಸಂಗ ಇದರ ಹಿನ್ನೆಲೆ.

ಇವಳೂ ತೊಳಲಾಡಲಿ
ಬಿಡು ಸತತ ನರಕದಲಿ.

VI. ಕೋಶ ನೆನೆವ ಕವಿಗಳು

೨೩. ಮುಸುಕಮುಂಜಾವಿನಲಿ ನೀರ್ಬೆಕ್ಕು
ಸೊಣಕ ಮೀನನು ಹಿಡಿದು
ಬಲಿಕೊಳ್ಳುವುದು;
ಅದರ ನೆಗೆತವು
ತಂಪು ತಟಾಕದ ಕಡುಕೆಂಪು
'ಕುರಲಿ'ಲತೆಯನು ಓಲಾಡಿಪುದು.
ಸರ್ಪವನೆ ಸೀಗಡಿ ಮಾಡಿ ಕಬಳಿಸುವ
ಭಕ್ಷಕ ಮೊಸಳೆಯ ಜೊತೆ ಸೆಣಸಾಡಿ
ನುಸುಳಿ ಹೊರಬರುವುದು.
ಅಳುಂಪಿನ ಈ ಮನುಷ್ಯನ
ಕಾದಾಟಕೆ ಕೊನೆಯೆಂಬುದುಂಟೇ?
ಜಯಕಾಗಿ ಜಗಜಗಿಸಿ ಸಂದಣಿಸುವ
ಕೋಶರ ಪಂಗಡಗಳ
ರಣರಂಗವನು ಸೂರೆಗೊಳ್ಳುವನು.
ಚಕ್ರದ ಅರದ ಶೂಲಗಳು ಅವನ
ಗೆಳೆಯರೆದೆಗಳಲಿ ರಾರಾಜಿಸುತಿರಲು–
ಮರಳದಿನ್ನೆಯ ಮೇಲೆ
ಗೊಂಬೆಯಾಟವನಾಡುವ
ನಳಿನ ತೋಳಿನ ಅವನ
ನೀರೆಯರು ಮುನ್ನಂಗಳದಲಿ
ಕಾಯುತಿರಲು –

ಕವಿ: ಅಂಟರ್‌ನಟುಂ ಕಲ್ಲಿಣಾರ್
ಪುಱನಾ. ೨೮೩.
ಹಿನ್ನಲೆ: ಅಳುಂಪಿನ ಒಬ್ಬ ವೀರನ ಬಗ್ಗೆ ರಚಿಸಿದ ಕವನ. ಇವನು ಕೋಶರ್ ಪಡೆಯಲ್ಲಿದ್ದನೋ ಅಥವಾ ಅವರನ್ನು ವಿರೋಧಿಸಿದ್ದನೋ ಎಂಬುದು ಸ್ಪಷ್ಟಗೊಳ್ಳುವುದಿಲ್ಲ. ತುಂಪೈಮಾಲೆಯನ್ನು ಧರಿಸಿ ಹೋರಾಡುವುದು ಶಂಗಂ ವೀರರ ಲಕ್ಷಣವಾಗಿತ್ತು. ಗೆಳೆಯ ಮಡಿದುಬಿದ್ದಾಗ, ಸೇಡು ತೀರಿಸಿಕೊಳ್ಳಲು ಹೊರಟ ವೀರನ ಹಿನ್ನೆಲೆ ಗಮನಾರ್ಹ.

ತನ್ನ ಗೆಳೆಯ ಕೊನೆಯುಸಿರೆಳೆವ ಮುನ್ನ
ಕೆಂಡಮಂಡಲಗೊಂಡು ಅಗಲೆಲೆಗಳ
'ತುಂಪೈ' ಪುಷ್ಪಮಾಲೆಯನು
ಧರಿಸಿದನು ಶಿರದ ಮೇಲವನು
ಅದರ ಪರಿಮಳವ ಸವಿಯಲು
ಹಾರಿಬಂದವು ಝೇಂಕರಿಸುತ
ಮಧುಕರಗಳು.

---

೨೪. ಅವನ ಎದೆಯಾಶ್ರಯಕೆ
ನೀ ಹಂಬಲಿಸುವೆ
ಆದರೆ ಕೊರಗಬೇಡ
ಪಣತೊಟ್ಟ ಕೋಶರರು
ನಣ್ಣನ್ ನೆಲಹೊಕ್ಕು
ಅಮ್ರವೃಕ್ಷವ ತುಂಡರಿಸಲು
ಮಾಡಿದ ಮಸಲತ್ತಿನಂತೆ
ನಾವೂ ಮಾಡಬೇಕಾಗಿವೆ
ಒಂದಿಷ್ಟು ಕಠಿಣತರ ಕಸರತ್ತ.

ಕವಿ: ಪರಣರ್-ಕುಱುಂತೊಕೈ, ೬೩.
ಹಿನ್ನಲೆ: ನಾಯಕನ ಪ್ರೇಮಹಸ್ತಕ್ಕೆ ಸ್ಪಂದಿಸದೇ ಬಳಲುತ್ತಿರುವ ನಾಯಿಕೆಯ ಬಗ್ಗೆ ಬರೆದ ಕಾವ್ಯ. ಇಲ್ಲಿ ಬರುವ ಕೋಶರರು ಕೊಟ್ಟ ಮಾತಿಗೆ ತಪ್ಪದ ಕಲಿಗಳು; ನಣ್ಣನ್ ಅವರನ್ನು ಕೊಂಕಾಣದಿಂದ ಹೊರದೂಡಿ ರಾಜ್ಯವನ್ನು ವಶಪಡಿಸಿಕೊಂಡವನು. ನೋ. 'ನಣ್ಣನ್'.

೨೫. ಶಂಖವನೂದುತ ಮದ್ದಳೆ ನುಡಿಸುತ
ಹಳೆಯ ಆಲದ ಮರದಡಿ ಸಂದಣಿಸುವ
ನಾಲ್ಕು ನೆಲೆಗಳ ಕೋಶರರ
ನಲ್ನುಡಿಗಳಂತೆ, ಓ ಗೆಳತಿ,
ಬಗೆಬಗೆಯ ತೋಳ್ಬಳೆಯ
ನಿನ್ನ ಮಗಳ ಪ್ರೇಮಸಲ್ಲಾಪ
ಕಟು ಸತ್ಯ
ವೀರತೊಡರನು ತೊಟ್ಟ
ಎಲೆಯ ಕಡುಕೆಂಪಂಚಿನ
ಧವಳ ಸಬಳದ
ಪುರುಷಸಂಗದಲಿ
ಅವಳಿರುವುದಂತೂ,
ಅಲ್ಲ ಮಿಥ್ಯ.

> ಕವಯಿತ್ರಿ ಅವ್ವೆಯಾರ್ -
> ಕುಱುಂತೊಕೈ ೧೫.
> ಹಿನ್ನಲೆ: ಇಲ್ಲಿ ಪ್ರಸ್ತಾಪಗೊಂಡಿರುವ ನಾಲ್ನುಡಿಯ (ನಾಲ್ಕು ಭಾಷೆಯನ್ನಾಡಬಲ್ಲ?) ಮತ್ತು ನಲ್ನುಡಿಯ (ಸತ್ಯಮಾತನಾಡುವವರ ಅಥವಾ ಒಂದೇ ಮಾತಿನವರಾದ?) ಕೋಶರರ ವಿವರ ಗಮನಾರ್ಹ.

---

೨೬. ನಿನ್ನ ಪಡೆ ಮುನ್ನುಗ್ಗುವಾಗ
ಅವರ ಮುಂಚೂಣಿಯಲಿ ನಿಂತು
ಹೊಳೆವ ಅಸ್ತ್ರಗಳ ಸೆಳಕನೆದುರಿಸುವೆ;
ಅವರ ದಳ ಮುನ್ನುಗ್ಗುವಾಗ
ನಿನ್ನ ಪಡೆಯ ಬೆಂಗಾವಲಾಗಿ
ದೊಡ್ಡ ತೊರೆಯನಡ್ಡಗಟ್ಟುವ
ಬೆಟ್ಟವಾಗಿ ಅದನು ಬೆಂಬಲಿಸುವೆ.
ಕಾರಣ, ಓ ಅತಿಶಯನೇ,
ನಿನ್ನ ದರುಶನವೆ ಅತಿದುರ್ಲಭ.
ನನ್ನ ಸಂಸಾರ ವೇದನೆಯೋ
ಅತಿ ದಾರುಣಕರ
ಕರುಣಿಸು ನನಗಿಂವೆ
ಭರವಸೆಯ ನುಡಿಯೊಂದ.
ಶೂಲವೀರ ಕೋಶರ ಯುವಕರು
ಶತ್ರು ಸಂಹರಿಸಲು ತೂರಿಯೆಸೆವರು
ಆ ಅಸ್ತ್ರಗಳಾಘಾತವ ಸೈರಿಸುವ
'ಮುರುಕ್ಕು' ಮರದ ಮಲ್ಲ ಕಂಬದಂತೆ
ಬಹುಕಾಲ ಬಾಳಲಿ ನಿನ್ನ ಕೀರ್ತಿ ಪ್ರತಾಪ
ವೈರಿಗಳ ಮುಂದೆಂದು ಕುಂದದೇ ಸತತ.

> ಕವಿ ಕಾವಿರಪ್ಪೂಪಟ್ಟಣತ್ತುಕ್ -
> ಪುಱನಾ. ೧೬೯.
> ಹಿನ್ನೆಲೆ: ಕೋಶರ್ ಯುವಕರು ಶೂಲವನ್ನು ಬಳಸಿ ಕಾದಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಮುರುಕ್ಕು ಮರ (ಕಂಬ)ವನ್ನು ಗುರಿಯಾಗಿಸಿಕೊಂಡು ಅವರು ಅದನ್ನು ರೂಢಿಸಿಕೊಳ್ಳುತ್ತಿದ್ದರೆಂಬ ಅಂಶ ಗಮನಾರ್ಹ.

✤ ಡಾ. ಷ ಶೆಟ್ಟರ್ :
ಗೌರವ ನಿರ್ದೇಶಕರು, ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಪ್ರಾದೇಶಿಕ ಕೇಂದ್ರ,
ಕೆಂಗುಂಟೆ ಸರ್ಕಲ್, ಮಲ್ಲತ್ತಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು-೫೬೦ ೦೫೬
email : igncasrc@hotmail.com / profssettar@yahoo.co.in ✤

ಮೊಬಾಯಿಲ್ ಮೋಹ

ಎಸ್. ಎಚ್. ತಳವಾರ

ಮೊಬಾಯಿಲ್ ಫೋನ ಅಂತಾ / ಮುದ್ದಿನಿಂದ ಮಾತಾಡಬ್ಯಾಡ್ರಿ
ಇದು ಹರಕ ಜೇಬಿನೊಳಗ ಹಣ ಇಟ್ಟುಕೊಂಡಂಗ
ಉಬ್ಬಿ ಉಬ್ಬಿ ಮಾತಾಡ್ಯಾಗ / ಮಂಗ ಬುದ್ಧಿಗೆ ಹೋಳಿಯೋಬಿಲ್ಲ
ಬಿಲ್ ತುಂಬುವಾಗ ಇಲಿ ಬಲಿಗೆ ಬಿದ್ದಂಗ

ಜೀವನವಿಡೀ ಉಚಿತ ಅಂತಾ / ಮೋಸದಿಂದ ಸಾರಿ ಸಾರಿ ಹೇಳತಾರ
ಕುರೀ ಹಂಗ ಬಾಳಬ್ಯಾಡ್ರಿ ಇವರ ಕೈಯಾಗ
ನಡಂತ್ರ ಬಂದ ಸೇವಾ ಇದು / ನೆಲೆಯಾಗಿ ನಿಲ್ಲೋದಲ್ಲ
ಮುತ್ತಿನಂಥ ಅಂಚೆ ಸೇವೆ ಮರೀಬ್ಯಾಡ್ರೀಗ

ಪಸ್ನಾಲೆ ಸುತ್ತುವ ಉಪಗ್ರಹ / ಮುನಿಸಿಕೊಂಡು ತವರಿಗೆ ಬಂದ್ರ
ಮೊಬಾಯಿಲ್ ಕುಂಡರತಾವ ಮೂಲೀ ಹಿಡಕೊಂಡ
ಆಗ ಅಂತರದೇಶಿ ಅಂಚೆಕಾರ್ಡು / ಅರ್ಭಟ ಮಾಡಿ ಹೇಳತಾವ
ಕಡಿಮೆ ವೆಚ್ಚದ ಕಾರ್ಯ ನನ್ನದು ಕಾಟ ಇಲ್ಲಣ್ಣ

ತ್ರೇತಾಯುಗದಲಿ ಮಾರುತಿದೇವ / ರಾಮದೂತನಾಗಿ ಸೇವೆಗೈದ
ಅಂದಿನಿಂದಲೂ ಅಂಚೆ ಸೇವಾ ಅರಳಿ ನಿಂತೈತ್ರಿ
ಅಂಚೆ ಸೇವೆಯ ಬಿಡಬ್ಯಾಡ್ರಿ / ನೂತನ ಸೇವಾ ನೀಡತೈತ್ರಿ
ಎಂದೆಂದಿಗೂ ಅಂಚೆ ಸೇವೆ ಅಮರ ಇರತೈತ್ರಿ

✣ ಎಸ್. ಎಚ್. ತಳವಾರ : ಪ್ರಧಾನ ಅಂಚೆ ಕಚೇರಿ, ಧಾರವಾಡ-೫೮೦ ೦೦೧ ✣

ಎರಡು ಕವಿತೆಗಳು

ವೆಂಕಟೇಶ ಕುಲಕರಣಿ

೧. ನಾವು ಇದ್ದಂಗ ಇರುವವರು

ಇದ್ದಂಗ ಇರವವರೋ / ನಾವ್ ಇದ್ದಲ್ಲೆ ಇರುವವರು
ಬಿದ್ದಲ್ಲೆ ಬೀಳವರೋ / ನಾವ್ ಬಿದ್ದಲ್ಲೆ ಬೀಳವರು
ಬಸ್ಸಿನ ರೇಟು ಹೆಚ್ಚಾದರೇನು / ಹಾಲಿನ ರೇಟು ಹೆಚ್ಚಾದರೇನು
ಸಿಟ್ಟಿಗೆದ್ದು ಬಸ್ ನಿಲ್ಲಿಸಿ / ಬಸ್ ಬಸ್ ಸುಡುವವರೋ
ನಾವ್ ಇದ್ದಲ್ಲೆ ಇರುವವರೋ
ಮನೀ ಕರ ಹೆಚ್ಚಾದರೇನು / ಪೆಟ್ರೋಲ ರೇಟು ಹೆಚ್ಚಾದರೇನು
ಗುಂಪು ಕೂಡಿಸಿ ಕಲ್ಲು ಒಗೆದು / ದೀಪಾ ಒಡಿಯುವರೋ
ನಾವ್ ಇದ್ದಲ್ಲೆ ಇರುವವರೋ / ನಾವ್ ಬಿದ್ದಲ್ಲೆ ಬೀಳವರು

ರಾಜ್ಯದ ಆಡಳಿತ ಬ್ಯಾಸರಾದರ / ದುರಾಡಳಿತ ವಿರೋಧ ಮಾಡಿ
ತಿಕೀಟ ಇಲ್ಲದ ಪ್ರವಾಸ ಮಾಡಿ / ರ್ಯಾಲಿ ಮಾಡವರೋ
ನಾವ್ ಇದ್ದಲ್ಲೆ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಯಾರರೆ ಒದ್ದು ಎಬ್ಬಿಸಿದರಂದರ
ಎದ್ದು ನಿಲ್ಲವರೋ, ನಾವು ಎದ್ದು ನಿಲ್ಲವರೋ
ಜೋರಾಗಿ ಕೂಗಿ ಒದರ್ಯಾಡಿ ಚೀರ್ಯಾಡಿ
ಮತ್ತ ಮಲಗವರೋ, ನಾವು ಮತ್ತ ಮಲಗವರೋ
ನಾವ್ ಇದ್ದಲ್ಲೆ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಮ್ಯಾಲಿಂದ ಮಳಿ ಬರದೆ ಇದ್ದರೆ
ಭಜನಿ ಮಾಡವರೋ / ನಾವು ಕತ್ತಿ ಮೆರಸವರೋ / ಮತ್ತ ತಿಂದ ಮಲಗವರೋ
ನಾವ್ ಇದ್ದಂಗ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಕಾಪಿ ಕೊಡದ ಮಾಸ್ತರನ್ನ
ಚಾಕು ಹಾಕವರೋ, ನಾವು ಚಾಕು ಹಾಕವರೋ / ಕಾಪಿ ಮಾಡಸೋ ಗುರುವಿಗೆ
ಕಾಲ ಬೀಳವರೋ, ನಾವ್ ಕಾಲ ಬೀಳವರೋ,
ನಾವ್ ಇದ್ದಲ್ಲೆ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಕೋರ್ಟ ಕಚೇರಿ ಕಾಯಿದೆ ಅಂದ್ರ
ಕಿಮ್ಮತ್ ಕೊಡದವರೋ, ನಾವ್ ಕಿಮ್ಮತ್ ಕೊಡದವರೋ,
ವಕೀಲ ಸತ್ರೂ ಸಾಕು ಅಂತ
ಕೋರ್ಟ ಮುಚ್ಚವರೋ. ನಾವ್ ಕೋರ್ಟ ಮುಚ್ಚವರೋ
ನಾವ್ ಇದ್ದಂಗ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಸತ್ಯವಂತರು ಸಾಯೂದ ನೋಡಿ
ಸತ್ತಾಗ ಮರಗವರೋ, ನಾವು ಸತ್ತಾಗ ಮರಗವರೋ
ಅಧಿಕಾರದಾಗ ಇದ್ದವರನ ಕರದು
ಹೊಗಳಿ ಮೆರಸವರೋ, ನಾವ್ ಹೊಗಳಿ ಮೆರಸವರೋ,
ನಾವ್ ಇದ್ದಂಗ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ದೂರಿನ ಅನ್ಯಾಯ ನೋಡಿ ಸಿಡಿದು
ಕಂಡಂಗ ಕೂಗವರೋ, ನಾವ್ ಕಂಡಂಗ ಕೂಗವರೋ,
ಎದುರಿನ ಅನ್ಯಾಯ ನೋಡ್ಯೂ ನೋಡಿ
ಸುಮ್ಮನ ಇರವವರೋ, ನಾವ್ ಸುಮ್ಮನ ಇರವವರೋ,
ನಾವ್ ಇದ್ದಂಗ ಇರುವವರೋ / ನಾವ್ ಬಿದ್ದಲ್ಲೆ ಬೀಳವರು
ಜಾತಿ ಹೆಸರು ಹೇಳಿಕೊಂಡು
ವೋಟ ಹಾಕವರೋ, ನಾವು ವೋಟ ಹಾಕವರೋ
ಐದು ವರ್ಷ ಶಿಸ್ತಾಗಿ ಮಲಗಿ
ನಿದ್ದಿ ಹೊಡೆಯುವರೋ, ನಾವ್ ನಿದ್ದಿ ಹೊಡೆಯುವರೋ
ನಾವ್ ಇದ್ದಂಗ ಇರುವವರೋ / ನಾವ್ ಬಿದ್ದಲ್ಲೆ ಬೀಳವರು

೨. ಮನಸ ಬಿಚ್ಚಿ ನಗ್ರಿ*

ಒಂದಾನೊಂದು ಕಾಲದಾಗ / ಮನಸ ಬಿಚ್ಚಿ ನಗತಿದ್ರು
ಮನಸಾ ನಗತಿದ್ರು / ಕಣ್ಣಿಂದ ನಗತಿದ್ರು
    ಆದರೀಗ ಬರೇ ಹಲ್ಲು ತೋರಿಸಿ ನಗತಾರ
    ಇತಲಾಗ ಕಳಾ ಇಲ್ಲದ ಕಣ್ಣಿಂದ
    ನನ್ನ ಹಳೇ ತಪ್ಪ ಹುಡುಕತಾರ
ಹಿಂದ ಒಂದ ಕಾಲ ಇತ್ತು / ಮನಸಾ ಕೈ ಕುಲಕತಿದ್ರು
ಆದರ ಆ ಕಾಲ ಹೋತು, / ಈಗ ಮನಸ್ಸಿಲ್ಲದ ಕೈ ಕುಲಕತಾರ ಬಲಗೈಯಿಂದ
ನನ್ನ ಖಾಲಿ ಕಿಸೆ ಹುಡುಕತಾರ ಎಡಗೈಯಿಂದ
    `ಇದು ನಿಮ್ಮದS ಮನಿ. ಮತ್ತ ಬರ್ರಿ` / ಅಂತ ಹೇಳಿ ಬೀಳ್ಕೊಡತಾರ.
    ನಂದS ಮನಿ ಅಂತ ಒಮ್ಮೆ ಹೋದರ. / ಮತ್ತೊಮ್ಮೆ ಹೋದರ. ಎರಡಕ್ಕS ಮುಕ್ತಾಯ
    ಮೂರನೇ ಸಲ ಅನ್ನೂದು ಇಲ್ಲ / ಮುಚ್ಚಿದ ಬಾಗಲಾ ತಗಿಯೂದಿಲ್ಲ
ಇದೆಲ್ಲ ನೋಡಿ ಪಾಠಾ ಕಲತೆ / ಮಾರೀಗೆ ಮುಖವಾಡ ಹಾಕೂದು ಕಲತೆ,
ಬಟ್ಟೀ ಹಾಕಿಧಂಗ ಮುಖವಾಡ ಹಾಕ್ತೀನಿ / ಮನೀ ಮುಖವಾಡ. ಕಚೇರಿ ಮುಖವಾಡ.
ರಸ್ತೀ ಮುಖವಾಡ, ಯಜಮಾನಿಕೆ ಮುಖವಾಡ. / ಪಾರ್ಟಿ ಮುಖವಾಡ
    ಎಲ್ಲಾರೂ ನಕ್ಕಂಗ ನಾನೂ ನಗೂದು
    ಗ್ವಾಡಿಗೆ ಹಾಕಿದ ಫೋಟೋದಾಗ
    ಕಾಯಂ ನಗಿ ಕಾಣೋ ಹಂಗ
ನಾನೂ ಕಲತೀನಿ ನಗಲಿಕ್ಕ / ಬರೇ ಹಲ್ಲು ತೋರಿಸಿ ನಗಲಿಕ್ಕೆ;
ಕೈ ಕುಲಕೂದು ಕಲತೀನಿ ಮನಸ್ಸಿಲ್ಲದ / `ಹೋಗಿ ಬರ್ತೀರ್ಯಾ, ಬರ್ರಿ` ಅಂತೀನಿ ಎದುರಿಗೆ;
`ಪೀಡಾ ಹೋತು` ಅಂತ ಮನಸ್ಸಿನ್ಯಾಗ. / `ಭೆಟ್ಟಿ ಆದದ್ದು ಖುಶಿ` ಅಂತೀನಿ
ಒಳಗ ಒಳಗ ಸಾಕಾಗಿದ್ರೂ / ಮಾರೀ ಮುಂದ ಹೊಗಳತೀನಿ
    ಆದರ ಮನಸಾ ಹೇಳ್ತೀನಿ / ಸಣ್ಣವ ಇದ್ದಾಗ ಹೆಂಗಿದ್ದೆ
    ಹಂಗS ಮತ್ತ ಇರಬೇಕಂತೀನಿ / ಮುಖವಾಡದ ಬದುಕು ಮರೀಬೇಕಂತೀನಿ
ಕನಡಿ ಮುಂದ ನಕ್ಕೆನಂದರ
ಕನಡ್ಯಾಗ ಕಾಣತಾವ ಕ್ವಾರಿ ಹಲ್ಲು
ಹಾವಿನ ವಿಷದ ಹಲ್ಲಿನಂಗ
    ಯಾರರೆ ಹೇಳ್ರಿ
    ಯಾರರ ತಿಳಸ್ರಿ
    ನಗೂದ ಹೆಂಗಂತ ಕಲಿಸಿಕೊಡ್ರಿ
ಸಣ್ಣವ ಇದ್ದಾಗಿನ ನಗಿ / ಕಪಟ ಇಲ್ಲದ ನಗಿ
ಮತ್ತ ನಗಬೇಕು ನಾನು / ಮನಸಾ ನಗಬೇಕು ನಾನು

* ಇಂಗ್ಲಿಶ್ ಮೂಲ : ಗೆಬ್ರಿಲ್ ಒಕಾರಾ

✤ ವೆಂಕಟೇಶ ಕುಲಕರಣಿ : 'ಜಾಗ್ರತ ಭಾರತ', ೧ ನೇ ಕ್ರಾಸ್, ಸಾಧನಕೇರಿ, ಧಾರವಾಡ-೫೮೦ ೦೦೮ ✤

ಪುಸ್ತಕ ಪರಿಶೀಲನೆ

೧. *ಕನ್ನಡವನ್ನು ಮುನ್ನಡೆಸಿದವರು : ಡಾ. ಜಿ. ಡಿ. ಜೋಶಿ*

ಸ್ನೇಹ ಪ್ರಕಾಶನ, ಪಲ್ಲವಿ, ಕುಸುಮನಗರ, ಧಾರವಾಡ-೫೮೦ ೦೦೮, ಪ್ರಮು. ೨೦೦೬, ಪು. ೧೧೪, ರೂ. ೮೦/-

ಹೊರನಾಡಿಲ್ಲಿದ್ದು ಕನ್ನಡವನ್ನು ಮುನ್ನಡೆಸುತ್ತಿರುವ ಹಿರಿಯ ಚೇತನ ಡಾ. ಜಿ. ಡಿ. ಜೋಶಿಯವರು. ಹಲವಾರು ಬಿರುದು, ಪ್ರಶಸ್ತಿಗಳನ್ನು ಪಡೆದಿರುವ ಜೋಶಿಯವರ ಹರಟೆಗಳು ತುಂಬಾ ಹೆಸರು ಪಡೆದಿವೆ. ಅಂತೆಯೇ ಇವರ ಪ್ರಬಂಧಗಳು, ಮಹಾಪ್ರಬಂಧ, ಸಂಪಾದಿತ ಕೃತಿಗಳು ಅಂಕಣ ಲೇಖನಗಳು ಇತ್ಯಾದಿ ಸಹ ಅವರಿಗೆ ಕೀರ್ತಿ ತಂದುಕೊಟ್ಟಿವೆ. ಎಲ್ಲಕ್ಕೂ ಮಿಗಿಲಾಗಿ ಅವರು 'ಕವಿ ಕಾವ್ಯ ಪರಿಚಯ'ದ ಅಡಿಯಲ್ಲಿ ಕನ್ನಡ ಸಾಹಿತಿಗಳ ಪರಿಚಯವನ್ನು ತಮ್ಮ ಅನೇಕ ಕೃತಿಗಳಿಂದ ಮಾಡಿಕೊಡುತ್ತಿರುವುದು ಶ್ಲಾಘನೀಯ. 'ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು', 'ಕನ್ನಡದ ಕಣ್ಮಣಿಗಳು', 'ಕನ್ನಡ ಕಾರಣಪುರುಷರು', 'ಕನ್ನಡ ಪೋಷಕರು' ಎಂಬ ಕೃತಿಗಳಿಂದ ಈಗಾಗಲೇ ನೂರಾರು ಸಾಹಿತಿ ದಿಗ್ಗಜರನ್ನು ಸಾರಸ್ವತ ಲೋಕಕ್ಕೆ ಪರಿಚಯಿಸಿರುವ ಜೋಶಿಯವರು ಇತ್ತೀಚೆಗೆ ಪ್ರಕಟಿಸಿರುವ ಪುಸ್ತಕ 'ಕನ್ನಡವನ್ನು ಮುನ್ನಡೆಸಿದವರು'. ಮುಂಬಯಿ ಕನ್ನಡಿಗರ ಮುಖವಾಣಿಯೆಂದೇ ಹೆಸರು ಪಡೆದಿರುವ ಮುಂಬಯಿಯ ದಿನಪತ್ರಿಕೆ, 'ಕರ್ನಾಟಕ ಮಲ್ಲ'ದಲ್ಲಿ ಪ್ರತಿ ಭಾನುವಾರ ಬರೆದ ಅಂಕಣಗಳ ಸಂಕಲನ ಈ ಕೃತಿ.

ಈ ಕೃತಿಯಲ್ಲಿ ಕನ್ನಡದ ಹದಿನಾರು ದಿಗ್ಗಜರ ಪರಿಚಯ ಮಾಡಿಕೊಟ್ಟಿದ್ದಾರೆ ಜೋಶಿ ಅವರು. ವಿಶೇಷವೆಂದರೆ ಪ್ರತಿಯೊಬ್ಬರ ಪರಿಚಯ ಲೇಖನದ ಮೊದಲಲ್ಲಿ ಆಯಾ ದಿಗ್ಗಜರ ಸುಂದರ ರೇಖಾಚಿತ್ರಗಳಿವೆ. ಹಾಗೆಯೇ ಲೇಖನದ ಮೊದಲಲ್ಲಿ ಒಬ್ಬೊಬ್ಬರ ಜೀವನ ವಿವರ, ಕೊನೆಯಲ್ಲಿ ಅವರ ಕೃತಿಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಕೇವಲ ಇವೆರಡನ್ನೇ ಓದಿದರೂ ಆ ಲೇಖಕರ ಜೀವನಚರಿತ್ರೆ ನಮ್ಮ ಕಣ್ಣಮುಂದೆ ಸುಳಿದಾಡುತ್ತವೆ. ಇದು ಜೋಶಿಯವರ ಟ್ರೇಡ್ ಮಾರ್ಕ್ ಎಂದೇ ಹೇಳಬಹುದು.

ಆ ಹದಿನಾರು ದಿಗ್ಗಜ ಸಾಹಿತಿಗಳೆಂದರೆ ಸರ್ವಶ್ರೀ ಚಂದ್ರಶೇಖರ ಶಾಸ್ತ್ರಿ, ಸೇಡಿಯಾಪು ಕೃಷ್ಣಭಟ್ಟ, ಮಧುರಚೆನ್ನ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ. ಬಿ. ಜೋಶಿ, ಸಿದ್ದವನಹಳ್ಳಿ ಕೃಷ್ಣಶರ್ಮ, ಕಡೆಂಗೋಡ್ಲು ಶಂಕರಭಟ್ಟ, ಶ್ರೀರಂಗ, ಸಿಂಪಿ ಲಿಂಗಣ್ಣ, ಪು.ತಿ.ನ., ಎಂ. ಶಿವರಾಂ, ಆ. ನೇ. ಉಪಾಧ್ಯೆ, ತ. ಸು. ಶಾಮರಾಯ, ತೀ. ನಂ. ಶ್ರೀಕಂಠಯ್ಯ, ರಂ. ಶ್ರೀ. ಮುಗಳಿ ಮತ್ತು ಡಿ. ಎಲ್. ನರಸಿಂಹಾಚಾರ್ಯ. ಕಲಾವಿದ ಸುರೇಶ ಕುಲಕರ್ಣಿ ಅವರು ಬಿಡಿಸಿದ ಈ ಸಾಹಿತಿಗಳ ರೇಖಾಚಿತ್ರಗಳೂ ಆಕರ್ಷಕವಾಗಿವೆ.

– ಕೃಷ್ಣಮೂರ್ತಿ ಕಲುಮುಂಗಿ, C/o ಜಿ. ಕೆ. ಬನ್ಸಲ್, ಡಬ್ಲ್ಯೂಝಡ್-೨೨ ಎ, ಮೊದಲ ಮಹಡಿ, ನ್ಯೂ ಸಾಹಿಬ್‌ಪುರಾ, ತಿಲಕನಗರ, ಹೊಸದಿಲ್ಲಿ-೧೧೦ ೦೧೮

೨. *ದೇಹಲೋಕದ ವಿಸ್ಮಯಗಳು : ಡಾ. ವಸಂತ. ಅ. ಕುಲಕರ್ಣಿ*

ಲಹರಿ ಪ್ರಕಾಶನ, ನಂ. ೩೪೦, ೫ನೇ ಮುಖ್ಯರಸ್ತೆ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ಬೆಂಗಳೂರು-೫೬೦ ೦೨೦, ಪ್ರಮು. ೨೦೦೫, ಪು. ೧೬೦, ರೂ. ೬೦/-

ಡಾ. ವಸಂತ ಕುಲಕರ್ಣಿ ದೇಹಶಾಸ್ತ್ರದಲ್ಲಿ ಪಾರಂಗತ ಪ್ರಾಧ್ಯಾಪಕರು. 'ದೇಹಲೋಕದ ವಿಸ್ಮಯಗಳು' ಅವರ ಅಪರೂಪದ ಕೃತಿ. ದೇಹವಾಸಿಯಾದ ನಾವು ದೇಹದ ಕ್ರಿಯಾಶೀಲ ಅಂಗಾಂಗಗಳ ಮಹಿಮೆಯನ್ನು ಅರಿಯಲಾರದೆ ಅರಿವುಗೇಡಿಯಾಗಿ ಉಳಿದಿದ್ದೇವಲ್ಲ ಎನಿಸುತ್ತದೆ. ಸೃಷ್ಟಿಸಿದ ಸಂವಿಧಾನವನ್ನು ಚಾಚೂ ತಪ್ಪದೆ ಪಾಲಿಸುವ ಅಂಗದ ಬಿಡಿ ಭಾಗಗಳೆಲ್ಲ ಒಟ್ಟಾಗಿ ಕಾರ್ಯತತ್ಪರ

ವಾಗಿರುವಾಗ ನಾವು ಅಸಹಕಾರ, ಅಪಚಾರವೆಸಗಿ ಅನಾರೋಗ್ಯದಿಂದ ಬಳಲುತ್ತಿದ್ದೇವೆಂಬ ವಿಚಿತ್ರ ಅರಿವು ಈ ಕೃತಿ ಓದುವದರಿಂದ ನಮಗಾಗುತ್ತದೆ. ಲೇಖಕರು ವೈದ್ಯಕೀಯದ ಜಟಿಲ ರಹಸ್ಯವನ್ನು ದೇಹಶಾಸ್ತ್ರವನ್ನು ಸರಳಗನ್ನಡದಲ್ಲಿ ಮನಂಬುಗುವಂತೆ ವಿವರಿಸಿದ್ದಾರೆ.

ದೇಹದ ಕೌತುಕಮಯ ಶಕ್ತಿ ಜೀವಕೋಶ. ನೂರಾರು ಸಂಸ್ಥೆಗಳ ಐಕ್ಯತೆಯ ಗೂಡು ದೇಹ. ಮೂತ್ರಪಿಂಡ ಕಲ್ಮಶವನ್ನು ಹೊರದೂಡುವ ಯಂತ್ರ. ಮನಸ್ಸು ದೈಹಿಕ ಕ್ರಿಯೆಗಳ ರಂಗಭೂಮಿ. ತನಗೆ ಬೇಡಾದುದನ್ನು ಭಿಡೆ ಇಲ್ಲದೆ ನಿರಾಕರಿಸುವ ಮಹಾತ್ಮ ದೇಹ. ಹೃದಯದ ಕ್ರಿಯೆ ಸ್ವಯಮಾಧಿಪತ್ಯ ಹಾಗೂ ಸಾರ್ವಭೌಮತ್ವ. ಸರ್ವರೂ ಹೃದಯದ ಅಧೀನ. ಅದು ಸ್ಥಬ್ಧಗೊಂಡರೆ ನಮ್ಮ ಅಸ್ತಿತ್ವ ಶೂನ್ಯ. ಈ ನಮ್ಮ ದೇಹವು ರಣಭೂಮಿ, ಕುರುಕ್ಷೇತ್ರ. ಶ್ವೇತಗೋಲಕಗಳು ಪಾಂಡವರು, ರೋಗಾಣುಗಳು ಕೌರವರು, ಯುದ್ಧ ಸಾರ್ವಕಾಲಿಕ ಅವಿಶ್ರಾಂತ. ನಮ್ಮ ಜಠರ ಉರಿಯುವ ಅಗ್ನಿಕುಂಡ; ಆದರೂ ಅಪಾಯವಿಲ್ಲ. ನಿಸರ್ಗದ ಹಲವು ಕೌತುಕಗಳ ಲೋಕ ಯಕೃತ್. ಜಠರದ ಪ್ರತಿಘಟನೆ ಎಂದರೆ ವಾಂತಿ-ವಾಕರಿಕೆ– ಈ ನುಡಿ ಮುತ್ತುಗಳನ್ನು ಲೇಖಕರ ವಿವರಣೆಗಳಿಂದ ಉಲ್ಲೇಖಿಸುತ್ತಿದ್ದೇನೆ. ಇವು ನದಿಯಲ್ಲಿಯ ನಾಲ್ಕು ಹನಿಗಳು ಮಾತ್ರ. ಇದೊಂದು ವಿಸ್ಮಯಗಳ ಕಿರುಕೋಶ.

– ಈಶ್ವರಚಂದ್ರ ಚಿಂತಾಮಣಿ, ಭಾವಸಾರ ನಗರ, ಬಿಜಾಪುರ-೫೮೬ ೧೦೩

೩. *ಕನ್ನಡ, ನನ್ನ ಕನ್ನಡ : ದೇಶಪಾಂಡೆ ಸುಬ್ಬರಾಯ*

ನಿಸ್ಸೀಮ ಪ್ರಕಾಶನ 'ನೆಲೆ', ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮, ಪ್ರಮು. ೨೦೦೭, ಪು. ೭೭, ರೂ. ೬೦/-

'ಉತ್ತಮ ಕವಿತೆಯ..... ಕಲಾತ್ಮಕತೆ ಇತ್ಯಾದಿಗಳು ಹೇಗಿರಬೇಕು ಎಂಬ ಬಗ್ಗೆ ವಿದ್ವಾಂಸ ಲೋಕ ಸ್ವೀಕರಿಸಿರುವ ತಿಳುವಳಿಕೆ ಕೆಲವುಗಳ ತೆಕ್ಕೆಗೆ ಇಲ್ಲಿಯ ಕೆಲವಾದರೂ ಕವನಗಳು ಸಿಗಲಿಕ್ಕಿಲ್ಲ..... ರಚನೆಗಳ ಕಲಾತ್ಮಕ ಯಶಸ್ಸಿಗಿಂತ ಹೆಚ್ಚಾಗಿ, ಕನ್ನಡ ಹೃದಯಗಳ ನೇರ ತಾಗುವಿಕೆಯತ್ತಲೇ ಆ ರಚನೆಗಳು ತಮ್ಮ ದೃಷ್ಟಿಯನ್ನು ಚಾಚಿಕೊಂಡಿವೆ''– ಇದು ಕವಿ ತಮ್ಮ ಮುನ್ನುಡಿಯಲ್ಲಿ ಓದುಗರಿಗೆ ನೀಡುವ ಸೂಚನೆಯ ಸಾರ. ಕವಿಯ ಸೂಚನೆಗಳನ್ನು ನೆನಪಿಟ್ಟೇ ಈ ಕವನಗಳನ್ನು ಓದಬೇಕು. ಎಂತಹ ಸಂದರ್ಭದಲ್ಲಿ ತಾನು ಈ ಕವಿತೆಗಳನ್ನು ಬರೆದೆ ಎಂದು ಕವಿ ಅನುಬಂಧ ರೂಪದ ಲೇಖನದಲ್ಲಿ ಹೇಳಿರುವುದನ್ನೂ ಮೊದಲೇ ಓದಿಕೊಂಡರೆ ಕವನಗಳ ಉದ್ದೇಶ ಇನ್ನಷ್ಟು ಸ್ಪಷ್ಟವಾಗುತ್ತದೆ.

ಕನ್ನಡ ನುಡಿ ಮಾತ್ರವನ್ನೇ ಕುರಿತು ಬರೆದ ೪೪ ಕವನಗಳು ಇಲ್ಲಿವೆ. ಮೊದಮೊದಲು ವಿಷಯದ ಏಕತಾನತೆ ಎನಿಸಿದ್ದು ಓದುತ್ತ, ಓದುತ್ತ ಸಣ್ಣಗೆ ಧ್ಯಾನವೆನಿಸತೊಡಗುತ್ತದೆ. ಕನ್ನಡಿಗನೊಬ್ಬನಿಗೆ ಕನ್ನಡ ಏನೇನೆಲ್ಲ ಆಗಬಹುದೆಂಬುದು ಅನಾವರಣಗೊಳ್ಳುತ್ತದೆ. ಹೊಯ್ಸಳ ಶಿಲ್ಪದ 'ಕನ್ನಡ ಲಾಸ್ಯ', ಬೇಲೂರು ಬಾಲೆಯ 'ನೃತ್ಯಗನ್ನಡ', ಧಾರವಾಡದ ಪೇಡಾದಂಥ ಕನ್ನಡ, ಬಿಳಿಜೋಳದ ರೊಟ್ಟಿಹಂಗ ಕನ್ನಡ, ಕುಂದಾಕನ್ನಡ, ಮತ್ಸ್ಯಕನ್ನಡ ಹೀಗೆ.

'ಎಷ್ಟು ಥಳ ಥಳ' ಕವನದಲ್ಲಿ ತೀರ ಸನಿಹದ ಅರ್ಥವುಳ್ಳ ಎರಡು ಪದಗಳನ್ನು ಸೂಚಿಸಿ ಅವೆರಡೂ ಬೇರೆ ಬೇರೆ ಎನ್ನುತ್ತ ಕನ್ನಡಕ್ಕೂ ಬೆಳಕಿಗೂ ಇರುವ ಸಾದೃಶ್ಯವನ್ನು ಕವಿ ಸ್ಥಾಪಿಸುತ್ತಾರೆ :

'ಎಷ್ಟು ಬದುಕು / ಎಂಬುದೇ ಬೇರೆ / ಎಷ್ಟೆಲ್ಲ ಬಾಳು / ಎಂಬುದೇ ಬೇರೆ'

'ಎಷ್ಟು ಬೆಳಕು / ಎಂಬುದೇ ಬೇರೆ / ಎಷ್ಟೆಲ್ಲ ಕನ್ನಡ / ಎಂಬುದೇ ಬೇರೆ'

ನನ್ನ ಕನ್ನಡ (೯) ಕವನದಲ್ಲಿ 'ನನ್ನ ಕನ್ನಡ. / ಕಟ್ಟಿಕೊಂಡವರ ರತ್ನಮಾಲೆ / ತೊಟ್ಟುಕೊಂಡವರ ರೇಷ್ಮೆನಾಲೆ / ನನ್ನ ಕನ್ನಡ. / ಸುತ್ತಿಕೊಂಡವರ ಜರಿ ರುಮಾಲೆ / ಅಟ್ಟುಕೊಂಡವರ ಒಡಿಯನ್ನ ದಾಲೆ' ಎಂದಾಗ ಸಹಜವಾಗಿ ಮನಸ್ಸು ಅರಳುತ್ತದೆ.

ಕನ್ನಡದ ಬಗ್ಗೆ ಬರೆಯುವ ಉತ್ಸಾಹದ ನಡುವೆಯೇ ಕವಿ ತೂಕಡಿಸಿದ ಸೂಚನೆಯೂ ಇದೆ. ನನ್ನ ಕನ್ನಡ (೫) ಕವಿತೆಯಲ್ಲಿ ಹೇಳುತ್ತಾರೆ : 'ಬ್ರಹ್ಮ / ತನ್ನ / ನಾಭಿ, / ಕಮಲವನ್ನೇ / ಕನ್ನಡ ತಾಯಿಯ

ಪೂಜೆಗೆಂದು / ಕೈಯಾರ ಎತ್ತಿಕೊಟ್ಟ' (ಪದ್ಮನಾಭ, ವಿಷ್ಣು, ಬ್ರಹ್ಮ, ಕಮಲಾಸನ). ವಿನ್ಯಾಸಕ್ಕಿಂತ ವಸ್ತುವಿಗಾಗಿ, ಕನ್ನಡದ ನಮ್ಮ ಪ್ರೀತಿಗಾಗಿ ಓದಬೇಕಾದ ಪುಸ್ತಕ ಇದು.

– ಡಾ. ಪ್ರಕಾಶ ಭಟ್, 'ಬಯಲು', ೧೯, ಹೊಯ್ಸಳನಗರ, ಧಾರವಾಡ-೫೮೦ ೦೦೩

೪. ಬಾನಂಗಳದ ಚುಕ್ಕಿಗಳು : ಡಾ. ಮಹಾಂತೇಶ ಮಲ್ಲನಗೌಡರ

ಮಾನಸ ಪ್ರಕಾಶನ. ಅಂಚೆ ಪೆಟ್ಟಿಗೆ-೧೪, ಕೊಪ್ಪಳ-೫೮೩ ೨೩೧. ಪ್ರಮು. ೨೦೦೪, ಪು. ೫೦, ರೂ. ೨೫/-

ಘನೀಭೂತ ಕತ್ತಲೆಯ ರಾತ್ರಿ ವಿಸ್ತಾರವಾದ ಆಕಾಶದಲ್ಲಿ ಹೊಳೆಹೊಳೆದು ಮಿನುಮಿನುಗಿ ಮುದ ನೀಡುವ ಚುಕ್ಕೆಗಳು ಸೀಮೆಯಿಲ್ಲದ ವಿಸ್ತಾರದ ಸಾಹಿತ್ಯದಂಗಳದಲ್ಲಿ ಈ ಚಿಕ್ಕ ಪುಟ್ಟ ಚುಟುಕುಗಳು, ಮಿಶಿ ಕೊಡುವ ಗುಟುಕುಗಳು. ಒಂದೇ ಹನಿಯಾದರೂ ಜೇನುತುಪ್ಪ ನಾಲಿಗೆ ಚಪ್ಪರಿಸುವಂತೆ ಮಾಡುತ್ತದೆ. ನಾಲಿಗೆಯ ತುದಿಗೆ ತುಟುಕು ತಾಗಿಸುವ ಉಪ್ಪಿನಕಾಯಿ ಲಟಿಕೆ ಹೊಡೆಸುತ್ತದೆ. ಅದೇ ರುಚಿಯಿದೆ ಮಹಾಂತೇಶರ ಚುಟುಕು ಕವನಗಳಿಗೆ. 'ಹೋಗಬೇಕು ನಿನ್ನೊಳಗಿನ ನಾನು / ನಾನು ಹೋದಾಗ ಎಲ್ಲಾ ನೀನು /ನೀನು ಹೋದಾಗ ಎಲ್ಲಾ ಲೀನ / ವಿಶ್ವಚೇತನದೊಳಗ ವಿಲೀನ.'

'ಪಕ್ಷಿ ಇರುವ ವರೆಗೆ ನೀನೊಂದು ಪಂಜರ / ನಂತರ ನೀ ಎಲುಬಿನ ಹಂದರ!' ಎನ್ನುವಲ್ಲಿ ಚೈತನ್ಯ ಪ್ರಾಣಪಕ್ಷಿ, ಆತ್ಮ ದೇಹ ಬಿಟ್ಟು ಹೋದಾಗ, ಅಶಾಶ್ವತ ಜಡ ದೇಹಕ್ಕೆ ಏನೂ ಬೆಲೆ ಇಲ್ಲವೆಂದು ಸಾರುತ್ತ ಕವಿ ತಮ್ಮ ಮುಂದಿನ ಅನೇಕ ಚಟುವಟಿಕೆಗಳಲ್ಲಿ ವೈವಿಧ್ಯಮಯ ವಿಷಯಗಳನ್ನೂ ವಿವರಿಸುತ್ತಾರೆ. ಅವುಗಳಲ್ಲಿ ಷಡ್‌ವೈರಿಗಳನ್ನು ಸಂಹರಿಸಬೇಕೆಂದೂ ಅಷ್ಟಮದಗಳನ್ನು ಬಿಡಬೇಕೆಂದೂ ಹೇಳುತ್ತ ಹುಟ್ಟಿನೊಡನೆಯೇ ಬೆನ್ನಿಗಂಟಿದ ಸಾವನ್ನು ಕವಿ ನೆನಪಿಸುತ್ತಾರೆ. ಯೌವನ, ಸಂಪತ್ತು, ಅಧಿಕಾರ, ಅವಿವೇಕ ಎಲ್ಲವೂ ವಿನಾಶಕಾರಿಯೆಂದು ಎಚ್ಚರಿಸುತ್ತಾರೆ. ಅಹಿಂಸೆ, ಸತ್ಯ, ಪ್ರೀತಿ, ನೀತಿ, ತತ್ವಗಳನ್ನು ಬೋಧಿಸಿದ ಗಾಂಧೀ, ಯೇಸು, ಸಾಕ್ರೆಟಿಸ್‌ರನ್ನು ಕೊಂದ ನಿರ್ದಯತೆಯನ್ನೂ ಚಿತ್ರಿಸುತ್ತಾರೆ.

ಅಲ್ಲಲ್ಲಿ ಲಘುಹಾಸ್ಯದ ಚುಟುಕುಗಳನ್ನೂ ಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದ ಗಂಭೀರ ಅಧ್ಯಯನ ಕವಿಯ ಬರವಣಿಗೆಗೆ, ಭಾಷೆಯ ಸೌಂದರ್ಯಕ್ಕೆ ಹೆಚ್ಚು ಶಕ್ತಿ ನೀಡುವಂತಾಗಬೇಕು.

೫. ಅವರವರ ಸಾವು : ಕೆ. ಪಿ. ಮೃತ್ಯುಂಜಯ

ಅಮರ್ತ್ಯ ಪ್ರಕಾಶನ, ೨೫/೨, ಅಫಿಷಿಯಲ್ ಕ್ವಾರ್ಟರ್ಸ್, ಸುಭಾಷನಗರ, ಮಂಡ್ಯ-೫೭೧ ೪೦೧
ಪ್ರಮು.೨೦೦೪, ಪು. ೧೨೭, ರೂ. ೭೫/-

ಭಯದ ಅರಿವು ಸ್ವಲ್ಪವೂ ಆಗದಂತೆ ಭಯಾನಕ ಸಾವನ್ನು ಎಷ್ಟು ಸುಂದರವಾಗಿ ಚಿತ್ರಿಸಬಹುದು ಎಂಬುದನ್ನು ಸಾವನ್ನು ಗೆದ್ದ ಕವಿ ತಮ್ಮ ಕವನಗಳಲ್ಲಿ ತೋರಿಸಿಕೊಟ್ಟಿದ್ದಾರೆ. 'ಅವರವರ ಸಾವು' ಓದುವಾಗ ಸಾವು ಇಷ್ಟೊಂದು ಸುಂದರವೇ?– ಅನಿಸಿಬಿಡುತ್ತದೆ.

ನರಭರ ಮಹಾಪೂರ ಎಲ್ಲಾದರೂ / ಬರಿದಾಗುವಂತೆ ಬರಿದಾಗುವುದು ಚೆಲುವು /
ಬರಿದಾಗುವುದೇ ಚೆಲುವು / ಬರಿದಾದರೆ ತಾನೆ ಚೆಲುವು. (ಅವರವರ ಸಾವು)

ಎಲ್ಲವೂ ಲಯವಾಗಿ ಆತ್ಮನಲ್ಲಿ ಒಂದಾಗಿ ಬಿಡುವುದು ಎಂಬ ಸರಳತೆಯಲ್ಲಿ ಮುಂದುವರಿದ ಸಾಲುಗಳು 'ನಿದ್ದೆಯುತ್ತುಂಗದಲ್ಲಿ ನಿಂತುಹೋಗುತ್ತವೆ / ಉಸುರೆ /' ಎಂದು ಕೊನೆಗೊಳ್ಳುತ್ತದೆ.

'ಅಷ್ಟೂ ಮಾತುಗಳುಳಿದ್ದು- / ನೀನು ದೂರವುಳಿದು: / ಕಣ್ಣು ಬಿಸಿಲಲ್ಲಿ ಬೆಂದು ಹೋದವು.' (ಅಷ್ಟೂ ಮಾತುಗಳುಳಿದು)– ಹೇಳಬೇಕೆಂದಿರುವದನ್ನೂ ಹೇಳಲಾಗದೆ, ದೂರವಾಗಿರುವ ಪ್ರಿಯತಮೆಯ ನಿರೀಕ್ಷೆಯಲ್ಲಿ ತೆರೆದಿಟ್ಟ ಕಣ್ಣುಗಳು ಬೆಂದು ಹೋಗುವದನ್ನು ಕಲ್ಪಿಸಿಕೊಂಡರೆ ಆ ವಿರಹದ ನೋವನ್ನು ಅನುಭವಿಸುವ ಪ್ರೇಮಿಯ ಬಗ್ಗೆ ಸಹಾನುಭೂತಿ ಉಕ್ಕುತ್ತದೆ. 'ನೀನು ನನ್ನನ್ನು / ಇಡಿಯಾಗಿಯೇ ನುಂಗುವುದು / ಗೊತ್ತು, ಚೆಲುವೆ / ನಿನ್ನ ಕಣ್ಣುಗಳು / ಇರುವುದು ನನ್ನ ನುಂಗಲೆಂದೇ.' ಒಂದೇ

ಒಂದಕ್ಷರವನ್ನೂ ಉಸುರದ, ಸಂಯೋಗದ ಅದಮ್ಯ ಬಯಕೆ, ಪ್ರಿಯೆಯ ಪ್ರಬಲ ಕಾಮನೆಯನ್ನರಿಯುವ ಕವಿ ನಿಃಶಬ್ದ ಕಣ್ಣುಗಳು ಮಾತಾಡುವ ಅಗಾಧ ಶಕ್ತಿಯನ್ನು ಸುಂದರವಾಗಿ ವರ್ಣಿಸಿದ್ದಾರೆ.

ಸವರ್ಣೀಯರ ಪ್ರತಿಕ್ಷಣದ ಸುಖ-ಸಂತೋಷಕ್ಕೆ ರಕ್ತವನ್ನೇ ಬೆವರಾಗಿ ಹರಿಸಿ ದುಡಿದ ಅಸಹಾಯಕ ದುರ್ಬಲರನ್ನು ಹೇಳ ಹೆಸರಿಲ್ಲದಂತೆ ಮೆಟ್ಟಿ ನಲಿವ ಮೇಲ್ವರ್ಗದ ಅಟ್ಟಹಾಸ ಕ್ರೌರ್ಯ ಚಿತ್ರಿಸುವಲ್ಲಿ ಕವಿಯ ರೋಷದ ಜೊತೆಜೊತೆಗೆ ಇಡಿಯಾಗಿ ಉದ್ಧರಿಸುವಂತಿದೆ `ಜಕ್ಕಣರು' ಕವನ.

ಸಾವು, ಅಧ್ಯಾತ್ಮ, ದೇಶಪ್ರೇಮ, ಸಾಮಾಜಿಕ ಅವ್ಯವಸ್ಥೆಯಂತಹ ಗಹನ ಗಂಭೀರ ವಿಷಯಗಳಿಗೆ ಅಂತರಂಗ ತೆರೆದುಕೊಂಡ ಕವಿಯ ಕಲ್ಪನೆಗೆ ಸಿಕ್ಕ ಶಬ್ದಗಳು ವಿವಿಧ ರಂಗುರಂಗಿನ ಭಾವಗಳ ದಿರಿಸು ತೊಟ್ಟು ಕುಣಿದಾಡಿವೆ. ಪ್ರೀತಿ, ಸ್ನೇಹ, ಶೃಂಗಾರ, ರಸಿಕತೆಯನ್ನೆಲ್ಲ ಚೆಲ್ಲಾಡಿ ಭಾವುಕರನ್ನು ನಲಿಸಿವೆ. ಒಳ್ಳೊಳ್ಳೆಯ ಕವನಗಳ ಜೊತೆಗೆ ಲಘುವಾಗಿಯೂ ಬಂದಿವೆ. `ಅಪರವರ ಸಾವು' ಗಮನಾರ್ಹ ಸಂಗ್ರಹ.

– ಸುಮಿತ್ರಾ ಹಲವಾಯಿ, 'ವಿಶಾಲ', ಶಕ್ತಿನಗರ, ೨ ನೆಯ ಮುಖ್ಯರಸ್ತೆ, ಧಾರವಾಡ-೫೮೦ ೦೦೪

೬. *ಬೆಳಕು ಹಂಚಿದ ಬಾಲಕ ಮತ್ತು ನಾನು ಗಾಂಧಿ ಆಗ್ತೀನೆ : ಡಾ. ಆರ್. ವಿ. ಭಂಡಾರಿ*

ಬಂಡಾಯ ಪ್ರಕಾಶನ, ಅರಲಗಟ್ಟಿ-೫೮೧ ೪೬೦, ಪ್ರಮು. ೨೦೦೪. ಪು. ೫೭. ರೂ. ೨೫/-

ಈ ಕೃತಿಯಲ್ಲಿ ಎರಡು ಮಕ್ಕಳ ನಾಟಕಗಳಿವೆ. `ಬೆಳಕು ಹಂಚಿದ ಬಾಲಕ' ಮತ್ತು `ನಾನು ಗಾಂಧಿ ಆಗ್ತೀನೆ'. ಮೊದಲ ನಾಟಕ, ಬಾಲಕನಾಗಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ನೇರವಾಗಿ ಒಳಗೊಂಡಿಗೊಂಡಿರುವ ವಸ್ತುವನ್ನು ಹೊಂದಿದ್ದರೆ: ಎರಡನೆಯದು, ಮಕ್ಕಳ ಮೇಲೆ ಗಾಂಧೀಜಿ ಬೀರಿದಂತಹ, (ಮಕ್ಕಳದೇ ಆದ ರೀತಿಯ) ಪ್ರಭಾವವನ್ನು ಕುರಿತದ್ದಾಗಿದೆ.

`ನಾನು ಗಾಂಧಿ ಆಗ್ತೀನೆ' ಅನೇಕ ಕೋನಗಳಿಂದ ಒಳ್ಳೆಯ ಮಕ್ಕಳ ನಾಟಕ. ತಾನೂ ಗಾಂಧೀಜಿಯಂತೆಯೇ ಆಗಬೇಕು ಎಂಬ ಮುಗ್ಧ ಹಂಬಲದ ಉತ್ತಮ ಎಂಬ ಬಾಲಕನ ಕಥೆ ಇಲ್ಲಿದೆ. ಗಾಂಧೀಜಿ ಮಾಡಿದ್ದ ಒಂದು ಚಿಕ್ಕ ಕಳುವನ್ನು ಮೊದಲ್ಗೊಂಡಂತೆ, ಸಾಮಾಜಿಕ ಅನ್ಯಾಯ ಒಂದರ ವಿರುದ್ಧ ಉಪವಾಸ ಮಾಡುವ ವರೆಗೂ, ಬಾಲಕ ಉತ್ತಮ (ಒಳಿತು ಕೆಡಕು ಎರಡರಲ್ಲೂ) ಗಾಂಧೀಜಿಯ `ಹೆಜ್ಜೆಗಳಲ್ಲಿ ಹೆಜ್ಜೆ' ಇಡುತ್ತಾನೆ. ಉತ್ತಮನ ವಯದ ಬಾಲಕನೊಬ್ಬನ ಮುಗ್ಧ ಕನಸುಗಳು, ಅದರ್ಶದ ಹಂಬಲಗಳು, ವಿಸ್ಮಯದ ಪ್ರಯತ್ನಗಳು ಮತ್ತು ಅವರೊಟ್ಟಿಗೇ ಆತನ ವಯಸಹಜ ಆಸೆಗಳು (ಜಾಮೂನು ಪ್ರಸಂಗ), ಈ ಮಕ್ಕಳ ನಾಟಕದಲ್ಲಿ ಒಂದರೊಳಗೊಂದು ಸ್ವಾಭಾವಿಕವಾಗಿ ಕಟ್ಟಿಕೊಳ್ಳುತ್ತ ಹೋಗುತ್ತವೆ. ಆದರೆ, ಕೊನೆಯಲ್ಲಿ ಬರುವ ಉತ್ತಮನ ಉಪವಾಸ ಸತ್ಯಾಗ್ರಹದ ಜೋಡಣೆ ಮಾತ್ರ ಸ್ವಲ್ಪ `ಒಜ್ಜೆ' ಆಯಿತು ಎನಿಸುತ್ತದೆ. ತಂದೆ, ತಾಯಿ, ಅಜ್ಜಿ (ಎಂದರೆ, ಹೇಳುವವರು, ಕೇಳುವವರು, ಯಾವುದು ಎಷ್ಟು ಸರಿ ಎಂದು ತಿಳಿಸಿ ಬಂಬಿಸುವವರು) ಇತ್ಯಾದಿಗಳೆಲ್ಲರೂ ಇರುವ, ಕೇವಲ ೧೩-೧೪ ರ ಪ್ರಾಯದ ಬಾಲಕನೊಬ್ಬ, ದೇವಾಲಯದಲ್ಲಿ ಹರಿಜನರ ಪ್ರವೇಶ ನಿಷೇಧವನ್ನು ವಿರೋಧಿಸಿ ಐದು ದಿನಗಳ ವರೆಗೆ ಉಪವಾಸ ಸತ್ಯಾಗ್ರಹ ಮಾಡುತ್ತಾನೆ ಎಂದರೆ, ಸಾಮಾನ್ಯ ವ್ಯವಹಾರ ಗತಿಗಳಲ್ಲಿ ನಂಬುವದು ಕಷ್ಟ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಾಲ್ಯದ ಶಾಲಾ ಬದುಕನ್ನು ಕುರಿತಂತೆ ಕಟ್ಟಲಾದ `ಬೆಳಕು ಹಂಚಿದ ಬಾಲಕ' ನಾಟಕದಲ್ಲಿ ಬಾಲಕ ಭೀಮನ ಅಧ್ಯಯನಶೀಲತೆ, ಬುದ್ಧಿವಂತಿಕೆ, ಪ್ರಶ್ನಿಸುವ ಗುಣ, ಕ್ರೀಡಾಪಟುತ್ವ ಎಲ್ಲವೂ ವ್ಯಕ್ತವಾದಂತೆ, ಆತನ ಸೀಮಿತತೆ, ಅಸಹಾಯಕತೆ, ಅನ್ಯಾಯಕ್ಕೀಡಾಗುವಿಕೆ ಈ ಎಲ್ಲವನ್ನೂ, ಈ ಮಕ್ಕಳ ನಾಟಕದಲ್ಲಿ ಸ್ಫುಟವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ನಾಟಕದ ಬಹಳಷ್ಟು ನಡೆ ಮತ್ತು ಬೆಳವಣಿಗೆಗಳು ಸಹಜ ಗತಿಗೆ ಸಮೀಪದಲ್ಲಿವೆ. ಆದರೂ: ಈ ನಾಟಕ ಓದುತ್ತಿದ್ದಂತೆಯೇ, ಒಂದು ಹಂತದಲ್ಲಿ ತಲೆ ಎತ್ತುವ ಒಂದು ಪ್ರಶ್ನೆಯನ್ನು ಕುರಿತಂತೆ ಇಲ್ಲಿ ಚರ್ಚಿಸಲೇಬೇಕು.

ಸಾಮುದಾಯಿಕವಾದ. ಎಷ್ಟೆಲ್ಲ ತಾತ್ವಿಕ ಸಮಸ್ಯೆಗಳನ್ನು, ಎಷ್ಟೆಲ್ಲ ತೂಕದ ವಿಶ್ಲೇಷಣೆಗಳನ್ನು, ಗಂಭೀರ ಮಾತುಗಳನ್ನು. ಎತ್ತರದ ವಿಚಾರಗಳನ್ನು ಮಕ್ಕಳ ನಾಟಕಗಳಲ್ಲಿ ಪ್ರಸ್ತಾಪಿಸಬಹುದು ಎಂಬುದು, ವಿಮರ್ಶಕರ. ಅದಕ್ಕೂ ಮುಖ್ಯವಾಗಿ, ಮಕ್ಕಳ ಮನಸ್ಸು ತಜ್ಞರ ಪ್ರಶ್ನೆ. ಈ ಎಲ್ಲವುಗಳನ್ನು ಪ್ರಸ್ತಾಪಿಸಬಹುದೇ ಆದಲ್ಲಿ; ದೃಶ್ಯಗಳ ಯಾವ ರೀತಿಯ ಕಟ್ಟುವಿಕೆಗಳಲ್ಲಿ, ಸಂಭಾಷಣೆಯ ಯಾವ ರೀತಿಯ ಹೆಣೆಯುವಿಕೆಗಳಲ್ಲಿ, ನಟವರ್ಗದವರ ಯಾವ ಬಗೆಯ ಸಂಯೋಜನೆಗಳಲ್ಲಿ ಇದನ್ನೆಲ್ಲ ನಿರ್ವಹಿಸಬೇಕು ಎಂಬುದು ನಾಟಕಕಾರನ ಸಮಸ್ಯೆ. ಈ ಪ್ರಶ್ನೆ ಮತ್ತು ಈ ಸಮಸ್ಯೆ ಎರಡನ್ನೂ ಗಮನದಲ್ಲಿಟ್ಟುಕೊಂಡು ನೋಡಿದಾಗ ಭಂಡಾರಿ ಅವರು, ಈ ದಿಕ್ಕಿನಲ್ಲಿ, ಎಂದರೆ, ಈ ಪ್ರಶ್ನೆ ಮತ್ತು ಸಮಸ್ಯೆಗಳಿಗೆ ತಕ್ಕ ರೀತಿಯ ಉತ್ತರಗಳಾಗಬಹುದಾದ, ನಾಟಕದ ಬರಹ ತಾಂತ್ರಿಕ ಸಾಧ್ಯತೆಗಳ ದಿಕ್ಕಿನಲ್ಲಿ ಹೆಚ್ಚು ಆಲೋಚಿಸಲಿಲ್ಲ ಎನಿಸುತ್ತದೆ. ಇದಕ್ಕೆ ನಿದರ್ಶನವಾಗಿ, ನಾಟಕದಲ್ಲಿ ನಾಟಕವಾಗಿ ಬರುವ ಬುದ್ಧ ಮತ್ತು ಆನಂದ ಇವರ ಸಂಭಾಷಣೆಗಳನ್ನು ಗಮನಿಸಬಹುದು. ಅಲ್ಲದೆ; ಈ ಸನ್ನಿವೇಶದಲ್ಲಿಯೇ ಬರುವ ಒಂದು ಸಂಭಾಷಣೆಯ ಒಂದು ವಾಕ್ಯವನ್ನು ನೋಡಬಹುದು :

ಇಲ್ಲಿ, ಬುದ್ಧ ಪಾತ್ರವನ್ನು ನಿರ್ವಹಿಸಿದ ಭೀಮ; ಈಗಾಗಲೇ ಬರೆದುಕೊಟ್ಟ ಬುದ್ಧ ಪಾತ್ರಧಾರಿಯ ಮಾತುಗಳ ಜೊತೆ ಜೊತೆಗೇ: ``ಯಾವ ಧರ್ಮ ನಮ್ಮನ್ನು ಶೋಷಣೆಗೆ ಗುರಿಪಡಿಸಿತೊ ಅದನ್ನು ಸರಿ ಮಾಡಬೇಕು'' ಎಂಬ ಮಾತನ್ನು ತಾನೇ ತತ್‌ಕ್ಷಣ ಜೋಡಿಸುತ್ತಾನೆ ಎಂಬ ಪ್ರಸ್ತಾಪ ಬರುತ್ತದೆ. ಒಂದು ಪಾತ್ರ ಮಾತ್ರವಾದ, ಅದೂ ಒಂದು ಚಿಕ್ಕ ತರಗತಿಯ ವಿದ್ಯಾರ್ಥಿ ಮಾತ್ರನಾದ ಭೀಮ, 'ಪಾತ್ರ'ದ ಆಲೋಚನಾ ಸರಣಿಯ ತೀವ್ರದಲ್ಲಿ, ಎಷ್ಟೆಲ್ಲ ತನ್ನಷ್ಟಕ್ಕೆ ತಾನೇ ತೊಡಗಿಸಿಕೊಂಡುಬಿಡುತ್ತಾನೆಂದರೆ, ಆ ಆಲೋಚನಾ ಸರಣಿಗೊಂದು ಅಪೂರ್ವ ಮಾನವೀಯ ಎತ್ತರದ ಹೊಸ ಆಯಾಮವನ್ನೇ ನೀಡಿಬಿಡುತ್ತಾನೆ ಎಂದು ಸೃಷ್ಟಿಸುವದು ಎಷ್ಟು ಮಟ್ಟಿಗೆ ವಾಸ್ತವಕ್ಕೆ ಸಮೀಪವಾದೀತು ಎಂದು ಪ್ರಶ್ನೆ ಎದ್ದೇ ಏಳುತ್ತದೆ.

– ದೇಶಪಾಂಡೆ ಸುಬ್ಬರಾಯ, 'ನೆಲೆ', # ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮

೭. ಚಂದಿರನ ಕಣ್ಣು ಇಂಗಲಾರದ ಹುಣ್ಣು : ಮೂಡ್ನಾಕೂಡು ಚಿನ್ನಸ್ವಾಮಿ

ಮಾನವ ಧರ್ಮಪೀಠ, ೪೯, ಬಸವನಗುಡಿ, ಬೆಂಗಳೂರು-೪, ಪ್ರಮು. ೨೦೦೪, ಪು. ೧೨೦, ರೂ. ೮೦/-

ಮೂಡ್ನಾಕೂಡು ಚಿನ್ನಸ್ವಾಮಿಯವರ ಐದು ಸಂಕಲನಗಳಿಂದ ಆಯ್ದ ೫೫ ಕವನಗಳು ಇಲ್ಲಿವೆ. ಯಾವ ಕವಿತೆಗಳು ಯಾವ ಸಂಕಲನದಿಂದ ಆಯ್ದವುಗಳೆಂಬದನ್ನು ನಮೂದಿಸಿದ್ದರೆ ಚೆನ್ನಾಗಿತ್ತು.

ಚಿನ್ನಸ್ವಾಮಿಯವರು ತಮ್ಮ ಮೊದಲ ಸಂಕಲನದ ಬಿಡುಗಡೆಯ ಸಂದರ್ಭದಿಂದಲೂ ನನಗೆ ಆತ್ಮೀಯರು. ಅತ್ಯಂತ ಸಂಕೋಚದ ವ್ಯಕ್ತಿಯಾಗಿದ್ದ ಅವರು ಕವಿತೆಯಲ್ಲಿ ತಮ್ಮ ಆ ಗುಣವನ್ನು ಉಳಿಸಿಕೊಂಡಾಗ ಅತ್ಯುತ್ತಮ ಕವನಗಳನ್ನು ಬರೆದಿದ್ದಾರೆ. ಸರಳತೆಯಲ್ಲಿ ಅವರು ಸಾಧಿಸಿರುವ ಯಶಸ್ಸು ಅಪರೂಪದ್ದು. ಯಾವಾಗ ಅವರು ವಾಚಾಳಿತನಕ್ಕಿಳಿದು ಉದ್ದೇಶಪೂರ್ವಕ ದಲಿತಲೋಕದ ಅನುಭವಗಳ ದಾಕ್ಷಿಣ್ಯಕ್ಕೊಳಗಾಗಿ ಬರೆಯುತ್ತಾರೋ ಆವಾಗ ಅತ್ಯಂತ ಕೃತಕವಾದ ಆವರಣ ಸೃಷ್ಟಿಯಾಗುತ್ತದೆ. ಕವಿತೆಯು ಜೀವಂತ ಅನುಭವಕ್ಕೆ ಬದಲಾಗಿ ಆ ಪರಿಸರದ, ಪಾತ್ರಗಳ ಕುರಿತು ಮರುಕ ಹುಟ್ಟಿಸುವುದಕ್ಕೆ ಮಾತ್ರ ಇಂಥ ರಚನೆಗಳು ಸೀಮಿತಗೊಳ್ಳುತ್ತವೆ. ಇವುಗಳ ಕಥನಗುಣವನ್ನು ಮೆಚ್ಚಬಹುದೇ ಹೊರತು ಕಾವ್ಯಗುಣವನ್ನಲ್ಲ. ಈ ಸಂಕಲನದ ಬಹಳಷ್ಟು ಕವಿತೆಗಳು ಈ ವರ್ಗಕ್ಕೆ ಸೇರಿವೆ.

ಚಪ್ಪಲಿ ಮತ್ತು ನಾನು, ಅಳುವ ಬುದ್ಧ, ನಾನೊಂದು ಮರವಾಗಿದ್ದರೆ, ಎಲುಬಿನ ಹಂದರದೊಳಗೆ, ಬೊಗಸೆಯಲಿ ಚಂದ್ರ, ಯಾರು ನೀ ಕವಿತೆ, ಕತ್ತಲನ್ನು ಕುರಿತು, ನನ್ನ ಕವಿತೆಗೆ– ಇವು ಚಿನ್ನಸ್ವಾಮಿಯವರ ಯಶಸ್ವಿ ಕವಿತೆಗಳ ಸಾಲಿಗೆ ಸೇರುತ್ತವೆ. ಇವುಗಳಲ್ಲಿ ಕೂಡ ಪೂರ್ಣ ಪ್ರಮಾಣದ ಯಶಸ್ಸು ನಾನೊಂದು

ಮರವಾಗಿದ್ದರೆ, ಎಲುಬಿನ ಹಂದರದೊಳಗೆ, ನನ್ನ ಕವಿತೆಗೆ– ಈ ಕವಿತೆಗಳಿಗೆ ಪಾತ್ರ. ಕನ್ನಡ ಕಾವ್ಯಸಂದರ್ಭದಲ್ಲಿ ಚಿನ್ನಸ್ವಾಮಿಯವರಿಗೆ ಗೌರವ ತರಬಲ್ಲ ರಚನೆಗಳಿವು.

ನಾನೊಂದು ಮರವಾಗಿದ್ದರೆ / ಹಕ್ಕಿ ಗೂಡು ಕಟ್ಟುವ ಮುನ್ನ / ಕೇಳುತ್ತಿರಲಿಲ್ಲ. ನೀನು ಯಾವ ಕುಲ; / ಬಿಸಿಲು ನನ್ನ ಅಪ್ಪಿಕೊಂಡಾಗ / ನರಳಾಗುತ್ತಿರಲಿಲ್ಲ ಮೈಲಿಗೆ: / ತಂಬೆಲರ ಕೂಡ ಎಲೆಗಳ ಸ್ನೇಹ / ಮಧುರವಾಗುತ್ತಿತ್ತು (ನಾನೊಂದು ಮರವಾಗಿದ್ದರೆ)

ನಮ್ಮ ಎಲುಬಿನ ಹಂದರದೊಳಗೊಂದು / ಮನೆಯಿದೆ. ಉಚ್ಛ್ವಾಸ ನಿಶ್ವಾಸಗಳ / ಓಂಕಾರವಿದೆ : ಅಲ್ಲಿ ರಾಮನಿದ್ದಾನೆ / ನಮ್ಮ ಎಲುಬಿನ ಹಂದರದೊಳಗೊಂದು / ಮಸೀದಿಯಿದೆ. ಅಗೋ ಮೇಲೆ ನೋಟ ನಕ್ಷತ್ರ / ಕಣ್ಣಲಗೆ ಚಂದಿರ: ಅಲ್ಲಿದ್ದಾನೆ ಅಲ್ಲಾ (ಎಲುಬಿನ ಹಂದರದೊಳಗೆ)

ನನ್ನ ಕವಿತೆಗೆ ಅಲ್ಲಮನ ಮಮತೆ / ಬಸವಣ್ಣನ ಹೃದಯವಿರಲಿ / ನನ್ನ ಕವಿತೆಗೆ ಬುದ್ಧನ ಸ್ವಾಸ್ಥ್ಯ / ಆನಂದನ ಸ್ನೇಹವಿರಲಿ / ಇರಲಿ ಬಾಹುಬಲಿಯ ತ್ಯಾಗ / ಭರತನ ಪ್ರೀತಿ (ನನ್ನ ಕವಿತೆಗೆ)

ಇಂಥ ಕವಿತೆಗಳಿಗೆ ಯಾವ ವಿಮರ್ಶೆಯ, ಹೊಗಳಿಕೆ-ತೆಗಳಿಕೆಗಳ ಹಂಗಿಲ್ಲ. ಅವು ತಮ್ಮ ಸಹಜ ಕಾಂತಿಯಿಂದ ಬೆಳಗುತ್ತವೆ. ಈ ಬಗೆಯ ಕವಿತೆಗಳ ಬೆಳಕಿನಲ್ಲಿ ಚಿನ್ನಸ್ವಾಮಿಯವರು ಆತ್ಮಶೋಧ ಮಾಡಿಕೊಂಡರೆ ಇನ್ನಷ್ಟು ಮಹತ್ವದ ರಚನೆಗಳನ್ನು ಕನ್ನಡಕ್ಕೆ ನೀಡಬಲ್ಲರು.

ಸೌಜನ್ಯದ ಮೆಚ್ಚುಗೆಯ ಹೊನ್ನಶೂಲಕ್ಕೆ ತಮ್ಮನ್ನೊಡ್ಡಿಕೊಳ್ಳದೆ, ವಿಮರ್ಶೆ-ವಿಮರ್ಶಕರ ಕುರಿತು ಅನಗತ್ಯ ಪೂರ್ವಗ್ರಹವಿಟ್ಟುಕೊಳ್ಳದೆ, ಸ್ವಸಾಮರ್ಥ್ಯದ ಅರಿವಿದ್ದೂ ಆತ್ಮಪ್ರಶಂಸೆಯ ಸಂಭ್ರಮಕ್ಕೆಳಸದೆ ಚಿನ್ನಸ್ವಾಮಿಯವರು ತಮ್ಮನ್ನು ಕವಿತೆಯಲ್ಲಿ ಕರಗಿಸಿಕೊಳ್ಳಬೇಕು. ಮಾತಿಗಿಂತ ಕವಿತೆಯ ಮೌನ ಟೀಕೆ-ವಿಮರ್ಶೆಗಳನ್ನು ಜಯಿಸಬೇಕು. ಮೂಕವಾಗಿಸಬೇಕು. `ಕಾವ್ಯೋದ್ಯಾನದ ಬಾಡದ ಕುಸುಮಗಳು' ಎಂಬ ಹೆಸರಿನಲ್ಲಿ ತಮ್ಮ ಕವಿತೆಗಳ ಕುರಿತು ಅವರು ಬರೆದುಕೊಂಡಿರುವ ದೊಡ್ಡ ಗಂಟಲಿನ ಕೀರಲು ಮಾತುಗಳ ಹಿನ್ನೆಲೆಯಲ್ಲಿ ಮೇಲಿನ ಮಾತನ್ನು ಬರೆಯಲಾಗಿದೆ. ಅಲ್ಲದೆ ಸುಮಾರು ಎರಡು ದಶಕಗಳ ಚಿನ್ನಸ್ವಾಮಿಯವರೊಂದಿಗಿನ ಆತ್ಮೀಯ ಸಲಿಗೆ ಹಾಗೂ ಅವರ ಬೆಳವಣಿಗೆಯ ಬಗೆಗೆ ನನಗಿರುವ ಪ್ರಾಮಾಣಿಕ ಹಾರೈಕೆಯಿಂದ ಕೆಲವು ನಿಷ್ಠುರ ಮಾತುಗಳನ್ನು ಹೇಳಿದ್ದೇನೆ. ಮೆತ್ತಗಿನ ದನಿಯಲ್ಲಿ ಅವರ ಕವಿತೆ ಮಾಗಲಿ.

– ಬಸವರಾಜ ಪಕ್ಕುಂದ : # ೩೨, ಮಾಲತೇಶ ಬಿಲ್ಡಿಂಗ್, ೧ನೇ ಕ್ರಾಸ್, ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೮

ಸಂಕಲನ : ಅನಿಸಿಕೆ

೧. ನೀವ್ಯಾಕೆ ಮಕ್ಕಳಿಗಾಗಿ ಎಂದೇ ಒಂದು ಸಣ್ಣ ಮಾಸಪತ್ರಿಕೆಯಂತಹದನ್ನು ಆರಂಭಿಸಬಾರದು. ನಮನಮಗೆ ತಿಳಿದಂತೆ contribute ಮಾಡ್ತೀವಿ, ಕತೆಗಳು ಅದೂ ಇದೂ ಅಂತ.... ಈ ಬಾರಿ ನಿಮ್ಮ ಕಡೀಪುಟ ನೋಡಿ ಅನ್ನಿಸಿತು.... ಕಡ್ಲೀ ಗಿಡಕ್ಕ ನಿಚ್ಚಣಿಕಿ ಇಟ್ಟು, ಮ್ಯಾಲ ಹತ್ತಿದ ಒಂಟೀ ಕತಿ, ಬೆಕ್ಕಿನ ಬೆನ್ನ ಮ್ಯಾಲ ಭರತನಾಟ್ಯ ಮಾಡಿತ ಇಲಿಮರಿ ಕತಿ, ಇಂಥಾವು ಒಂದಿಷ್ಟು ಕತಿ ನಮಗೂನ ಹೇಳಬಾರದಾ ತಮ್ಮಾ?

`ಕತಿ ಹೇಳಬೇಕು, ಕತಿ ಕೇಳಬೇಕು, ಹೇಳಿಕೊಂತ ಕೇಳಿಕೊಂತ ಕತಿ ಆಗಿಬಿಡಬೇಕು' ನಿಜ. ಈ ಜಗತ್ತಿನ ಕತಿ ಬಗೆಗೆ ಮಕ್ಕಳಿಗಿರುವ ಅಚ್ಚರಿ, ಕುತೂಹಲ, ಪ್ರೇಮ ಈ ಜಗತ್ತಿನ ವ್ಯಥೆ ಬಗೆಗೆ ಸಂತರಿಗೆ, ಸಹೃದಯರಿಗೆ ಇರುವ ಕರುಣೆ, ಆರ್ದ್ರತೆ ಇರುವ ತನಕ ಮಾತ್ರವೆ ನಾವು ಮನುಷ್ಯರಾಗಿ ಉಳಿಯುವುದು ಎನ್ನುವುದನ್ನು ಕಡೀಪುಟ ಅದೆಷ್ಟು ಮಾರ್ಮಿಕವಾಗಿ ಅಭಿವ್ಯಕ್ತಿಸಿದೆ...

ದಮಯಂತಿ ನರೇಗಲ್ಲರ 'ಕುರುಡುಗಣ್ಣು' ಮನೋಜ್ಞವಾಗಿ ಮೂಡಿಬಂದಿದೆ. ತೀರಾ ಯಾಂತ್ರಿಕ ಜೀವನದಲ್ಲಿ ಮುಳುಗಿರುವ ಮನುಷ್ಯ ಪ್ರಕೃತಿಸೌಂದರ್ಯಕ್ಕೆ, ರಸಾನುಭೂತಿಗೆ ಕುರುಡಾಗಿರುವಾಗ ಈ ಯಾಂತ್ರಿಕತೆಗೆ ಕುರುಡಾದ ಕುರುಡವ್ವನಂತಹವರು ಮಾತ್ರ ಭ್ರಮರಗಾನ, ಪಾತರಗಿತ್ತಿಯ ಕುಣಿತ, ಕೋಗಿಲೆಯ ಇಂಚರವನ್ನು ಕೇಳಬಲ್ಲರು.

ಬಸವರಾಜ ವಕ್ಕುಂದವರ ಪಾ. ವೆಂ. ಆಚಾರ್ಯರ ಬಗೆಗಿನ ಲೇಖನ ಪಾ. ವೆಂ.ರ ಪ್ರತಿಭೆಯ ಆಳ ವಿಸ್ತಾರಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ತಾರಿಣಿ ಶುಭದಾಯಿನಿ ಅವರ 'ಭೈರಪ್ಪನವರ ಅವಿದ್ಯೆಯ ಆವರಣ'ದಲ್ಲಿನ ಆ ನಿಲುವನ್ನು ಒಪ್ಪಲಾಗುವುದಿಲ್ಲ. 'ಲೈಂಗಿಕ ವಿಕೃತಿಗಳನ್ನು ವರ್ಣಿಸುವ ಮೂಲಕ ಕೀಳು ಅಭಿರುಚಿಯ ಪುಸ್ತಕ', 'ಇತಿಹಾಸವನ್ನು 'ಹಿಸ್ಟರಿ'ಯಾಗಿ ರೂಪಿಸಿಕೊಳ್ಳುವ ತಂತ್ರ' ಇವು ಅರ್ಥವಾಗುವುದಿಲ್ಲ.

ಏನಾದರಾಗಲಿ, ಗಜಲ್‌ಗಳು, ಕವಿತೆಗಳು, ಸಂಶೋಧನಾ ಲೇಖನಗಳು, ಪುಸ್ತಕ ಪರಿಶೀಲನೆ ಹೀಗೆ ಸಂಪ್ರದಾಯಬದ್ಧ, ಸಾಹಿತ್ಯಿಕ ಪರಿಧಿಯೊಳಗೇ ಮೈತುಂಬಿಕೊಂಡು ಸಂಕಲನ ಅತ್ಯಂತ ಸುಂದರವಾಗಿ, ಆಕರ್ಷಕವಾಗಿ ಮಿರುಗುತ್ತಿರುವಂತೆ, ಅದರ ಆರೈಕೆ ನೋಡಿಕೊಳ್ಳುತ್ತಿರುವ ನಿಮ್ಮಿಬ್ಬರ ಪರಿಶ್ರಮಕ್ಕೆ ಅಭಿನಂದನೆಗಳು.

– ಎಲ್. ವಿ. ಶಾಂತಕುಮಾರಿ, ಬೆಂಗಳೂರು

೨. ಮೇ-ಜೂನ್ ಸಂಚಿಕೆಯಲ್ಲಿ ಕಡೀಪುಟದಲ್ಲಿ ಕತೆಯ ಕುರಿತು ನೀವು ಬರೆದ ಸಾಲುಗಳು ಮನಮುಟ್ಟುವಂತಿವೆ. 'ಕತಿ ಅನ್ನೂದು ಕನಸಿನ ಕಣ್ಣಿನ ಪರದಿ ಮ್ಯಾಲ ಪ್ರತಿಕ್ಷಣ ಪ್ರತಿನಿತ್ಯ ಹೊಸ ಹೊಸ ಪದಾ, ದನಿ, ಹಾಡು ಪಾಡು ಹೊತಗೊಂಡು ಬರುವ ಪ್ರತಿನಿತ್ಯದ ಸೂರ್ಯೋದಯ ಇದ್ಧಂಗ, ಚಂದ್ರೋದಯ ಇಂದ್ಧಂಗ....' ತುಂಬ ಇಷ್ಟವಾಯಿತು.

ಹಾರುವ ಹಕ್ಕಿಗಳನ್ನು ಕೆಮರಾದಲ್ಲಿ ಸೆರೆಹಿಡಿಯುತ್ತಿದ್ದ ತೇಜಸ್ವಿಯವರನ್ನು ಅವರೊಳಗಿನ ಪಕ್ಷಿಯೇ ಸೆರೆಹಿಡಿದುದನ್ನು ಸಾಂಕೇತಿಕವಾಗಿ ಸೂಚಿಸಿದ 'ತೇಜಸ್ವಿ : ಹಕ್ಕಿ : ಶ್ರದ್ಧೆ' ಲೇಖನ ಅರ್ಥಪೂರ್ಣ ವಾಗಿದೆ. ಟಿ. ಎಸ್. ನಾಗರತ್ನ ಅವರ 'ಅಸಾವರೀ' ಲೇಖನ ಕೂಡ ಚೆನ್ನಾಗಿದೆ. ಚಂದ್ರಕಾಂತ ಕುಸನೂರರ 'ಕಲೆ-ಆಧುನಿಕ ಸಂದರ್ಭ' ಒಳನೋಟಗಳಿಂದ ಕೂಡಿದೆ, ಮಾಹಿತಿಪೂರ್ಣವಾಗಿದೆ.

– ಡಾ. ಎಲ್. ಸಿ. ಸುಮಿತ್ರಾ, ತೀರ್ಥಹಳ್ಳಿ

೩. ಸಂಕಲನ ತುಂಬಾ ಉತ್ತಮ ಪತ್ರಿಕೆ. ಅದಕ್ಕೆ ಸಹೃದಯೀ ಸದಭಿರುಚಿಯ ಓದುಗರೂ ಇದ್ದಾರೆ. ಸಂಕಲನವನ್ನು ನೀವು ಎಂದೂ ನಿಲ್ಲಿಸಬಾರದು.

– ಸದಾನಂದ ಸುವರ್ಣ, ಮಂಗಳೂರು

೪. ಸಂಕಲನ-೩೩ ರ ಒನ್ನೇಪುಟದಲ್ಲಿನ ಅಂದಿನ ಮೋಡಕಾ ಬಜಾರದ ವಿವರಣೆ, ಧಾರವಾಡ ಭಾಷೆಯ ಸೊಗಡು, ಸಹಜ ನೇರ ಮಾತುಗಳು ಮನಮುಟ್ಟುವಂತಿವೆ, ಖುಶಿ ಕೊಡುತ್ತವೆ. ಜನರಿಂದ ಮರೆಯಾಗುತ್ತಿರುವ ಕೆಲವು ಸುಂದರ ಕನ್ನಡ ಪದಗಳು ಇನ್ನೂ ಕೆಲಕಾಲ ಜನರಲ್ಲಿ ಉಳಿಯಲು ಸಹಕಾರಿಯಾಗಿವೆ. ನಾಲ್ಕು ದಶಕಗಳ ಹಿಂದೆ ಆ ದೊಡ್ಡ ಸಾಹಿತಿಗಳಿಗೆ ಪ್ರೀತಿ ಗೌರವಾದರಗಳಿಂದ ಅವರ ಹೆಸರು ಬರೆದುಕೊಟ್ಟಿದ್ದ ತಮ್ಮ ಪ್ರಥಮ ಕವನಸಂಗ್ರಹ ಇತ್ತೀಚೆಗೆ ರದ್ದಿ ಅಂಗಡಿ ಮೂಲಕ ಪುನಃ ತಮ್ಮ ಕೈಸೇರಿದಾಗ ತಾವು ಭಾಳ ಖುಶಿ ಪಟ್ಟಿದ್ದು ಸಕಾರಾತ್ಮಕ ಗುಣದ ದ್ಯೋತಕವಾಗಿವೆ. ತಾವು ಆ ಪುಸ್ತಕವನ್ನು ಕೊಂಡು ಸಂಬಂಧಿಸಿದವರ ಮರ್ಯಾದೆ ಉಳಿಸಿದ್ದೀರಿ. ಈ ಒನ್ನೇಪುಟ ಕಣ್ಣು ತೆರೆಸುವ ಕೆಲವು ಪರೋಕ್ಷ ಸಂದೇಶಗಳನ್ನು ನೀಡಿದೆ. ಪ್ರಸನ್ನ ಅವರ 'ತೇಜಸ್ವಿ : ಹಕ್ಕಿ : ಶ್ರದ್ಧೆ' ಲೇಖನ ಸಮಯೋಚಿತವಾಗಿದೆ.

– ಜಿ. ಹೆಚ್ ಪ್ರಸಾದ್, ಹಾಸನ

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

"ಯಾಕ್ರೀ, ಒಂದ್ ಕಾಲ ಕುಂಟಿದ್ಹಂಗ ಮಾಡಾಕ್ಹತ್ತೀರಿ? ಎಳವಳದ ಇಡಾಕ್ಹತ್ತೀರೆಲ್ಲ?"– ಅಂತ ಕೇಳಿದ ಗದುಗಿನ ವಸ್ತ್ರದ ಚಂದ್ರೂ. ಅವನ ದನಿಯೊಳಗ ಕಳಕಳಿ ತುಂಬಿತ್ತು.

'ಹೌದ ಮಾರಾಯಾ, ಬಲಗಾಲ ಭಾಳ ನೂವ ಆಗೇತಿ, ಕಾಲ್ಮರಿ ನಟ್ಟಾವು' ಅಂದೆ. "ಮತ್ತ ಹೊಸಾವು ತೊಗೊಂಡ್ರೆನ? ಮೂರ ತಿಂಗಳ ಹಿಂದ ನಾನೂ ನೀವು ಕೂಡೇ ಖರೀದಿ ಮಾಡಿದ್ವಿ..." 'ಹೌದು. ಅವುನ್ನ ಯಾರೋ ಕದ್ದುಕೊಂಡರು. ಹ್ಯಾದ ವಾರ ನಮ್ಮ ಮನಿ ಹತ್ರದ ದವಾಖಾನಿಗೆ ತೋರಿಸಿಗೊಳ್ಳಾಕ ಹೋಗಿದ್ದೆ. ಅಲ್ಲಿ ಛತ್ರಿ, ಚಪ್ಪಲ್ಲು ಹೊರಗ್‌ಅ ಬಿಟ್ಟು ಒಳಗ ಹೋಗಬೇಕು. ಅವತ್ತ ಡಾಕ್ಟರಿಗೆ ತೋರಿಸಿಕೊಂಡೆ. ಮೂರ ದಿವಸದ ಔಷಧ ಕೊಟ್ರು. ಖುಶೀಲೆ ನಕ್ಕೊಂತ ಹೊರಗ ಬಂದ್ರ, ಅಳಕೊಂತ ಮನಿಗೆ ಹೋಗೂಹಂಗ ಆಗಿತ್ತು' ಅಂದೆ. "ಯಾರೋ ಚಪಲ ಕಳ್ಳರು ಚಪ್ಪಲ್ಲಗಳ್ಳರಾಗಿದ್ದರು ಅಂದಂಗಾತು." 'ಹೌದು, ಇನ್ನೇನ ಮಾಡೂದು...' ಅನ್ನಾಕ್ಹತ್ತಿದ್ದೆ, ಚಂದ್ರೂ ಹೇಳಿದ, "ಮುಂದಿನ ಸರ್ತೇಕ ಆ ದವಾಖಾನಿಗೆ ಹ್ಯಾದಾಗ ಕಾಲಾನ್ನು ಕಯ್ಯಾಗ ಹಿಡಕೊಂಡು, ಅಂದ್ರ ಕಯ್ಯಾಗಿನ ಚೀಲದಾಗ ಇಟಗೊಂಡು ಒಳಗ ಹೋಗ್ರಿ. ಅವನ್ನ ಡಾಕ್ಟರಿಗೆ ತೋರಿಸಿದ್ಹಂಗ ಆಗಬಾರದು ಅಷ್ಟ್‌ಅ. ಸ್ವಲ್ಪ ಹುಶಾರಿಲೆ ಇರ್ರಿ... ಆತು" ಅಂದ.

'ಹೌದ ಮಾರಾಯಾ, ಅವತ್ತಿನಿಂದ, ಇಂಥಾ ಕಡೆ ಹ್ಯಾದಲ್ಲೆಲ್ಲ ತಲಿತುಂಬ ಚಪ್ಪಲ್ಲ್‌ಅ ತುಂಬಿರತಾವು' ಅಂತ ನೊಂದು ಹೇಳಿದೆ. "ಛೆ ಛೆ, ನಿಮ್ಮ ತಲಿ ಹಿಂಗ ಆಗಬಾರದಾಗಿತ್ತು... ಮತ್ತ ಮುಂದ ಏನ ಮಾಡಿದಿರಿ? ಹೊಸಾ ಚಪ್ಪಲ್ಲ ತೊಗೊಂಡಿರ್ಯಾ?" ಅಂತ ಕೇಳಿದ.

'ಹೌದು... ಅನಿವಾರ್ಯ ಆತು' ಅಂದೆ. "ಛೆ, ಅಲ್ಲೇ ನೀವು ತಪ್ಪಿದ್ದು" ಅಂದ. 'ಯಾಕ?' ಅಂತ ಕೇಳಿದೆ. "ನಿಮ್ಮ ಚಪ್ಪಲ್ಲ ಒಯ್ದಾವ್ನ ಬರಗಾಲಲೆ ಅಂತೂ ಬಂದಿರಾಕಿಲ್ಲ. ತನ್ನೂ ಹಳೇ ಹರಕಾ ಅಲ್ಲಿ ಬಿಟ್ಟು, ನಿಮ್ಮುವು ಭೊಲೋವು ಒಂದು ಜೋಡಿ ಹಾಕ್ಕೊಂಡು ಹೋಗಿರತಾನ. ಅಂಥಾ ಹೊತ್ತಿನ್ಯಾಗ ಅವ್ನ ತೋರಿಸಿದ ದಾರೀನ್‌ಅ ನೀವೂ ಅನುಸರಿಸಬೇಕು..." 'ಏನ ಹಂಗಂದ್ರ...?' ಕೇಳಿದೆ. "ಆಗ ಅಲ್ಲಿದ್ದ ಇನ್ನೊಂದು ಭೊಲೋ ಜೋಡಿಗೆ ನೀವು ನ್ಯಾಯಾ ಸಲ್ಲಿಸಬೇಕು. ಭಾಳ ಚಿಂತಿ ಮಾಡಬಾರದು, ಸುಮ್ಮನ ಹಾಕ್ಕೊಂಡು ನಡದ ಬಿಡಬೇಕ್ರೆಪಾ. ಒಟ್ಟಿನ ಮ್ಯಾಲ ಕಡೀಕ ಯಾರೂ ಬರಗಾಲಲೆ ಹೋಗೂದೇ ಇಲ್ಲ. ಒನ್ನೇದಾವ್ನ ಬಿಟ್ಟಿದ್ದು ಕಡೀಕಿನ್ಯಾವ್ನಗ ಜೋಡ ಆಕ್ಕತಿ" ಅಂತ ನಕ್ಕು ಮತ್ತ ಜೋಡಿಸಿದ, "ನನಗ ಇದೆಲ್ಲ ಗೊತ್ತ ಅಯ್ತಿ. ಮಠಕ್ಕ, ಗುಡಿಗೆ ಹ್ಯಾದಾಗೆಲ್ಲ ಇಂಥಾ ಅನುಭವ ಆಗ್ತಿರತಾವು."

ಈ ಚಂದ್ರೂನ ಕೂಡ ಯಾವಾಗ ಮಾತಾಡಿದರೂ ಅವನ ಮಾತಿನ ಸಹಜ ಓಘದೊಳಗ ಸಾಹಿತ್ಯ, ಜೀವನ, ಕಲಾವಿದರು ಎಲ್ಲಾದರ ಬಗೆಗೂ ಚಾಷ್ಟಿ ಮಾಡಕೊಂತ, ನಿರರ್ಗಳವಾಗಿ ಒಂದು ಸಹಜ ಸತ್ಯವನ್ನ ಒಪ್ಪಲೇಬೇಕು ಅನ್ನೂಹಂಗ ತರ್ಕಸಹಿತ ಎದುರಿಗೆ ಇಟ್ಟಬಿಡತಾನ.

ಈಗ ಮತ್ತ ನನ್ನ ಹೊಸಾ ಚಪ್ಪಲ್ಲ ಮ್ಯಾಲ ಕಣ್ಣಿಟ್ಟು, "ಇವು ಕಚ್ಯಾವು ಹೌದಲ್ರಿ?" ಹೌದಂತ ಗೋಣ ಹಾಕಿದೆ. "ಮತ್ತ ಈ ವಯಸ್ಸಿನ್ಯಾಗ ಇವುನ್ನ ಬಿಟ್ಟು ಬ್ಯಾರೆ ಏನ ಕಚ್ಚಬೇಕು ನಿಮ್ಮನ್ನ?" ಅಂತ ಇರಬೇಕಾಗಿದ್ದ ತನ್ನ ಮೀಸ್ಯಾಗ ನಕ್ಕ, "...ಒಮ್ಮೊಮ್ಮೆ ಹೊಸಾ ಕಾಲ್ಮರಿ ಹೊಂದಕಿ ಆಗೂದು ಭಾಳ ತ್ರಾಸಾಕ್ಕತಿ. ಕೆಲವು ಸರ್ತೆ ತಿಂಗಳಾನುಗಟ್ಲೆ ತ್ರಾಸ ಮಾಡ್ತಾವು. ಕಾಲು ಬಾತ ಬಿಡತಾವು... ನೋವಿಗೆ ಗುಳಿಗಿ ಪಳಗೀ ತೊಗೊಂಡಿರಿಲ್ಲೊ ಮತ್ತ?"

'ಅದೂ ನಡದಯ್ತಿ. ಆ ಡಾಕ್ಟರಿಗೆ ಹೇಳೀ ಗುಳಗೀ ಬರಸಿಕೊಂಡೆ. ಈ ಸರ್ತೆ ಹ್ವಾದಾಗ, ಈ ಹೊಸಾ ಚಪ್ಪಲ್ಲ ದವಾಖಾನೀ ಹೊರಗ ದೂರ ಕಂಟ್ಯಾಗ ಮರೀಗೆ ಇಟ್ಟು ಹೋಗಿದ್ದೆ. ಮುಂದಿನ ಸರ್ತೆ ನೀ ಹೇಳಿದ್ಹಂಗ ಚೀಲದಾಗ ಇಟಗೊಂಡು ಹೋಗ್ತೇನಿ.'

"ಇದೆಲ್ಲಾ ಹಿಂಗ ಯಾಕ ಆಕ್ಕತಿ ಗೊತ್ತೇನ್ರಿ...? ಮೊದಲಿನ ಕಾಲದಾಗ ನಾವು ನಮ್ಮ ನಮ್ಮ ಕಾಲಿನ ಅಳತಿ ಕೊಡತಿದ್ವಿ, ನಮಗ ಬೇಕಾದಂಥ ಮೆಟ್ಟು, ಚಪ್ಪಲ್ಲು, ಬೂಟು ಹೊಲಿಸಿಗೋತಿದ್ವಿ. ಅವು ಕಾಲಿನ ಅಳತೀ ಪ್ರಕಾರ ಇರತಿದ್ದುವು. ಅಳತೀ ತೊಗೊಂಡಾವ್ನ ಕಾಲಿಗೆ ಹಾಕಿ ನೋಡಿ ಹೊಂದಿಸಿ ಕೊಡತಿದ್ದ. ಆಗ ಎಲ್ಲಾ ಬರೊಬ್ಬರ ಆಕ್ಕಿತ್ತು... ಈಗ ಕಾಲು ಮಾತ್ರ ಹಂಗ್ಅ ಅದಾವು, ಆದರ ಕಾಲ ಭಾಳ ಬದಲಿ ಆಗೇತಿ. ಅಳತೀ ಕೊಟ್ಟು ಹೊಲಿಸಿಕೊಳ್ಳಾಕ ನಮಗ ವ್ಯಾಳ್ಯೆ ಇಲ್ಲ, ಅಳತೀ ತೊಗೊಂಡು ಕಾಲಿಗೆ ತಕ್ಕಂಗ ಕಾಳಜೀಲೆ ಹೊಲದು ಹೊಂದಸಾಕ ಹೊಲಿಯುವವರಿಗೆ ವ್ಯವಧಾನಿಲ್ಲ. ಒಟ್ಟಿನ ಮ್ಯಾಲ ಸಹಜ ಇರಬೇಕು, ಸಮಾಧಾನ ಸಿಗಬೇಕು, ಛೊಲೋ ಆಗಬೇಕು ಅಂತ ಇಬ್ಬರಿಗೂ ಮನಸಿಲ್ಲ. ಹಿಂಗಾಗಿ ಕಾಲದ ಕೂಡ ಕಾಲೂ ಕೆಟ್ಟುವು. ಈಗ ನಮ್ಮ ಕಾಲಿನ ಸರಿಯಾದ ಅಳತಿಯ ಕಾಲ್ಮರಿ ಸಿಗೂದೇ ಇಲ್ಲ. ಇದ್ದ ರೆಡಿ ಚಪ್ಪಲ್ಲಿನ ಅಳತಿಗೆ ನಮ್ಮ ಕಾಲುಗೊಳನ್ನ ಹೊಂದಿಸಿಗೋಬೇಕು. ಪ್ರತಿಯೊಬ್ಬರ ಕಾಲೂ ಒಂದೊಂದು ಥರ. ಅಷ್ಟ್ಅ ಅಲ್ಲ, ಒಬ್ಬನ್ನುವ್ಅ ಎರಡೂ ಕಾಲು ಒಂದ್ಅ ನಮೂನಿ ಅಥವಾ ಒಂದ್ಅ ಅಳತಿ ಇರೂದುಲ್ಲ. ಸಣ್ಣ ದೊಡ್ಡ, ಸೊಟ್ಟ ಸೀದಾ, ದಪ್ಪ ಸೊಳಕ್ಕಾ ಎಲ್ಲಾ ಥರಾ ಇರತಾವು. ಎರಡೂ ಕಣ್ಣು, ಕೈ, ಕಪಾಳ ಸಹ ಸಮನಾಗಿರೂದುಲ್ಲ. ಅಂಥಾದ್ದರಾಗ ಅನಿವಾರ್ಯವಾಗಿ ರೆಡಿಮೇಡ್ ಅಂತ ಇರ್ತಾವಲ್ಲ ಅಂಥಾ ಅಂಗಡ್ಯಾಗ ಹೋಗಿ ನಮ್ಮನ್ನ ನಾವು ಮೇಡ್ ರೆಡಿ ಮಾಡಿ, ಅಲ್ಲಿ ಸರಿ ಇದ್ದ ಇಡೀ ಜೋಡಿ ಕೂಡ ನಮ್ಮ ಎತ್ತೆತ್ತರ ಕಾಲ್ಗಳನ್ನು ರೆಡಿ ಮಾಡಕೋಬೇಕಾಕ್ಕತಿ... ಈಗ ಎಲ್ಲಾನೂ ರೆಡಿಮೇಡ್. ಚಪ್ಪಲ್ಲು ಬೂಟು ಅಂಗಿ ಚಣ್ಣ ಪಾಯಿಜಾಮ ಪ್ಯಾಂಟು ಕೋಟು ಪಾತ್ರೆ ಪಡಗ ತಿಂಡಿ ತಿನಿಸು ಮಿಠಾಯಿ ಊಟ ನೀರು ಕುಡಿತ ಕೂಟಾ ಎಲ್ಲಾ ರೆಡಿ ರೆಡಿ ರೆಡಿ ಮೇಡ್... ರೆಡಿಮೇಡ್ ಇದ್ದಿದ್ದು ನಮಗ ಹೊಂದಿಕೊಳ್ಳೂದುಲ್ಲ; ರೆಡಿಮೇಡಕ್ಕ ಹೊಂದಿಸಿಕೊಳ್ಳಾಕ ನಾವು ರೆಡಿ ಆಗಾಕ ಆಗೂದುಲ್ಲ, ಆದರೂ ಆಗಬೇಕಾಕ್ಕತಿ. ಈಗ ನೀವು ಈ ಚಪ್ಪಲ್ಲ ತೊಗೊಂಡೀರಿ... ಎಡಗಾಲು ಏನೋ ಆಗಿ ಹೊಂದೇತಿ. ಬಲಗಾಲಿಗೆ ಹೊಂದಾಣಿಕಿ ಆಗಲಿಲ್ಲ. ರೆಡಿ ಚಪ್ಪಲ್ಲು ತುಂಟಾಟ ಮಾಡಿತು. ಆಗ ನಿಮ್ಮ ಕುಂಟಾಟ ಸುರು ಆತು. ಅಂಥಾ ಹೊತ್ತಿನ್ಯಾಗ ನಿಮ್ಮ ಕಾಲು ಆ ಚಪ್ಪಲ್ಲಿಗೆ ಹೊಂದಬೇಕು, ಇಲ್ಲಾ... ಇವನ್ನ ಒಗದು ಮತ್ತ ಬ್ಯಾರೆ ಕಂಪನಿಯ ಇನ್ನೊಂದು ರೆಡಿಮೇಡಕ್ಕ ಶರಣು ಹೋಗಬೇಕು. ಅಲ್ಲಿನೂ ಹೊಂದಿಕಿ ಆಗದಿದ್ದರ ಇನ್ನೊಂದು ವಾರದಾಗ ಎತ್ತಾರ ಒಂದ ಕಡೆ ಹೊಂದಿಕಿ ಆಗಬಹುದು... ಹೋಗ್ಲಿ ಬಿಡ್ರಿ. ಈಗ ಮೊದಲ ಒಂದು ರೆಡ್ ರೆಡ್ ರೆಡ್ ರೆಡಿ ರೆಡಿ ಮೇಡ್ ಚಾ ಕುಡಿಯೂಣು... ಆಮ್ಯಾಲ..."

'ಆಮ್ಯಾಲ?'

"ಆಮ್ಯಾಲ ನನ್ನ ಬಸ್ ನಾ ಹತ್ತತೇನಿ. ನಿಮ್ಮ ಬಸ್ ನೀವು ಹತ್ತರಿ."

ಈ ಚಂದ್ರೂನ ಕೂಡ ಮಾತಾಡೂದಂದ್ರ ಸಂತಿ ಪ್ಯಾಟಿ ಮನಿ ಮಠ ಸಾಲಿ ಪಾಲಿ ಎಲ್ಲಾ ಕಡೆ ಸುತ್ತಾಡಿ ಬಂದ್ಹಂಗ. ಒಮ್ಮೊಮ್ಮೆ ಆಧ್ಯಾತ್ಮ ಮಾತಾಡತಾನ, ಒಮ್ಮೊಮ್ಮೆ ವ್ಯವಹಾರ ಹೇಳತಾನ, ಒಮ್ಮೊಮ್ಮೆ ದಿಗಿಲಗೊಳಿಸತಾನ. ಚಂದ್ರೂನ ಸಂಗ ಅಂದರ ಚಂದ್ರನ ಶೀತರಥದಾಗ ಕುತಗೊಂಡು, ಸೂರ್ಯನ ಶೂರಲೋಕದ ಕಡೆಗೆ ಪ್ರಯಾಣ ಮಾಡಿದ್ಹಂಗ, ಅಸಂಖ್ಯ ಚಿಕ್ಕಿ ತಾರೆ ಗ್ರಹಗಳನ್ನ ಕಂಡುಬಂದ್ಹಂಗ, ಒಂದು ವಿಶಿಷ್ಟ ಅನುಭವ. ಚಂದ್ರನ ಒಂದೊಂದು ಮಾತು ಒಂದೊಂದು ದಿನಕ್ಕ ವಿಚಾರಾಹಾರ ಸಾಮಗ್ರಿ.

SANKALANA: RNI No. KARKAN 14160/10/1/2002-TC

ಸಂಕಲನ : ಜುಲಾಯಿ + ಆಗಸ್ಟ್ ೨೦೦೭
ಸಂಪುಟ ೬, ಸಂಚಿಕೆ ೪
ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ವಿಜಯಾ ಶ್ರೀಧರ್ — ಅಶೋಕ ಶೆಟ್ಟರ್
ಸಿ. ಪಿ. ಕೆ. — ಶಂಕರಗೌಡ ಎಂ. ಸಾತ್ಮಾರ
ಎಂ. ಜಿ. ಹೆಗಡೆ — ಸುಕನ್ಯಾ ಮಾರುತಿ
ಮಾಧವ ಕುಲಕರ್ಣಿ — ನರೇಂದ್ರ ಪೈ
ಶಿವರಾಮ ಕಾರಗಡಿ — ಬಿ. ಎ. ಸನದಿ
ರೇಖಾ ಬನ್ನಾಡಿ — ಷ. ಶೆಟ್ಟರ್
ಎಸ್. ಎಚ್. ತಳವಾರ — ವೆಂಕಟೇಶ ಕುಲಕರಣಿ

•

ಕೃಷ್ಣಮೂರ್ತಿ ಕಲುಮಂಗಿ
ಈಶ್ವರಚಂದ್ರ ಚಿಂತಾಮಣಿ
ಪ್ರಕಾಶ ಭಟ್
ಸುಮಿತ್ರಾ ಹಲವಾಯಿ
ದೇಶಪಾಂಡೆ ಸುಬ್ಬರಾಯ
ಬಸವರಾಜ ವಕ್ಕುಂದ

•

ಎಲ್. ವಿ. ಶಾಂತಕುಮಾರಿ
ಎಲ್. ಸಿ. ಸುಮಿತ್ರಾ
ಸದಾನಂದ ಸುವರ್ಣ
ಜಿ. ಹೆಚ್ ಪ್ರಸಾದ್

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪